(MR. SPEAKER)

(9) Schemes under III Five-Year Plan—Mysore State *vis-a-vis* Government of India.
(10) A strategy of Fourth Five-Year Plan.
(11) Statistical abstract of Mysore State.
(12) Mysore in Maps.
(13) Atlas of Resources—A.T.A. Learmonth—Vol. I and II.
(14) Legislative Assembly Debates for the past four years.
(15) Administration Reports on the working of the Departments like Road Transport, Education, Industrial concerns, etc.,
(16) Library map.

2-00 P.M.

Public Finance needs, sources and utilisation; about 23 books relating to Budget, Finance and all that have been kept ready and Members will kindly help themselves by studying them if they so desire. I have had discussion with the whips of parties and I got a note from a particular Member, Sri R. N. Lakshmipathi. He sends his slip. In what capacity he has sent it, I am not able to understand. Which party he represents and who appointed him as whip I do not know. It was represented to me that there will be some sort of co-ordination. I am mentioning this for the purpose of co-ordination and not for the purpose of finding fault. Mr. Shetty has included one of the names for to-day. So, I am relying upon that list to some extent so that if there is anything, members may co-ordinate among themselves. Not that the list is final and binding. I am only trying to minimise the expenditure of time needlessly. Sri Sivappa may open the Debate.

---

## Member's Representation.

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ನಾನು ಒಂದು ಪತ್ರವನ್ನು ತಮಗೆ ಬರೆದಿದ್ದೇನೆ. ಶ್ರೀಮಾನ್ ಕಂಠಿಯವರ ಕಾಲದಿಂದಲೂ ಆ ಸೀಟಿನಲ್ಲಿಯೇ ಕುಳಿತು ಕೊಂಡಿದ್ದೆ. ನಾನು ಅಲ್ಲಿ ಕುಳಿತುಕೊಳ್ಳುತ್ತಾ ಇರುವುದು ತಮಗೆ ಗೊತ್ತಿದೆ. ಅನೇಕ ಸಾರಿ ಅದೇ ಸೀಟಿನಿಂದ ಭಾಷಣ ಮಾಡಿದ್ದೇನೆ. 1958ನೇ ಇಸವಿಯಿಂದಲೂ ಅಲ್ಲೇ ಕುಳಿತಿದ್ದೆ. ರೆಕಾರ್ಡ್ ನೋಡಿದರೆ ಗೊತ್ತಾಗುತ್ತದೆ ನನಗೆ ಮೊದಲು ಇದ್ದ ಸೀಟು ಕೊಡಿಸಿ ಕೊಡಬೇಕು.

Mr. SPEAKER.—I will carefully consider it. In the meanwhile the leader of the party also will kindly help me in that matter.

---

# BUDGET ESTIMATES FOR 1966-67

## General Discussion

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, 1966-67 ನೇ ಇಸವಿಯ ಹಣಕಾಸಿನ ಮುನ್ಸೂಚನಾ ಪತ್ರವನ್ನು ಹಣಕಾಸಿನ ಸಚಿವರು ನಮ್ಮ ಮುಂದೆ ಇಟ್ಟಿದ್ದಾರೆ. ಹಣಕಾಸಿನ ಸಚಿವರು ಇಟ್ಟಿರತಕ್ಕಂಥ ಬಡ್ಜೆಟ್ಟಿನ ಬಗ್ಗೆ ಒಂದೇ ವಾಕ್ಯದಲ್ಲಿ ಹೇಳುವುದಾದರೆ, ಈ

ಹಣಕಾಸಿನ ಬಡ್ಜೆಟ್ಟು ವಿವೇಕರಹಿತವಾದ, ದಕ್ಷವಲ್ಲದ ಲಂಚಗುಳಿತನದ, ಹಿಡಿತವಿಲ್ಲದ, ಲಂಗು ಲಗಾಮು ಇಲ್ಲದೆ ದಿಕ್ಕು ತಪ್ಪಿ ಅಲೆದಾಡುತ್ತಿರುವ ದಿವಾಳಿತನದ ದಿಕ್ಕಿನಲ್ಲಿ ಹೋಗುತ್ತಿರುವ ದೃಶ್ಯದ ಒಂದು ಬಡ್ಜೆಟ್ಟು ಆಗಿದೆ. ಅರ್ಥಸಚಿವರು ಸಭೆಯ ಮುಂದೆ ಇಟ್ಟಿರತಕ್ಕ ಅವರ ಮುನ್ಸೂಚನಾ ಪತ್ರ ಒಂದು ಕನ್‌ಫೆಷನ್ ಸ್ಟೇಟ್‌ಮೆಂಟ್ ಅನ್ನತಕ್ಕ ರೀತಿಯಲ್ಲಿದೆ. ಈ ಸರ್ಕಾರ ತಪ್ಪುಗಳ ಪರಂಪರೆಯನ್ನು ಅವರು ಒಪ್ಪಿಕೊಂಡು ಬಂದಿದ್ದಾರೆ. ಈಗ ಈ ಸಭೆಗೆ ಇರತಕ್ಕದ್ದು ಒಂದೇ ಒಂದು ದಾರಿ. ಅವರನ್ನು ಇಂಪೀಚ್ ಮಾಡತಕ್ಕದ್ದು, ಉಳಿದಿರತಕ್ಕಂಥ ಒಂದೇ ಮಾರ್ಗ ಎಂದು ನನ್ನ ಭಾವನೆ.

1966-67ನೇ ಇಸವಿಯಲ್ಲಿ ಈ ರಾಜ್ಯದ ಆದಾಯವನ್ನು 156·53 ಕೋಟಿ ರೂಪಾಯಿ ಎಂದು ತೋರಿಸಿ, ಖರ್ಚನ್ನು 154 ಕೋಟಿ ತೋರಿಸಿ, 2·53 ಕೋಟಿ ರೂಪಾಯಿ ಉಳಿತಾಯದ ಬಡ್ಜೆಟ್ಟನ್ನು ಸಭೆಯ ಮುಂದೆ ಮಂಡನೆ ಮಾಡಿದ್ದಾರೆ. ಈ ಅಂಕಿ ಅಂಶ ನೋಡತಕ್ಕಂಥವರಿಗೆ ಏನು, ನಮ್ಮ ಹಣಕಾಸಿನ ಪರಿಸ್ಥಿತಿ ನೋಡುವುದಕ್ಕೆ ಬಹಳ ಶೃಂಗಾರವಾಗಿದೆ ಎನ್ನತಕ್ಕಂಥಾ ರೀತಿಯಲ್ಲಿ ಮಾತ್ರ ಅದು ತೋರಿಸುತ್ತದೆಯೇ ಹೊರತು ಒಳಗಡೆ ಹೊಕ್ಕು ನೋಡಿದರೆ ಪರಿಸ್ಥಿತಿ ಎಂತಹ ಕೆಟ್ಟ ಮಟ್ಟ ವನ್ನು ಮುಟ್ಟಿದೆ ಎಂದು ಗೊತ್ತಾಗುತ್ತದೆ. ಅದನ್ನು ನಾನು ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸಭಾಪತಿಯವರೇ, ನಾಲ್ಕನೇ ಫೈನಾನ್ಸ್ ಕಮೀಷನ್ನಿನವರು ಕೊಟ್ಟಂಥ ವರದಿಯಿಂದ ಈ ದೇಶ ಅಪಾಯದಿಂದ ಪಾರಾಗಿದೆ ಎಂದು ತಿಳಿಯಬಹುದು, ಇಷ್ಟು ಮಾತ್ರ ಹೇಳಬಲ್ಲೆ. 156 ಕೋಟಿ ರೂಪಾಯಿ ಆದಾಯವನ್ನು ತೋರಿಸತಕ್ಕ ಬಡ್ಜೆಟ್ಟಿನಲ್ಲಿ ಫೈನಾನ್ಸ್ ಕಮೀಷನ್ ಒಂದ ರಿಂದಲೇ ಸುಮಾರು 18 ಕೋಟಿ ರೂಪಾಯಿ ಹೋದ ವರ್ಷಕ್ಕಿಂತ ಜಾಸ್ತಿ ಬಂದಿದೆ. ಇದುವರೆಗೆ 21 ಕೋಟಿ ರೂಪಾಯಿ ಕೊಡುತ್ತಾ ಇದ್ದಂತೆ ಅಲ್ಲ, ಮುಂದೆ 39 ಕೋಟಿ ರೂಪಾಯಿಗಳನ್ನು ಫೈನಾನ್ಸ್ ಕಮೀಷನ್ ವರದಿಯಿಂದಾಗಿ ವರ್ಷಂಪ್ರತಿ ಬರುತ್ತಾ ಇರುವುದರಿಂದ ಸುಮಾರು 18 ಕೋಟಿ ರೂಪಾಯಿ ಮೊದಲಿಗಿಂತಲೂ ಜಾಸ್ತಿ ಬಂದಿದೆ. 6-7 ಕೋಟಿ ರೂಪಾಯಿ ತೆರಿಗೆಯಿಂದ ಬಂದಿದೆ ಎಂದು ಸಚಿವರು ತಿಳಿಸಿದ್ದಾರೆ. ಹೀಗೆ ಕೈಗೊಂಡ ಕೆಲವು ಕ್ರಮಗಳಿಂದ 156 ಕೋಟಿ ರೂಪಾಯಿ ಆದಾಯವನ್ನು ತೋರಿಸಿದ್ದಾರೆ. ಅಷ್ಟಾದರೂ ಕೂಡ ಬಡ್ಜೆಟ್ಟನ್ನು ಅನುಮೋದಿಸಿರತಕ್ಕ ಸರ್ಕಾರ ಓವರ್ ಡ್ರಾಫ್ಟ್ 45 ಕೋಟಿ ರೂಪಾಯಿನಷ್ಟು ಈ ವರ್ಷದ ಕೊನೆಯಲ್ಲಿ ಇತ್ತು ಎಂದು ತೋರಿಸಿದ್ದಾರೆ. ಈ ಓವರ್ ಡ್ರಾಫ್ಟ್ 45 ಕೋಟಿ ಹೇಗೆ ಬಂತು ಎನ್ನತಕ್ಕಂಥಾದ್ದು ಕೂಡ ಈ ಸಭೆಯ ಒಳಗೂ ಹೊರಗೂ ಈಗಾಗಲೇ ಹಣಕಾಸಿನ ಸಚಿವರು ಮತ್ತು ಮುಖ್ಯ ಮಂತ್ರಿಗಳು ಅನೇಕ ಸಾರಿ ಪ್ರಸ್ತಾಪ ಮಾಡಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವೇಳೆಗೆ ನಾವು ಕೇಂದ್ರ ಸರ್ಕಾರಕ್ಕೆ ಸಾಲ ತೀರ್ವೆಯ ಬಗ್ಗೆ ಕೊಡತಕ್ಕ ಮೊಬಲಗು 52 ಕೋಟಿ ರೂಪಾಯಿ ಆಗಿದೆ. ಇದು 25 ಕೋಟಿ ಆಗಬಹುದು ಎನ್ನುವ ಭಾವನೆ ತಪ್ಪು. ಏಕಾಏಕಿ ಇದು 52 ಕೋಟಿ ಎಂದಾಗಿರುವುದರಿಂದ ಹಣಕಾಸಿನ ತಕ್ಕಡಿ ಏರಿಳಿತ ಆಗಿದೆ ಎಂದು ಈಗಾಗಲೇ ಹೇಳಿದ್ದೇನೆ. ಇವೊತ್ತು ಓವರ್ ಡ್ರಾಫ್ಟ್ 45 ಕೋಟಿ ಇರತಕ್ಕದ್ದು ಯಾವ ರೀತಿ ತೀರಿಸಬೇಕು ಅನ್ನತಕ್ಕಂಥಾದ್ದು ಅವರು ಹೇಳಿದ್ದಾರೆ. ಅನೇಕ ವರ್ಷದಿಂದ ಇದ್ದಂಥ ಸೆಕ್ಯೂರಿಟಿ ಡಿಪಾಜಿಟ್ 20 ಕೋಟಿ ರೂಪಾಯಿ ಮಾಡಬೇಕೆಂದು ಸೂಚಿಸಿದ್ದಾರೆ. ಇನ್ನು ಉಳಿದಿರತಕ್ಕ 25 ಕೋಟಿ ಓವರ್‌ಡ್ರಾಫ್ಟ್ ಹೇಗೆ ತೀರಿಸ ಬೇಕೆಂದು ನಮ್ಮ ಹಣಕಾಸಿನ ಸಚಿವರು ತಮ್ಮ ಭಾಷಣದ 9-10ನೆಯ ಪುಟದಲ್ಲಿ ಹೇಳಿದ್ದಾರೆ. ಉಳಿದ ಮೊಬಲಗನ್ನು ತೀರಿಸಬೇಕಾದರೆ, ಕೇಂದ್ರ ಸರ್ಕಾರದವರನ್ನು ಸಾಲ ಕೇಳತಕ್ಕದ್ದು, ಮತ್ತು ಮುಂದಿನ ಬಡ್ಜೆಟ್ಟಿನಲ್ಲಿ 6 ಕೋಟಿ ರೂಪಾಯಿಯನ್ನು ಸಾಲ ತೀರ್ವೆ ಬಗ್ಗೆ ಪ್ರೊವೈಡ್ ಮಾಡಿದ್ದಾರೆ. ಅಷ್ಟು ಆದಮೇಲೆ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಎಷ್ಟುಮಟ್ಟಿಗೆ ಇದೆ ಎನ್ನುವುದನ್ನು ನಾವು ಸೂಕ್ಷ್ಮವಾಗಿ ವಿಚಾರ ಮಾಡಬೇಕಾಗಿದೆ. ಇವೊತ್ತು ನಮ್ಮ ದೇಶಕ್ಕೆ 1966-67 ನೇ ಮಾರ್ಚಿ ತಿಂಗಳ ಹೊತ್ತಿಗೆ ನಮ್ಮ ದೇಶದ ಸಾಲ ಸುಮಾರು 296 ಕೋಟಿ ರೂಪಾಯಿಗಳು ಆಗುತ್ತಾ ಇದೆ. ಯಾವ ಸಾಲ ಸುಮಾರು 1961 ನೇ ಇಸವಿಯಲ್ಲಿ 156 ಕೋಟಿ ರೂಪಾಯಿ ಇತ್ತೋ, ಅದು 1966-67ರ ಹೊತ್ತಿಗೆ ಸುಮಾರು 300 ಕೋಟಿ ರೂಪಾಯಿಗಳಷ್ಟು ಏರುತ್ತಾ ಇದೆ. ಬಡ್ಡಿಯೂ ಕೂಡ ಅಷ್ಟೇ ಏರುತ್ತಾ ಇದೆ. ಸಾಲ ತೀರ್ವೆಗಾಗಿ ಸಾಲ ತೆಗೆದುಕೊಂಡು ಹಣದ ಬಡ್ಡಿ ಕೊಡು ವುದು 2-3 ವರ್ಷಗಳ ಹಿಂದೆ 8 ಕೋಟಿ ಇದ್ದುದು, ಇವೊತ್ತು 14 ಕೋಟಿ ರೂಪಾಯಿಗಳ ಬಡ್ಡಿ ಕೊಡ ಬೇಕಾಗಿದೆ. ಇಷ್ಟು ಬಡ್ಡಿಯನ್ನು ಕೊಟ್ಟು ಇಷ್ಟು ಸಾಲ ಮಾಡಿರುವುದು ಏತಕ್ಕೋಸ್ಕರ ? ದೇಶದಲ್ಲಿ ಉತ್ಪತ್ತಿ ಸಾಧನಗಳನ್ನು ನಿರ್ಮಾಣ ಮಾಡುವುದಕ್ಕೋಸ್ಕರ 300 ಕೋಟಿ ರೂಪಾಯಿ ಸಾಲ ಮಾಡಿ ದ್ದೇವೆಂದು ಹೇಳುತ್ತಾರೆ. ಇಷ್ಟು ಸಾಲ ಮಾಡಿದ ಮೇಲೆ ನಮ್ಮ ದೇಶದಲ್ಲಿ ಎಷ್ಟರ ಮಟ್ಟಿಗೆ ಲಾಭ

(ಶ್ರೀ ಎಸ್. ಶಿವಪ್ಪ)

ಸಂಪಾದನೆ ಮಾಡುತ್ತೇವೆ ಉತ್ಪಾದನೆ ಸಾಧನೆ ಎಷ್ಟು ನಿರ್ಮಾಣವಾಗಿದೆ ಎಂಬುದನ್ನು ನಾವು ಇಂದು ನೋಡಬೇಕಾಗಿದೆ. 147 ನೇ ಪುಟದಲ್ಲಿ ಹೇಳಿದ ಹಾಗೆ ಕೆಲವು ಕಾರಖಾನೆಗಳಿಗೋಸ್ಕರ ಸರಕಾರ ಸಾಲ ಕೊಟ್ಟಿದೆ. ಕಾರಖಾನೆ ಸ್ಥಾಪನೆ ಮಾಡುವುದಕ್ಕೆ ಷೇರ್ ಮೊಬಲಗನ್ನು ಅಲ್ಲಿ ಹಾಕಿದ್ದಾರೆ. ಈ ಷೇರ್ ಮೊಬಲಗು ಸುಮಾರು 10 ಕೋಟಿ ರೂಪಾಯಿ ಆಗುತ್ತದೆ. ಕೇಂದ್ರ ಸರಕಾರದಿಂದ ಮತ್ತು ಹೊರಗಡೆಯಿಂದ ನಾವು ಸಾಲ ತಂದಿರತಕ್ಕಂಥಾದ್ದು ಇದು ಒಂದು ಉದಾಹರಣೆ. ಈ ಹತ್ತು ಕೋಟಿ ರೂಪಾಯಿಗಳನ್ನು 73 ಕಂಪನಿಗಳಿಗೆ ಷೇರ್ ಧನ ಎಂದು ಕೊಟ್ಟಿದ್ದಾರೆ. ಅದರಿಂದ ನಮಗೆ ಬರತಕ್ಕಂಥ ಡಿವಿಡೆಂಡು ಸುಮಾರು 3·5 ಪರ್ಸೆಂಟ್ ಲಾಭ ನಾವು ತೆಗೆದುಕೊಳ್ಳುತ್ತಿದ್ದೇವೆ. ಅದೇ ರೀತಿ ಕೋಆಪರೇಟಿವ್ ಸೊಸೈಟಿಗೆ ಸುಮಾರು 8 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಇದರಿಂದ ನಮಗೆ ಕೇವಲ 0·4 ಆದಾಯ ಬಂದಿದೆ. ಕಳೆದ ಐದು ವರ್ಷಗಳಲ್ಲಿ assets over liabilities ಇದರಿಂದಾಗಿ ಪರಿಸ್ಥಿತಿ ಹೇಗೆ ಇದೆ ನೋಡಬೇಕು. 1964-65 ರಲ್ಲಿ ಅಸೆಟ್ಸ್ ಓವರ್ ಲಯಬಿಲಿಟೀಸ್ 72 ಕೋಟಿ ರೂಪಾಯಿ ಇತ್ತು. ಅದು 1966-67 ನೇ ಇಸವಿಯಲ್ಲಿ 67 ಕೋಟಿ ರೂಪಾಯಿಗೆ ಇಳಿಯುತ್ತದೆ. ಸಾಲ ಏರುತ್ತಿರುವಾಗ ಕ್ರಮೇಣವಾಗಿ ಆಸ್ತಿ ಕಡಿಮೆಯಾಗುತ್ತದೆ. ಈ ಪರಿಸ್ಥಿತಿಯಿಂದ ದೇಶದ ಆರ್ಥಿಕ ಮುನ್ನಡೆಗೆ ಹಾಗೂ ಭದ್ರತೆಗೆ ಅಪಾಯಕಾರಕವಾಗುತ್ತದೆ ಎಂಬುದನು ಯೋಚನೆ ಮಾಡಬೇಕು.

ಇನ್ನು ಸರಕಾರದ ಟ್ಯಾಕ್ಸೇಷನ್ ವಿಚಾರ. ಸರಕಾರದ ಖಜಾನೆಗೆ ತೆರಿಗೆ ಮೂಲಕ ಎಷ್ಟು ದುಡ್ಡು ಬರುತ್ತದೆ ಎಂಬುದನ್ನು ಅಳತೆ ಮಾಡಿ ನೋಡಬೇಕಾಗಿದೆ. 1957-58 ನೇ ಇಸವಿಯಲ್ಲಿ ಅಂದರೆ ರಾಜ್ಯ ಪುನರ್ ರಚನೆಯಾದ ಒಂದು ವರ್ಷದ ಮೇಲೆ ಡೈರೆಕ್ಟ್ ಮತ್ತು ಇನ್‌ಡೈರೆಕ್ಟ್ ಟ್ಯಾಕ್ಸೇಷನ್ನಿನಿಂದ ದೇಶದ ಜನ 24 ಕೋಟಿ ರೂಪಾಯಿ ತೆರಿಗೆ ಕೊಡುತ್ತಿದ್ದರು. ಅದು 1960-61 ನೇ ಇಸವಿಯಲ್ಲಿ 33·5 ಕೋಟಿ ರೂಪಾಯಿಗೆ ಏರಿತು ? 1966-67 ನೇ ಇಸವಿಯಲ್ಲಿ ಅದು ಸುಮಾರು 72 ಕೋಟಿ ರೂಪಾಯಿಗಳಿಗೆ ಏರಿದೆ. ಇಷ್ಟು ಹಣ ಖಜಾನೆಗೆ ಜನ ತುಂಬುತ್ತಾ ಬಂದಿದ್ದಾರೆ. 1957-58 ನೇ ಇಸವಿಯ ತೆರಿಗೆ ಪ್ರಮಾಣ ನೋಡಿದರೆ ಈಗ 300 ಪರ್ಸೆಂಟ್ ತೆರಿಗೆ ಹೆಚ್ಚು ಮಾಡಿದ್ದಾರೆ. ಇನ್ನು ಈ ತೆರಿಗೆ ವಿಚಾರದಲ್ಲಿ ಪರ್ ಕ್ಯಾಪಿಟಾ ಟ್ಯಾಕ್ಸ್ ಹೇಳುವುದಾದರೆ ? 1957-58 ರಲ್ಲಿ ಅದು 11 ಪರ್ಸೆಂಟ್ ಇತ್ತು. 1960-61 ರಲ್ಲಿ ಅದು 14·7 ಆಯಿತು. 1964-65 ನೇ ಇಸವಿಯಲ್ಲಿ 22 ಪರ್ಸೆಂಟ್ ಆಯಿತು. 1966-67 ರ ಬಗ್ಗೆ ಲೆಕ್ಕ ಹಾಕಿದರೆ ಅದು 28-29 ಪರ್ಸೆಂಟ್‌ಕ್ಕೆ ಬರುತ್ತದೆ. ಮೊದಲು 11 ಪರ್ಸೆಂಟ್ ಇದ್ದುದು ಇವತ್ತಿನ ದಿವಸ 29 ಪರ್ಸೆಂಟಿಗೆ ಪರಿವರ್ತನೆಯಾಗಿದೆ. ಈ ಹಿನ್ನೆಲೆಯಲ್ಲಿ ನಾವು ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಸುಮಾರು 300 ಕೋಟಿ ರೂಪಾಯಿ ಸಾಲ ಮಾಡಿ 71 ಕೋಟಿ ರೂಪಾಯಿ ತೆರಿಗೆ ಕೊಟ್ಟು ಇನ್ನು ನಾನ್ ಟ್ಯಾಕ್ಸ್ ರೆವೆನ್ಯೂ ಬಗ್ಗೆ ನೋಡಬೇಕಾಗುತ್ತದೆ. ಸಾಧನ ಸಂಪತ್ತಿನ ಮೇಲೆ ಬಂಡವಾಳ ಹಾಕಿದ ಮೇಲೆ ನಾನ್ ಟ್ಯಾಕ್ಸ್ ಉತ್ಪತ್ತಿ ಸಾಧನೆಯಿಂದ ಎಷ್ಟು ಆದಾಯ ಬಂದಿದೆ ! 1960-61 ರಿಂದ 1966-67 ರವರೆಗೆ ನೋಡಿದರೆ ನಾನ್ ಟ್ಯಾಕ್ಸ್ ಉತ್ಪತ್ತಿಯಲ್ಲಿ ಬದಲಾವಣೆಯಾಗಿಲ್ಲ. ಹೇರಳವಾಗಿ ಹಣ ಹಾಕಿದ್ದರೂ ಕೂಡ ಯಾವ ಕಾರಖಾನೆಯಿಂದಾಗಲಿ, ನೀರಾವರಿ ಯೋಜನೆಯಿಂದಾಗಲಿ, ಯಾವದೇ ಕೈಗಾರಿಕೆಯಿಂದಾಗಲಿ ಇವತ್ತಿನ ದಿವಸ ನಾವು ಹಣ ಸಂಪಾದನೆ ಮಾಡುತ್ತಾ ಇಲ್ಲ. ಇದರ ಬಗ್ಗೆ ಸರಕಾರದ ಒಂದು ವಾದ ಇದೆ. ದೇಶದ ಅಭಿವೃದ್ಧಿಗಾಗಿ ಹಣವನ್ನು ಹೇರಳವಾಗಿ ಹಾಕುತ್ತಿದ್ದೇವೆ. ಬಹುಶಃ ಇದು ಹತ್ತಿಪ್ಪತ್ತು ವರ್ಷಗಳಲ್ಲಿ ಆದಾಯ ಕೊಡುತ್ತದೆ ಎಂಬ ಒಂದು ವಾದ ಇದೆ. ಆದರೆ ಈ ವಾದದಲ್ಲಿ ಎಳ್ಳಷ್ಟೂ ನಂಬಿಕೆ ಇಲ್ಲದಂತಾಗಿದೆ. ಯಾಕಂದರೆ, ಯೋಜನೆ ಪ್ರಾರಂಭವಾಗಿ 15 ವರ್ಷವಾಯಿತು. ಏಕಪ್ರಕಾರವಾಗಿ ಯೋಜನೆಗೆ ಹಣ ಹಾಕುತ್ತಾ ಬಂದಿದ್ದೇವೆ. ಈ ಯೋಜನೆ ಉತ್ಪತ್ತಿ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು 5 ವರ್ಷಕ್ಕೊಮ್ಮೆ ಅಳತೆ ಮಾಡತಕ್ಕದ್ದು ಸರಕಾರದ ಜವಾಬ್ದಾರಿ ಆಗಿತ್ತು. ಒಂದೇ ಪಾರ್ಟಿಯ ಸರಕಾರ ದೇಶದ ಆಡಳಿತವನ್ನು ವಹಿಸಿಕೊಂಡಿದ್ದರೂ ಕೂಡ ಒಟ್ಟು ಪರಿಣಾಮವಾಗಿ ಇಂದು ದೇಶದಲ್ಲಿ ಸರಕಾರದ ಆದಾಯ ಕುಂಠಿತವಾಗಿದೆ. ಸಾಲದ ಹೊರೆ ವಿಪರೀತ ಜಾಸ್ತಿಯಾಗಿದೆ. ಅದಕ್ಕೆ ಕೊಡತಕ್ಕ ಬಡ್ಡಿ ಹೊರೆ ದಿನ ದಿನಕ್ಕೆ ಹೆಚ್ಚಾಗುತ್ತಿದೆ. ಇದಲ್ಲದೆ ಹತ್ತಾರು ಕೋಟಿ ರೂಪಾಯಿ ತೆರಿಗೆ ಹಾಕಿದ್ದಾರೆ. ಇಷ್ಟು ತೆರಿಗೆ ಹಾಕಿದರೂ ಕೂಡ ದೇಶದಲ್ಲಿ ಜನಗಳ ಕ್ಷೇಮಸಾಧನೆ ಮಾಡುವುದಕ್ಕೆ ಸರಕಾರಕ್ಕೆ ಸಾಧ್ಯವಾಗಿಲ್ಲ. ಇಂಥ ಪರಿಸ್ಥಿತಿ ನಮಗೆ ಸಾಲದಿಂದ ಬಂದಿದೆ ಎಂದು ಹೇಳಬಹುದು. ಸಾಲ ತೆಗೆದುಕೊಂಡ ಮೇಲೆ ಅದನ್ನು ವಾಪಸು ಕೊಡತಕ್ಕ ಪರಿಸ್ಥಿತಿ ಉಂಟಾಗಿದೆಯೇ ? ಹಣ ವಾಪಸ್ ಕೊಡದೇ ಬಡ್ಡಿ ಮಾತ್ರ ಕೊಡಬೇಕಾಗಿದೆ. ಸಾಲದ ಹಣ ವಾಪಸು ಕೊಡತಕ್ಕ ಪರಿಸ್ಥಿತಿ ಸರಕಾರದಲ್ಲಿಲ್ಲ. ಅನೇಕ ಸಲ ರಿಜರ್ವ್

ಬ್ಯಾಂಕು ಓವರ್ ಡ್ರಾಫ್ಟ್ ಕೊಡಬೇಕಾಗಿದೆ. ಇದನ್ನು ಮಾನ್ಯ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದಲ್ಲದೆ ಫೈನಾನ್ಸ್ ಕಮಿಷನ್ ಅವರು ಒಂದು ಮಾತು ಹೇಳಿದ್ದಾರೆ. ಸರಕಾರ ಬಜೆಟ್ ನಿರೂಪಣೆ ಮಾಡತಕ್ಕ ಕಾಲದಲ್ಲಿ ಆದಾಯವನ್ನು ಇನ್‌ಫ್ಲೇಟೆಡ್ ಆಗಿ ಮಾಡಿ ತೋರಿಸುವುದು ಒಂದು ವಾಡಿಕೆಯಾಗಿದೆ. ಆದಾಯ ಕುಂಠಿತವಾದಾಗ ಖರ್ಚನ್ನು ತಡೆಯತಕ್ಕಂಥ ಪರಿಸ್ಥಿತಿ ಇಲ್ಲದ ಕಾರಣ ಸರಕಾರ ಓವರ್ ಡ್ರಾಫ್ಟಕ್ಕೆ ಕೈ ಚಾಚಿದರು. ಈ ರೀತಿ ಓವರ್‌ಡ್ರಾಫ್ಟಿಗೆ ಕೈ ಚಾಚಿ ಅದರಿಂದಲೇ ಸರ್ಕಾರವನ್ನು ನಡೆಸಬೇಕಾಗಿ ಬಂದಿದೆ. ಅದಕ್ಕೆ ಸಾಕ್ಷಿ 52 ಕೋಟಿ ರೂಪಾಯಿಗಳ ಓವರ್ ಡ್ರಾಫ್ಟ್ ಮಾಡಬೇಕಾಗಿ ಬಂದುದು. ಗತಿ ಇಲ್ಲದೆ ಇದಕ್ಕೆ ಕೈ ಚಾಚಬೇಕಾಗಿ ಬಂದಿದೆ. ಇಷ್ಟೊಂದು ಹಣವನ್ನು ಓವರ್ ಡ್ರಾಫ್ಟ್ ಮೂಲಕ ತೆಗೆದುಕೊಳ್ಳಬೇಕಾದರೆ ನಮ್ಮ ಆದಾಯ ಮತ್ತು ಖರ್ಚು ಏನಿದೆ ಇದು ಕರಾರುವಾಕಾಗಿಲ್ಲ. ಬಹಳ ಆದಾಯ ಬರುತ್ತದೆ ಎಂದು ನಿರೀಕ್ಷೆ ಮಾಡಿರುವುದು ವರ್ಷದ ಕೊನೆಯಲ್ಲಿ ತಲೆಕೆಳಗಾಗುತ್ತದೆ. ಖರ್ಚು ಮಾತ್ರ ಯಥಾಪ್ರಕಾರವಾಗಿ ಇನ್ನೂ ಜಾಸ್ತಿ ಜಾಸ್ತಿಯಾಗುತ್ತದೆ. ಆದಾಯದ ಬಾಬುಗಳು ಮಾತ್ರ ಕುಂಠಿತವಾಗುತ್ತವೆ. ಇದರಿಂದ ಹಣಕಾಸಿನ ಪರಿಸ್ಥಿತಿ ಏನು, ಅದು ಹೇಗಿದೆ ಎನ್ನುವುದು ತಿಳಿಯದೆ ಹೋಗಿದೆ, ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ನಿಖರವಾದ ಆರ್ಥಿಕ ನೀತಿಯನ್ನು ಅನುಸರಿಸಿಕೊಂಡು ಬರದೆ ಹೋದರೆ ಈ ಲಂಗು ಲಗಾಮಿಲ್ಲದ ಆರ್ಥಿಕ ನೀತಿಯಿಂದ ರಾಜ್ಯ ಉದ್ಧಾರವಾಗಲಾರದು. ಈ ಪರಿಸ್ಥಿತಿ ಬಂದಿರುವುದಕ್ಕೆ ಅನೇಕ ಕಾರಣಗಳಿವೆ. ಯಾವ ಯೋಜನೆಗಳನ್ನು ನಾವು ಹಾಕಿಕೊಂಡು ನಾವು ಕೆಲಸ ಮಾಡುತ್ತಿದ್ದೇವೆಯೋ ಆ ಯೋಜನೆಗಳಿಗೆ ಏನು ನಿರ್ದಿಷ್ಟವಾದ ಮೊತ್ತವನ್ನು ಗೊತ್ತು ಮಾಡಿರುತ್ತೇವೆಯೋ ಅಷ್ಟು ಮಿತಿಯೊಳಗೆ ಆ ಯೋಜನೆಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಹಿಡಿತವಿಲ್ಲದ ಆಡಳಿತ ನೀತಿಯಿಂದ ನಮ್ಮ ದೇಶದಲ್ಲಿ ಹಣಕಾಸಿನ ಖರ್ಚಿನ ಮೇಲೆ ಮಿತಿ ಇಲ್ಲ, ಹಿಡಿತವಿಲ್ಲ. ಯಾವ ಯೋಜನೆಯೇ ಆಗಲಿ ಹಿಡಿತವಿಲ್ಲದ ನೀತಿಯಿಂದ ಅದರ ಖರ್ಚು ಯಥೇಷ್ಟವಾಗಿ ಆಗಿದೆ. ಹಿಡಿತವಿಲ್ಲದೆ ಇರುವುದರಿಂದ ಆರ್ಥಿಕ ಪರಿಸ್ಥಿತಿ ತಲೆಕೆಳಗಾಗುತ್ತಿದೆ. ಹಿಡಿತದಿಂದ, ಕಟ್ಟುನಿಟ್ಟಾಗಿ ನೀರಾವರಿ ಯೋಜನೆಗಳನ್ನು ಮಾಡಿದ್ದೇ ಆದರೆ ಈ ಅವಹೇಳನದ ಸ್ಥಿತಿಗೆ ನೀವು ಬರತಕ್ಕದ್ದಿರಲಿಲ್ಲ ಎಂದು ನಾನು ಒತ್ತಿ ಒತ್ತಿ ಹೇಳಬೇಕಾಗಿದೆ. ಇದನ್ನು ಕಂಡೇ ನಾವು ಒಂದೆರಡು ವರ್ಷಗಳ ಹಿಂದೆಯೇ ಈ ಸಭೆಯಲ್ಲಿ ಮತ್ತು ಹೊರಗೆ ಕೂಡ ಹೇಳಿದ್ದೇವೆ ಎಂಥೆಂಥ ಕಡೆ ಲಂಚಗುಳಿತನದಿಂದ ದೇಶದ ಹಣ ಅಪವ್ಯಯವಾಗಿದೆ ಎಂದು. ಈ ಬಗ್ಗೆ ರಾಷ್ಟ್ರಪತಿಯವರಿಗೆ ಕೂಡ ದೂರನ್ನು ಕೊಟ್ಟಿದ್ದೇವೆ. ಸರ್ಕಾರ ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿದ್ದ ಪಕ್ಷದಲ್ಲಿ ಇಂದು ಇರುವ ಪರಿಸ್ಥಿತಿ ಬರುತ್ತಿರಲಿಲ್ಲ. ನಮ್ಮ ದೇಶದ ಬಡತನವನ್ನು ನೀಗಬೇಕಾದರೆ ದೇಶದ ಒಂದೊಂದು ಪೈಸೆಯನ್ನೂ ಕೂಡ ಒಂದೊಂದು ರೂಪಾಯಿ, ಒಂದೊಂದು ಲಕ್ಷ ರೂಪಾಯಿ ಎಂದು ತಿಳಿದು ಖರ್ಚು ಮಾಡಿದರೆ ಆಗ ನಮ್ಮ ಪ್ಲಾನ್ಡ್ ಪ್ರಾಜೆಕ್ಟ್ಸ್ ಏನಿವೆ ಅವುಗಳನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಖರ್ಚಿನ ಮೇಲೆ ಹತೋಟಿ ಇಲ್ಲದೆ ಇದ್ದರೆ ಎಷ್ಟು ಸಹಸ್ರ ಕೋಟಿ ರೂಪಾಯಿ ಕೊಟ್ಟರೂ ಕೂಡ ಅದರಿಂದ ಫಲಿತಾಂಶ ಬರುವುದಿಲ್ಲ ಎನ್ನುವುದನ್ನು ನಾವು ಸ್ಪಷ್ಟವಾಗಿ ಹೇಳಬೇಕಾಗಿದೆ. ಈ ವಿಚಾರವನ್ನು ಹಣಕಾಸಿನ ಸಚಿವರು ಕೂಡ ಒಪ್ಪಿಕೊಂಡಿದ್ದಾರೆ. 1957-58 ಮತ್ತು 1960-61-ರಲ್ಲಿ ಎಷ್ಟು ರಿಸರ್ವ್ ಇತ್ತು, ಅದು ಕರಗುತ್ತ ಹೋಗಿದೆ ಎಂದು ಹೇಳಿದ್ದಾರೆ. ಎಷ್ಟು ರಿಸರ್ವ್ ಇದ್ದರೂ ಅದು ಕರಗಿ ಹೋಗುತ್ತದೆ. ಹಣಕಾಸನ್ನು ಖರ್ಚು ಮಾಡುವುದರ ಮೇಲೆ ಹಿಡಿತವಿಲ್ಲದೆ ಹೋದರೆ ಎಷ್ಟು ಕೋಟಿ ರೂಪಾಯಿಯನ್ನು ಖಜಾನೆಗೆ ಹಾಕಿದರೂ ಅದರಿಂದ ಪ್ರಯೋಜನವಾಗುವುದಿಲ್ಲ. ನಮ್ಮ ಹಣಕಾಸಿನ ಪರಿಸ್ಥಿತಿ ಹೇಗಿದೆ ಎಂದರೆ ಒಂದು ತೂತು ಬಿದ್ದ ಕೊಡದ ಹಾಗೆ ಇದೆ. ತೂತು ಕೊಡದಲ್ಲಿ ಎಷ್ಟು ನೀರನ್ನು ಬಾವಿಯಿಂದ ತುಂಬಿಕೊಂಡು ಬಂದರೂ ಹೂವಿನ ಗಿಡದ ಬಳಿಗೆ ಹೋಗುವುದರೊಳಗೆ ನೀರೆಲ್ಲ ಸೋರಿ ಹೋಗಿರುತ್ತದೆ. ನೀರು ಹಾಕುವವನಿಗೆ ಬಾವಿಯಿಂದ ನೀರನ್ನು ತೆಗೆದುಕೊಂಡು ಹೋಗುವುದು ಮಾತ್ರ ತಪ್ಪುವುದಿಲ್ಲ. ಗಿಡಗಳಿಗೆ ನೀರು ಮಾತ್ರ ದೊರೆಯುವುದಿಲ್ಲ. ಹಾಗೆಯೇ ತೂತು ಇರುವ ಖಜಾನೆಗೆ ಎಷ್ಟು ಹಣ ತುಂಬಿದರೆ ತಾನೆ ಅದು ಉಳಿಯುತ್ತದೆ ? ಆದುದರಿಂದ ಖಜಾನೆಯಿಂದ ದುಡ್ಡು ಸೋರಿ ಹೋಗದ ಹಾಗೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಸೂಚನೆ ಕೊಡುತ್ತಿದ್ದೇನೆ.

ಅರ್ಥ ಸಚಿವರು ನಮ್ಮ ಮುಂದೆ ಮಂಡಿಸಿರುವ ಆಯವ್ಯಯ ಪಟ್ಟಿಯಲ್ಲಿ ಎಷ್ಟರಮಟ್ಟಿಗೆ ಯೋಜನೆಗಳಿಗೆ ಹಣವನ್ನು ಒದಗಿಸಿದ್ದಾರೆ ಎನ್ನುವುದನ್ನು ನೋಡೋಣ. ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಪ್ರತಿ ವರ್ಷ ಕೊಡುತ್ತಿದ್ದ ಹಣವನ್ನು ಕಡಮೆ ಮಾಡಿದ್ದಾರೆ. ಇದರಿಂದ ನಮ್ಮ ಹಣಕಾಸಿನ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎನ್ನುವುದು ಗೊತ್ತಾಗುತ್ತದೆ. ಸಚಿವರೇನೋ ಉಳಿತಾಯದ ಬಜೆಟ್ಟನ್ನು ತೋರಿಸಿದ್ದಾರೆ, ನಿಜ. ಹಾಗೆ ತೋರಿಸುವುದು ಬಹಳ ಸುಲಭ. ಯಾವ ಯಾವದಕ್ಕೆ ಹಣ ಬೇಕೋ ಅದಕ್ಕೆ ಹಣವನ್ನು ತೋರಿಸದೆ ಉಳಿತಾಯದ ಬಜೆಟ್ಟನ್ನು ತೋರಿಸಿದ್ದಾರೆ. ಈ ರೀತಿಯಾಗಿ ಸ್ವಲ್ಪ ಸ್ವಲ್ಪ ಹಣವನ್ನು ದೊಡ್ಡ ದೊಡ್ಡ ಯೋಜನೆಗಳಿಗೆ ಒದಗಿಸುತ್ತ ಬಂದರೆ ಅಪ್ಪರ್ ಕೃಷ್ಣ, ಮಲಪ್ರಭಾ, ಘಟಪ್ರಭಾ ಮೊದಲಾದ ಯೋಜನೆಗಳು ಕಾರ್ಯಗತವಾಗಲು ನೂರು ಇನ್ನೂರು ವರ್ಷವಾಗ

(ಶ್ರೀ ಎಸ್. ಶಿವಪ್ಪ)

ಬೇಕು ಎನ್ನುವುದನ್ನು ನೋಡಬೇಕಾಗಿದೆ. ಹಣವನ್ನು ಕೊಡುವುದರಲ್ಲಿ ಕೂಡ ಕಾವೇರಿ ವ್ಯಾಲಿಯಲ್ಲಿ ತೆಗೆದು ಕೊಳ್ಳಬೇಕಾದ ಹೇಮಾವತಿ, ಹಾರಂಗಿ, ಕಂಬದಕಡ ಯೋಜನೆಗಳಿಗೆ ಕೂಡ ಕಡಿಮೆ ಹಣವನ್ನು ಒದಗಿಸಿದ್ದಾರೆ. ಈ ರೀತಿ ಆದರೆ ನಮ್ಮ ನೀರಾವರಿ ಯೋಜನೆಗಳು ಕಾರ್ಯಗತವಾಗಿ ಅದರಿಂದ ಪ್ರತಿಫಲ ದೊರೆಯುವುದು ಯಾವಾಗ ?

ಶ್ರೀ ರಾಮಕೃಷ್ಣ ಹೆಗಡೆ.—ಪ್ಲಾನಿಂಗ್ ಕಮಿಷನ್‌ರವರು ಎಷ್ಟು ಕೊಟ್ಟಿದ್ದಾರೆಯೋ ಅದನ್ನು ಹಾಕಿದ್ದೇವೆ.

ಶ್ರೀ ಎಸ್. ಶಿವಪ್ಪ.—ಸುಮಾರು ಐದು ಕೋಟಿ ರೂಪಾಯಿಗಳನ್ನು ಹಂಚಿದ್ದಾರೆ. ಇದರಿಂದ ರೀಜನಲ್ ಇಂಬ್ಯಾಲೆನ್ಸ್ ಆಗಬಾರದು, ಅನ್ಯಾಯವಾಗಬಾರದು.

ಶ್ರೀ ರಾಮಕೃಷ್ಣ ಹೆಗಡೆ.—2 ಕೋಟಿ ರೂಪಾಯಿಗಳನ್ನು ತುಂಗಭದ್ರ ಯೋಜನೆಗೂ, ಎರಡು ಕೋಟಿ ರೂಪಾಯಿಗಳನ್ನು ಭದ್ರ ಪ್ರಾಜೆಕ್ಟಿಗೂ, ಒಂದು ಕೋಟಿ ರೂಪಾಯಿಗಳನ್ನು ಬಾಕಿ ಪ್ರಾಜೆಕ್ಟ್‌ಗಳಿಗೂ ಹಾಕಿದ್ದೇವೆ.

ಶ್ರೀ ಎಸ್. ಶಿವಪ್ಪ.—ಕಾವೇರಿ ವ್ಯಾಲಿಯಲ್ಲಿನ ನೀರನ್ನು ಉಪಯೋಗಿಸಿಕೊಳ್ಳುವ ಸಂಬಂಧದಲ್ಲಿ ನಮಗೂ ಮತ್ತು ಮದ್ರಾಸ್ ಸರ್ಕಾರಕ್ಕೂ ಆಗಿರುವ ಒಪ್ಪಂದದ ಪ್ರಕಾರ 1972ನೇ ಇಸವಿಯೊಳಗಾಗಿ ನಾವು ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಬೇಕಾಗಿದೆ. ಆ ಯೋಜನೆಗಳಿಗೆ ನಾವು ಆಧ್ಯತೆಯನ್ನು ಕೊಡಬೇಕು. ಎಷ್ಟೇ ಕಷ್ಟವಾಗಲೀ ಆ ಯೋಜನೆಗಳಿಗೆ ಹೆಚ್ಚು ಹಣವನ್ನು ಕೊಡಬೇಕಾದ್ದು ಸರ್ಕಾರದ ಪ್ರಥಮ ಕರ್ತವ್ಯ. ಆದರೆ ಆಯುವ್ಯಯದಲ್ಲಿ ಒದಗಿಸಿರುವುದನ್ನು ನೋಡಿದರೆ ಈ ಅಂಶವನ್ನು ಮರೆತಂತೆ ಕಾಣುತ್ತದೆ. ಹೇಮಾವತಿ ಯೋಜನೆಗೆ ಒಂದು ಲಕ್ಷ ರೂಪಾಯಿ, ಹಾರಂಗಿ ಯೋಜನೆಗೆ ಒಂದು ಲಕ್ಷ ರೂಪಾಯಿ ಕೊಟ್ಟರೆ ಒಪ್ಪಂದದ ಅವಧಿಯೊಳಗೆ ಈ ಪ್ರಾಜೆಕ್ಟುಗಳನ್ನು ಮುಗಿಸುವುದಕ್ಕೆ ಸಾಧ್ಯವೇ ಎಂದು ನಾನು ಅರ್ಥ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಈ ರೀತಿ ಮಾಡುವುದಾದರೆ ಮದ್ರಾಸ್ ಸರ್ಕಾರಕ್ಕೆ ನಮ್ಮ ಹಕ್ಕನ್ನು ಬಿಟ್ಟು ಕೊಟ್ಟ ಹಾಗೆ ಆಗುತ್ತದೆ. ಈಗಾಗಲೇ ಕೃಷ್ಣ ನದಿಯ ಪಾತ್ರದಲ್ಲಿ ಅಣೆಕಟ್ಟುಗಳನ್ನು ಸಕಾಲದಲ್ಲಿ ಕಟ್ಟದೆ ಇರುವುದರಿಂದ ಆಂಧ್ರದವರು ಅನೇಕ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿದ್ದಾರೆ. ನೀರಾವರಿಯಲ್ಲಿ ಮೈಸೂರು ರಾಜ್ಯಕ್ಕಿಂತ ಆಂಧ್ರ ಮತ್ತು ಮಹಾರಾಷ್ಟ್ರಗಳವರು ಬಹಳ ಮುಂದೆ ಇದ್ದಾರೆ. ಆಂಧ್ರದಲ್ಲಿ ನೂರಕ್ಕೆ 35ರಷ್ಟು ನೀರಾವರಿ ಪ್ರದೇಶವಿದೆ, ಮೈಸೂರಿನಲ್ಲಿ ಇದು ಕೇವಲ 8ರಷ್ಟು ಇದೆ. ಮಹಾರಾಷ್ಟ್ರದಲ್ಲಿ ಆಂಧ್ರಕ್ಕಿಂತ ಕಡಮೆ ನೀರಾವರಿ ಪ್ರದೇಶವಿದ್ದರೂ ನಮಗಿಂತ ಹೆಚ್ಚಾಗಿದೆ ; ನಮ್ಮ ರಾಜ್ಯದಲ್ಲಿ ನೀರಾವರಿ ಪ್ರದೇಶ ಸೇಕಡ 6ರಷ್ಟು ಮಾತ್ರ ಇರುವುದರಿಂದ ನಾವು ನೀರಾವರಿಗೆ ಹೆಚ್ಚು ಹಣವನ್ನು ಕೊಡಬೇಕಾದುದು ಮುಖ್ಯ. ಆಂಧ್ರದವರು ಕೊಟ್ಟಿರುವುದಕ್ಕಿಂತಲೂ ಅರ್ಧ ಮಹಾರಾಷ್ಟ್ರದವರಿಗೆ ಕೊಟ್ಟಿರುವುದರಲ್ಲಿ ಅರ್ಧದಷ್ಟನ್ನು ಮಾತ್ರ ನಮಗೆ ಕೊಟ್ಟಿದ್ದಾರೆ. ಇದರಿಂದ ನೀರಾವರಿಗೆ ಧಕ್ಕೆ ತಂದಂತಾಗಲಿಲ್ಲವೇ ಎಂದು ನಮ್ಮ ಸರ್ಕಾರದವರು ಆಲೋಚನೆ ಮಾಡಬೇಕಾಗಿತ್ತು, ಮತ್ತು ನೀರಾವರಿ ಕಾರ್ಯಗಳಿಗೆ ಇನ್ನೂ ಹೆಚ್ಚಿನ ಹಣವನ್ನು ಕೊಡಲೇಬೇಕಾಗಿತ್ತು.

ಇವತ್ತು ನಮ್ಮ ರಾಜ್ಯ ಆಹಾರದ ಉತ್ಪತ್ತಿಯಲ್ಲಿ ಕಡಮೆಯಾಗಿದೆ. ನಮಗೆ ಸುಮಾರು ನಾಲ್ಕೈದು ಲಕ್ಷ ಟನ್ ಅಕ್ಕಿ ಬೇಕಾಗಿದೆ. ಹೊರಗಡೆ ಆಂಧ್ರದವರಿಗೆ, ಮದ್ರಾಸಿನವರಿಗೆ ಕೈ ಚಾಚಬೇಕಾಗಿದೆ. ಹೀಗಾದರೆ ನಾವು ಯಾವಾಗ ಸ್ವಪರಿಪೂರ್ಣರಾಗುವುದು ? ಹೀಗಿದ್ದರೂ ಕೂಡ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಹಣವನ್ನು ಖರ್ಚು ಮಾಡದೆ ಎಷ್ಟು ವರ್ಷಗಳಲ್ಲಿ ಸ್ವಾವಲಂಬನೆ ಪಡೆಯುತ್ತೀರಿ ಎನ್ನುವುದನ್ನು ಯೋಚನೆ ಮಾಡಬೇಕು. ದೊಡ್ಡ ದೊಡ್ಡ ನೀರಾವರಿ ಯೋಜನೆಗಳಾದ ಅಪ್ಪರ್ ಕೃಷ್ಣ, ಮೊದಲಾದವುಗಳನ್ನು ಕೇಂದ್ರ ಸರ್ಕಾರದವರೇ ವಹಿಸಿಕೊಂಡರೆ ಒಳ್ಳೆಯದು ಎಂದು ಹೇಳಿದ್ದಾರೆ. ಕೆಲವು ಕಡೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಯಾವಾಗ ಅವರು ಈ ಪ್ರಾಜೆಕ್ಟುಗಳನ್ನು ವಹಿಸಿಕೊಳ್ಳುತ್ತಾರೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

2-30 P.M.

ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂದು ಹೇಳುವ ಹಾಗೆ ಇದು ಆಗಿದೆ. ಅಂದಮೇಲೆ ಆ ಕೂಸು ದೊಡ್ಡದಾಗುವುದು ಹೇಗೆ ? ಆದ್ದರಿಂದ ನಮ್ಮ ವಾದ ಅವರ ಕಿವಿಗೆ ಮುಟ್ಟ

ಅವರು ಅದಕ್ಕೆ ಮನ್ನಣೆ ಕೊಟ್ಟರೆ ಮಾತ್ರ ಇದಕ್ಕೆ ಪ್ರತಿಫಲ ಬಂದೀತು, ಇಲ್ಲದಿದ್ದರೆ ಗಿಳಿ ಪಾಠವಾಗುತ್ತದೆ. ಅದರಿಂದೇನೂ ಪ್ರಯೋಜನವಾಗುವುದಿಲ್ಲವೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಇಷ್ಟು ನೀರಾವರಿ ಯೋಜನೆಗಳ ವಿಷಯವಾಯಿತು.

ಇನ್ನು ಇವತ್ತು ಮೈಸೂರು ದೇಶದಲ್ಲಿ ಇವರು ಎಷ್ಟರಮಟ್ಟಿಗೆ ಕೈಗಾರಿಕೋದ್ಯಮಗಳನ್ನು ಪ್ರಬಲಗೊಳಿಸಿದ್ದಾರೆಂಬುದನ್ನು ನೋಡೋಣ. ನಿಜವಾಗಿ ಶರಾವತಿ ಯೋಜನೆಯೇನೋ ಮುಗಿಯಿತು. ಶರಾವತಿಯಿಂದ ಹೇರಳವಾಗಿ ವಿದ್ಯುಚ್ಛಕ್ತಿಯೇನೋ ಉತ್ಪನ್ನವಾಗುತ್ತಿದೆ. ಅದು ನಮಗೇ ಸಾಲದು. ತುಂಗಭದ್ರ ಅಣೆಕಟ್ಟನ್ನು ಕಟ್ಟಿದ್ದರಿಂದ ನೀರಿನ ಸೌಕರ್ಯವೇನೋ ದೊರೆಯಿತು. ಆದರೆ ಅದ್ದರಿಂದ ಎರಡುಲಕ್ಷ ಎಕರೆ ಜಮೀನಿಗೆ ಸಾಗುವಳಿಯಾಗತಕ್ಕ ನೀರನ್ನು ಆಂಧ್ರದವರಿಗೆ ಉದಾರವಾಗಿ ದಾನ ಮಾಡಿದ್ದಾರೆ. ಶರಾವತಿಯಿಂದ ವಿದ್ಯುಚ್ಛಕ್ತಿ ಉತ್ಪನ್ನವನ್ನು ಸಾಕಾದಷ್ಟು ಮಾಡಿದರು. ಅದರಲ್ಲಿ ಎಷ್ಟೋ ಭಾಗವನ್ನು ಕೇರಳದವರಿಗೆ ಕೊಟ್ಟಿದ್ದಾರೆ. ನಾವಂತೂ ಇತ್ತೀಚೆಗೆ ಬಹಳ ಉದಾರಿಗಳಾಗಿದ್ದೇವೆ. ಆ ಒಂದು ದಾರಿಯಲ್ಲಿ ನಾವು ಹೆಜ್ಜೆ ಇಟ್ಟು ನಮ್ಮ ದೇಶದಲ್ಲಿ ಉತ್ಪತ್ತಿಯಾಗತಕ್ಕ ಎಲ್ಲಾ ವಿದ್ಯುಚ್ಛಕ್ತಿಯನ್ನೂ ಉಪಯೋಗಿಸುವ ಶಕ್ತಿಯನ್ನು ನಾವು ಇನ್ನೂ ಸಂಪಾದಿಸಿಕೊಳ್ಳಲಿಲ್ಲ. ಇವತ್ತು ಆ ಬಗ್ಗೆ ಮೈಸೂರು ಸರ್ಕಾರ ಬಹಳವಾಗಿ ಹಿಂದುಳಿದಿದೆ. ಇವತ್ತು ನಮಗೆ ನಮ್ಮ ದೇಶದಲ್ಲಿ ನಮಗೆ ಬೇಕಾದ ಸಕಲ ಸೌಭಾಗ್ಯಗಳೂ ಇವೆ. ಪ್ರಕೃತಿದತ್ತವಾದ ವಿದ್ಯುಚ್ಛಕ್ತಿ ಶಕ್ತಿ ಇದೆ. ಆ ಶಕ್ತಿ ಕೊಟ್ಟಿರತಕ್ಕ ಉಕ್ಕು ಹೈಯೆಸ್ಟ್ ಪರ್ಸಂಟೇಜ್ ಹೊಸಪೇಟೆಯಲ್ಲಿದೆ ಅಂತಹ ಒಂದು ವಿದ್ಯುಚ್ಛಕ್ತಿ ಶಕ್ತಿ ನಮ್ಮಲ್ಲಿ ಬೇಕಾದಷ್ಟಿದೆ. ಇಷ್ಟೆಲ್ಲಾ ಇದ್ದರೂ ಕೂಡ ನಮ್ಮ ಕೈಗಾರಿಕೋದ್ಯಮಿಗಳಿಗೆ ಸಕಲ ಸೌಕರ್ಯಗಳನ್ನೂ ಕೊಡುವಾಗ........

ಶ್ರೀ ರಾಮಕೃಷ್ಣ ಹೆಗಡೆ.—ಹೊಸಪೇಟೆಯಲ್ಲಿರುವುದು ಕಬ್ಬಿಣದ ಅದುರು, ಉಕ್ಕು ಅಲ್ಲ.

ಶ್ರೀ ಎಸ್. ಶಿವಪ್ಪ.—ಇಲ್ಲವೇ ನಮ್ಮಲ್ಲಿ ದುಡ್ಡು ಇರಬೇಕು, ಅದಿಲ್ಲದಿದ್ದರೆ ಯಾವ ಕೈಗಾರಿಕೆಯನ್ನಾದರೂ ಮಾಡತಕ್ಕ ಒಂದು ಶಕ್ತಿಯಾದರೂ ನಮಗೆ ಇರಬೇಕು.

ಎರಡನೆಯದಾಗಿ, ಬೇರೆಯವರು ಕೇಂದ್ರದಲ್ಲಿ ಒತ್ತಾಯಮಾಡಿ ನಮ್ಮ ದೇಶದ ಸವಲತ್ತುಗಳನ್ನು ಉಪಯೋಗಿಸಿಕೊಂಡು ಕಾರ್ಖಾನೆಗಳನ್ನು ಸ್ಥಾಪಿಸುತ್ತೇವೆಂದು ಹೇಳುವಂತಹ ಪರಿಸ್ಥಿತಿಯಲ್ಲಿ ಇವರು ಇರಬಾರದು. ವಿಜಯಪಾಡಕ್ಕೆ ಉಕ್ಕಿನ ಕಾರ್ಖಾನೆ, ಹೀಗೆ ಬೇರೆ ಬೇರೆ ದೇಶಗಳಿಗೆಲ್ಲಾ ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಕೊಟ್ಟು ನಮ್ಮಲ್ಲಿ ಪರ್ಸಂಟೇಜ್ ಆಫ್ ಸ್ಟೀಲ್ ಜಾಸ್ತಿ ಇದ್ದರೂ ನಮ್ಮಲ್ಲಿ ಉಕ್ಕಿನ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಿಲ್ಲವೆಂದು ಹೇಳುವಂತಹ ಎದೆಗಾರಿಕೆ ಇಲ್ಲಿ ಯಾರಿಗೆ ಬರುತ್ತದೆಂದು ನಾನು ಕೇಳುತ್ತೇನೆ. ಒಂದು ವೇಳೆ ಕೇಂದ್ರ ಸರ್ಕಾರದವರು ಆ ರೀತಿ ಹೇಳಿದರೂ ಇವರು ಹೇಗೆ ಸಹಿಸುತ್ತಾರೋ ನನಗೆ ಗೊತ್ತಿಲ್ಲ. ಹೊಸಪೇಟೆಗೆ ಉಕ್ಕಿನ ಕಾರ್ಖಾನೆ ಕೊಡುವುದಿಲ್ಲವೆಂದು ಹೇಳುವ ಎದೆಗಾರಿಕೆ ಯಾರಿಗೂ ಬರುವುದಿಲ್ಲ. ಅದನ್ನು ನಾವು ಒಪ್ಪಿ ಬರುವ ಸಂಗತಿ ನಿಜವಾಗಿ ನ್ಯಾಯವಲ್ಲ. ಇವತ್ತು ನಮ್ಮ ದೇಶದಲ್ಲಿ ಅಷ್ಟಾಗಿ ಕೈಗಾರಿಕೆ ಬೆಳೆಯದೇ ಇರುವುದಕ್ಕೆ ಅನೇಕ ಕಾರಣಗಳಿವೆ. ಎಷ್ಟೋ ಜನ ಕೈಗಾರಿಕೆಗಳ ಸ್ಥಾಪನೆಗೆಂದು ಲೈಸೆನ್ಸ್ ಪಡೆದುಕೊಂಡಿದ್ದರೂ ಅವರಲ್ಲಿ ಅನೇಕರು ಇನ್ನೂ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲಿಲ್ಲ. ಮದ್ರಾಸಿನಲ್ಲಿ ಕೇವಲ ಕೈಗಾರಿಕೆಗಳ ಬೋರ್ಡ್ ಎಂಬುದಾಗಿ ರಚನೆಮಾಡಿ ಅದರ ಮೂಲಕ ಕೋಟಾ ಲೈಸೆನ್ಸ್ ತೆಗೆದುಕೊಂಡು ಆ ಕೋಟಾಗಳನ್ನು ಬೇರೆಯವರಿಗೆ ಮಾರಾಟಮಾಡಿ ಸುಖವಾಗಿ ಜೀವನ ಮಾಡತಕ್ಕ ಕೈಗಾರಿಕೋದ್ಯಮಿಗಳು ಇತ್ತೀಚೆಗೆ ಬಹಳವಾಗಿ ಅಲ್ಲಿ ಹೆಚ್ಚುತ್ತಿದ್ದಾರೆ. ಇಲ್ಲಿ ಮಾತ್ರ ಅಂತಹ ಒಂದು ಉತ್ತೇಜನ ಯಾರಿಗೂ ಕೊಡಬಾರದು. ಯಾವ ಕೈಗಾರಿಕೋದ್ಯಮಿಯೇ ಆಗಲಿ ಅವನು ನಿಜವಾಗಿ ಕೆಲಸಮಾಡಿ ತನ್ನ ಆ ಒಂದು ಉದ್ಯಮದಿಂದ ದೇಶದ ಸಂಪತ್ತನ್ನು ವೃದ್ಧಿಮಾಡಿದರೆ ಆಗ ದೇಶಕ್ಕೆ ಹೆಚ್ಚಿನ ಪ್ರಯೋಜನವುಂಟಾಗುತ್ತದೆ. ಅದನ್ನು ಬಿಟ್ಟು ಕೆಲವರು ವಿಧಾನ ಸೌಧದ ಔತಣಕೂಟದ ಬ್ಯಾಂಕ್ವೆಟ್ ಹಾಲ್‌ನಲ್ಲಿಯೂ ಮತ್ತು ವಿಶ್ವೇಶ್ವರಯ್ಯ ಮ್ಯೂಸಿಯಂನಲ್ಲಿ ಸತ್ಕಾರಕೂಟಗಳನ್ನು ಮಾಡತಕ್ಕ ಕೈಗಾರಿಕೋದ್ಯಮಿಗಳಾಗಿದ್ದಾರೆ. ಅಂತಹವರಿಂದ ದೇಶದಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು ಮತ್ತು ದೊಡ್ಡ ದೊಡ್ಡ ಕೈಗಾರಿಕೆಗಳ ಸ್ಥಾಪನೆ ಖಂಡಿತವಾಗಿಯೂ ಸಾಧ್ಯವಿಲ್ಲ. ಇವತ್ತು ನಮ್ಮ ದೇಶಕ್ಕೆ ಬೇಕಾಗಿರುವವರು ಯಾರೆಂದರೆ ನಿಷ್ಠಾವಂತರಾಗಿ, ಕೈಗಾರಿಕೆಯಲ್ಲಿ ಹೆಚ್ಚು ಪರಿಶ್ರಮ ಹೊಂದಿ ಅದನ್ನೇ ತಪಸ್ಸು ಮಾಡಿ ಋಷಿಯೆನಿಸಿಕೊಂಡಂತಹ ಯೋಗಿಗಳು ಬೇಕು. ಮದ್ರಾಸಿನಲ್ಲಿ ಹಿಂದೆ ಅಷ್ಟು ಕೈಗಾರಿಕೆಗಳ ಸಂಪತ್ತು ಇರಲಿಲ್ಲ. ಈಗ ಆ ಪ್ರಾಂತ್ಯದ ಭೂಪಟವನ್ನು ನೋಡಿದರೆ ಆ ಪ್ರಾಂತ್ಯ ಎಷ್ಟರಮಟ್ಟಿಗೆ ಕೈಗಾರಿಕೆಯಲ್ಲಿ ಪ್ರಗತಿಯಾಗುತ್ತಿದೆ ಎಂಬುದು ನಮಗೆ ಕಾಣುತ್ತದೆ. ಅಲ್ಲಿರತಕ್ಕ ಕೈಗಾರಿಕಾ ಸಚಿವರು ಯಾರಾದರೂ ಒಂದು ಕೈಗಾರಿಕೆಯನ್ನು ಸ್ಥಾಪನೆಮಾಡಬೇಕೆಂದು ಅರ್ಜಿ ಹಾಕಿದರೆ ಅವರಿಗೆ ಏನೇನು ಉಪಕರಣಗಳು ಬೇಕು ಎಂಬ ಬಗ್ಗೆ

(ಶ್ರೀ ಎಸ್. ಶಿವಪ್ಪ)

ದೆಹಲಿಗೆ ಹೋಗಿ ಖುದ್ದಾಗಿ ಅದರ ಅವಶ್ಯಕತೆಯನ್ನು ಚೆನ್ನಾಗಿ ವಿವರಿಸಿ ಆ ಕೈಗಾರಿಕೆಗೆ ಬೇಕಾದ ಉಪಕರಣಗಳನ್ನು ದೆಹಲಿಯಿಂದ ತರಿಸಿ ಕೈಗಾರಿಕೋದ್ಯಮಿಗಳಿಗೆ ಸಹಾಯಮಾಡುತ್ತಾರೆ. ಅದರಿಂದಲೇ ಆ ದೇಶದಲ್ಲಿ ಜನರು ಕೈಗಾರಿಕೋದ್ಯಮದಲ್ಲಿ ಮುಂದುವರಿದಿದ್ದಾರೆ. ಹಾಗೆಯೇ ಇಲ್ಲಿ ಅನೇಕ ಜನರು ವಿಶೇಷವಾಗಿ ಕೈಗಾರಿಕೋದ್ಯಮಗಳನ್ನು ಕೈಗೊಳ್ಳುವ ಹಾಗೆ ಸರ್ಕಾರದವರು ತಕ್ಕ ಪ್ರೋತ್ಸಾಹ ಕೊಡಬೇಕು. ಏಕೆಂದರೆ ನಮ್ಮಲ್ಲಿ ಕೈಗಾರಿಕಾ ನಿಷ್ಣಾವಂತರು ಅನೇಕ ಜನರಿದ್ದಾರೆ. ಅವರಿಗೆ ಸರ್ಕಾರದ ಸಹಾಯ ಹಾಗೂ ಪ್ರೋತ್ಸಾಹ ಸರಿಯಾಗಿಲ್ಲದೇ ಇರುವುದರಿಂದಲೇ ಕೈಗಾರಿಕೋದ್ಯಮ ನಮ್ಮ ದೇಶದಲ್ಲಿ ಸಾಕಷ್ಟು ಬೆಳವಣಿಗೆಯಾಗಿಲ್ಲ. ಪರ್ಮಿಟ್ಟುಗಳಿಗಾಗಿ ಅನೇಕ ಬೋಗಸ್ ಪರ್ಮಿಟ್ ಹೋಲ್ಡರ್ಸ್ ಬರುತ್ತಾರೆ. ಅಂತಹವರಿಂದಲೇ ಕೈಗಾರಿಕೆ ಪ್ರಗತಿಯಲ್ಲಿ ನಮ್ಮ ದೇಶಕ್ಕೆ ಒಂದು ದೊಡ್ಡ ಅವಮಾನವಾಗಿದೆ. ಶರಾವತಿ ವಿದ್ಯುಚ್ಛಕ್ತಿಯನ್ನು ಹೊರದೇಶಗಳಿಗೆ ಕೊಟ್ಟು ನಮ್ಮ ದೇಶದ ಕೈಗಾರಿಕೆಗಳಿಂದ ಪಡೆಯತಕ್ಕ ಉಪಯೋಗವನ್ನು ನಾವು ಪಡೆಯದೇ ಇರುವುದರಿಂದ ಇವರಿಗೆ ಒಳ್ಳೆಯ ಹೆಸರನ್ನು ಹೇಳತಕ್ಕವರೇ ಇಲ್ಲ. ಇಂತಹ ಅನ್ಯಾಯದಿಂದ ಮೈಸೂರು ದೇಶದ ಕೈಗಾರಿಕೆಯ ಪ್ರಗತಿ ಬಹಳವಾಗಿ ಹಿಂದುಳಿದಿದೆ.

ಇನ್ನು ಪ್ರಾಮುಖ್ಯವಾಗಿ ಆಹಾರೋತ್ಪತ್ತಿ ಅಧಿಕವಾಗಿ ಆಗಬೇಕಾಗಿದೆ. ಅದಕ್ಕಾಗಿ ಮೂರು ಇಲಾಖೆಗಳು ಬಹಳ ಚೆನ್ನಾಗಿ ಕೆಲಸಮಾಡಬೇಕಾಗಿದೆ. ಅವು ಯಾವುವೆಂದರೆ ವ್ಯವಸಾಯ ಇಲಾಖೆ, ಆಹಾರ ಇಲಾಖೆ ಮತ್ತು ನೀರಾವರಿ ಇಲಾಖೆ. ಇವು ಮೂರು ಇಲಾಖೆಗಳು ಚೆನ್ನಾಗಿ ಒಂದಕ್ಕೊಂದು ಹೊಂದಿಕೊಂಡು ಕೆಲಸಮಾಡಿದರೆ ದೇಶದಲ್ಲಿ ಹೆಚ್ಚಿನ ಆಹಾರೋತ್ಪತ್ತಿಯಾಗುತ್ತದೆ. ಹಣಕಾಸಿನ ಸಚಿವರು ಈ ವಿಚಾರದಲ್ಲಿ ಒಂದು ಹೊಸ ಕಳೆಯನ್ನು ಕೊಡುತ್ತಾರೆಂದು ನಾನು ಭಾವನೆ ಮಾಡಿಕೊಂಡಿದ್ದೆನು. ಆದರೆ ಈ ಆಹಾರಸಮಸ್ಯೆಯನ್ನು ಬಗೆಹರಿಸುವುದಕ್ಕೆ ಈ ವರ್ಷದ ಬಡ್ಜೆಟ್ಟಿನಲ್ಲಿ ಇರುವ ಏನು ಹಣವನ್ನು ಒದಗಿಸಿದ್ದಾರೆಂದು ನಾನು ಪ್ರಶ್ನೆಮಾಡಬೇಕಾಗಿದೆ. ಈಗಿನ ಒಂದು ಆಹಾರ ಅಭಾವ ಪರಿಸ್ಥಿತಿಯಲ್ಲಿ ಆಹಾರದ ಇಲಾಖೆ ಯಾವ ರೀತಿಯಲ್ಲಿ ಕೆಲಸಮಾಡಬೇಕು, ಅದರ ರೂಪರೇಷೆಗಳು ಏನಿರಬೇಕು, ಸ್ಟ್ಯಾಟುಟರಿ ರೇಷನಿಂಗ್ ಪದ್ಧತಿಯನ್ನು ಜಾರಿಮಾಡಬೇಕಾದರೆ ಆಹಾರ ವಹಿವಾಟುಗಳನ್ನು ನಡೆಸಬೇಕೇ ಬೇಡವೇ ಎಂಬೀ ಬಗ್ಗೆ ಏನು ಹಣವನ್ನೂ ಕೂಡ ಬಡ್ಜೆಟ್ಟಿನಲ್ಲಿ ಒದಗಿಸಿಲ್ಲವೆಂದು ಹೇಳುತ್ತೇನೆ. ಆ ವಿಷಯದಲ್ಲಿ ಇವರೇ ಕೈ ಎತ್ತಿದ್ದಾರೆ. ಅವರ ಭಾಷಣದಲ್ಲಿ ಆ ಬಗ್ಗೆ ಒಂದು ದೃಢವಾದ ನೀತಿಯನ್ನು ತೋರಿಸಬೇಕಾಗಿತ್ತು. ಹಿಂದೆ ಇವರು ಸಹಕಾರ ಸಚಿವರಾಗಿದ್ದಾಗ ಅನೇಕ ಸಾರಿ ಹೇಳಿದ್ದಾರೆ. ಈ ದೇಶದಲ್ಲಿ ಏನೇ ಕಷ್ಟ ಬರಲಿ ಆಹಾರ ವಿಚಾರವನ್ನು ಸರ್ಕಾರವೇ ನೇರವಾಗಿ ನಡೆಸುತ್ತದೆಂದು ಹೇಳಿದ್ದಾರೆ. ಆದ್ದರಿಂದ ಇವರು ಹಣಕಾಸಿನ ಪತ್ರವನ್ನು ಇಲ್ಲಿ ಮಂಡನೆಮಾಡುವ ಕಾಲದಲ್ಲಿ ಆ ಒಂದು ನಿಲುವನ್ನು ವ್ಯಕ್ತಮಾಡಬಹುದಾಗಿತ್ತು. ಸರ್ಕಾರವೇ ಅದರ ಒಂದು ಜವಾಬ್ದಾರಿಯನ್ನು ತೆಗೆದುಕೊಂಡು ನಡೆಸುತ್ತೇವೆ ಎಂದು ಹೇಳತಕ್ಕ ಒಂದು ನಿಲುವನ್ನು ನಾನು ಇವತ್ತಿನ ಹಣಕಾಸಿನ ಪತ್ರದಲ್ಲಿ ಕಾಣದವನಾಗಿದ್ದೇನೆ. ವ್ಯವಸಾಯಾಭಿವೃದ್ಧಿ ಹೆಚ್ಚಿಗೆ ಆಗಬೇಕಾಗಿದೆ. ಇವತ್ತು ಮುಖ್ಯವಾಗಿ ಬೇಕಾಗಿರತಕ್ಕದ್ದು ವ್ಯವಸಾಯದ ಉಪಕರಣಗಳು, ಗೊಬ್ಬರ, ಹಣಸಹಾಯ-ಇವೆಲ್ಲಾ ರೈತರಿಗೆ ಬೇಕು. ಇವರು ಇವನ್ನೆಲ್ಲಾ ರೈತರಿಗೆ ಒದಗಿಸುತ್ತಿದ್ದೇವೆಂದು ಬಾಯಿನಲ್ಲಿ ಹೇಳುತ್ತಿದ್ದಾರೆಯೇ ಹೊರತು ಕಾರ್ಯತಃ ಆ ವಿಚಾರದಲ್ಲಿ ಎಷ್ಟರಮಟ್ಟಿಗೆ ಮುಂದುವರಿದಿದ್ದಾರೆಂದು ನಾನು ಕೇಳುತ್ತೇನೆ. ಹಿಂದೆ ಸಚಿವರಾಗಿದ್ದಂತಹ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಹಾಸನ ಜಿಲ್ಲೆಗೆ ಬಂದಾಗ್ಗೆ ಅಲ್ಲಿನ ಜನರ ಕಷ್ಟಪರಿಸ್ಥಿತಿಯನ್ನು ಕಂಡು ಸರ್ಕಾರ ಜನರಿಗೆ ಎಲ್ಲ ರೀತಿಯಲ್ಲಿಯೂ ಸಹಾಯಮಾಡುತ್ತದೆ, ನಾನೂ ಕೂಡ ಸಹಾಯಮಾಡುವುದಕ್ಕೆ ತಯಾರಿದ್ದೇನೆಂದು ಹೇಳಿದರು. ಆ ರೀತಿಯಾಗಿ ಹೇಳಿ ಅವರು ಎಲ್ಲಾ ಕಡೆಗಳಲ್ಲಿಯೂ ತಿರುಗಿ ಒಂದು ವರದಿಯನ್ನು ಅವರೇ ತಯಾರುಮಾಡಿದರು. ಅವರು ಜನಗಳಲ್ಲಿ ಹೋಗಿ ಬಾವಿ ಬೇಕೇ, ಗೊಬ್ಬರ ಬೇಕೇ, ಏನೇನು ಸಹಾಯಬೇಕು ಎಂದು ಕೇಳಿದಾಗ ಅಲ್ಲಿನ ಜನ ಬಹಳ ಉತ್ಸಾಹದಿಂದ ಬಂದು ಅವರ ಅಹವಾಲನ್ನು ಕೊಟ್ಟಿದ್ದಾರೆ. ಅವೆಲ್ಲಾ ಏನಾಯಿತು, ಆ ವರದಿಯೇನಾಯಿತು ಅದರ ಬಗ್ಗೆ ಏನು ಕ್ರಮವನ್ನು ಈ ಸರ್ಕಾರ ತೆಗೆದುಕೊಂಡಿದೆ ಎಂದು ನಾನು ಪ್ರಶ್ನೆಮಾಡುತ್ತೇನೆ. ಅವರು ಆ ವರದಿಯ ಒಂದು ನಕಲನ್ನು ಕಳುಹಿಸಿದ್ದಾರೆ ಈಗ ನಮಗೆ ಆಹಾರದ ಸ್ವಯಂಪರಿಪೂರ್ಣತೆ ಬರಬೇಕಾದರೆ ನಮ್ಮ ದೇಶದಲ್ಲಿ ಎಷ್ಟು ನೀರಾವರಿ ಬಾವಿಗಳಾಗಬೇಕು, ಎಷ್ಟು ಗೊಬ್ಬರವನ್ನು ರೈತರಿಗೆ ಕೊಡಬೇಕು, ಪಂಪುಸೆಟ್ಟುಗಳು ಎಷ್ಟು ಬೇಕಾಗಿವೆ, ಯಾರಿಗೆ ಪಂಪುಸೆಟ್ಟುಗಳನ್ನು ಹಾಕಲಿಕ್ಕೆ ಶಕ್ತಿ ಇಲ್ಲವೋ ಅಂತಹವರು ಎಷ್ಟು ಮಂದಿ ಇದ್ದಾರೆಂಬುದನ್ನು ಸರ್ಕಾರ ನೋಡಬೇಕು ಯಾರ್ಯಾರಿಗೆ ಹಣದ ಅಭಾವದಿಂದ ಶಕ್ತಿ ಇಲ್ಲವೋ ಅಂತವರಿಗೆ ಸರ್ಕಾರವೇ ನೇರವಾಗಿ ಹಣದ ನೆರ

ವನ್ನು ಕೊಡಬೇಕು. ಎಲ್ಲಿ ಮಳೆಯಾಗಿಲ್ಲವೋ ಅಲ್ಲಿ ಯಥೇಚ್ಛವಾಗಿ ನೀರಿನ ಸೌಕರ್ಯಗಳನ್ನುಂಟು ಮಾಡಬೇಕು. ಆದರೆ ಜನರಿಗೆ ನೀರು ಕೊಡಿಸುತ್ತೇವೆಂದು ಮೋಸಮಾಡಬೇಡಿ. ಅನೇಕ ಜನರು ನಮಲ್ಲಿ ಬಂದು ಆ ರೀತಿ ಹೇಳಿದ್ದಾರೆ. ಹಾಗೆ ಹೇಳಿದ ಮಾತು ಬಹಳ ತಪ್ಪು. ಹಿಂದೆ ಇವರು ಏನು ಭರವಸೆಯನ್ನು ಕೊಟ್ಟಿದ್ದಾರೋ ಅವಿನ್ನೂ ಕಾರ್ಯಗತವಾಗಿಲ್ಲ. ಅವರು ವರದಿಯನ್ನು ಕೊಟ್ಟ ಮೇಲೆ ಎಲ್ಲೆಲ್ಲಿ ಏನು ಕೆಲಸಗಳನ್ನು ಮಾಡಿದ್ದಾರೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಅವರು ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರವಾಸ ಮಾಡಿ ಯಾವ ಯಾವ ಜಿಲ್ಲೆಯಲ್ಲಿ ಏನೇನು ಪರಿಸ್ಥಿತಿಇದೆ, ಅಲ್ಲಿ ಏನೇನು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ವರದಿಯನ್ನು ಮಾಡಿದ್ದರೋ ಅದನ್ನು ಕಾರ್ಯಗತ ಮಾಡತಕ್ಕ ವಿಚಾರ ಇದರಲ್ಲಿ ಇಲ್ಲ. ದೇಶದಲ್ಲಿ ಇವೊತ್ತು ಅಭಾವ ಪರಿಸ್ಥಿತಿ ಇರುವಾಗ ದನಕರು ಗಳಿಗೆ ಮೇವು ನೀರು ಇಲ್ಲದೆ ಇರುವಾಗ, ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲದೆ ಇರುವ ಕಾಲ ದಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡಿದರೆ ಈ ದೇಶದಲ್ಲಿ ಯಾವ ಮಂತ್ರಿಗಳು ಏನು ಕೆಲಸ ಮಾಡುತ್ತಾರೆ ಎಂದು ನಾನು ಕೇಳುತ್ತೇನೆ. ದೇಶದಲ್ಲಿ ಜನ ಅನ್ನ ನೀರು ಇಲ್ಲದೆ ಪರಿತಪಿಸುತ್ತಿದ್ದಾರೆ, ಜನ ನಾಳೆಯೋ ನಾಡಿದ್ದೋ ಸಾಯುತ್ತಾರೆ ಮಕ್ಕಳ ಗತಿ ಏನು ? ಜನಗಳ ಕಷ್ಟವನ್ನು ತಡೆಯಲಾರದೆ ಆಕಾಶದ ಕಡೆಗೆ ನೋಡುತ್ತಿದ್ದಾರೆ. ಇಂಥಾ ಕಾಲದಲ್ಲಿ ನೀವು ಜನತೆಗೆ ಸಹಾಯ ಮಾಡದಿದ್ದರೆ ಇನ್ನೆಂತಹ ಕಾಲದಲ್ಲಿ ಸಹಾಯ ಮಾಡುತ್ತೀರ ? ನಿಮ್ಮ ಸರ್ಕಾರ ದಲ್ಲಿ ದಕ್ಷತೆಯಿಲ್ಲ. ನಿಮ್ಮಲ್ಲಿ ಪ್ರಭಾವ ಇಲ್ಲದೆ ಇರುವುದು ಎದ್ದು ಕಾಣುತ್ತದೆ. ಇವರು ನಿಜವಾ ಗಿಯೂ ನಮ್ಮ ದೇಶವನ್ನು ಒಳ್ಳೆಯ ದಾರಿಗೆ ತೆಗೆದುಕೊಂಡು ಹೋಗುವುದಿಲ್ಲ. ಜನಗಳು ಕಂಗೆಟ್ಟಿ ದ್ದಾರೆ ನೀವು ಮಾಡುತ್ತಾ ಇರತಕ್ಕ ಪರಿಸ್ಥಿತಿಯಲ್ಲಿ ಜನ ಯಾವ ರೀತಿಯ ಸಹಾಯವನ್ನೂ ಯಾವ ಒಂದು ನೆರವನ್ನೂ ಕಾಣದವರಾಗಿದ್ದಾರೆ. ನಾನು ಸರ್ಕಾರದವರನ್ನು ಕೇಳುತ್ತೇನೆ, ಮುಖ್ಯ ಮಂತ್ರಿ ಗಳನ್ನು ಕೇಳುತ್ತೇನೆ. ಆಹಾರೋತ್ಪಾದನೆಯನ್ನು ಹೆಚ್ಚುಮಾಡುವ ದೃಷ್ಟಿಯಿಂದ ಯಾವ ಯಾವ ಕೆಲಸಗಳನ್ನು ಮಾಡಿದ್ದೀರಿ, ಯಾವ ಒಂದು ಸಹಾಯವನ್ನು ರೈತರಿಗೆ ಮಾಡಿದ್ದೀರಿ ? ವ್ಯವಸಾಯ ಇಲಾಖೆ ಆಹಾರದ ಇಲಾಖೆ ಮತ್ತು ನೀರಾವರಿಯ ಇಲಾಖೆ ಈ ಮೂರನ್ನೂ ಒಬ್ಬ ಸಚಿವರಿಗೆ ಕೊಡಿ. ನಿಮ್ಮ 27 ಜನ ಸಚಿವರು 27 ಕೆಲಸಗಳನ್ನು ಮಾಡುವುದರಿಂದ ಈ 27 ಕುದುರೆಗಳನ್ನೂ ಮುಖ್ಯ ಮಂತ್ರಿಗಳು ಹಿಡಿತದಲ್ಲಿ ಇಟ್ಟುಕೊಂಡು ಅವುಗಳ ಮೇಲೆ ಸವಾರಿ ಮಾಡುವುದು ಹೇಗೆ ? ಅವು ಲಂಗು ಲಗಾಮು ಇಲ್ಲದೆ ಓಡುವುದಕ್ಕೆ ಹೊರಡುತ್ತವೆ ಆದ್ದರಿಂದ ನಾವು ಆಹಾರದಲ್ಲಿ ಸ್ವಪರಿಪೂರ್ಣತೆಯನ್ನು ಹೊಂದಬೇಕಾಗಿದ್ದರೆ ಆಹಾರೋತ್ಪಾದನೆಯನ್ನು ವಾರ್ ಫುಟಿಂಗ್ ಎಂದು ಹೇಳಿ ಭಾವನೆ ಮಾಡಿ ಕೊಂಡು ಅದರ ಬಗ್ಗೆ ಹೆಚ್ಚಿನ ಶ್ರದ್ಧೆಯನ್ನವಹಿಸಿ ಕೆಲಸಮಾಡಬೇಕು. ಈ ದೃಷ್ಟಿಯಿಂದ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಬೇಕಾದರೆ ಆಹಾರ, ವ್ಯವಸಾಯ ಮತ್ತು ನೀರಾವರಿ ಶಾಖೆಗಳನ್ನು ಒಬ್ಬ ಸಚಿವರಿಗೆ ವಹಿಸಬೇಕು. ಇದರ ಜೊತೆಗೆ ಅವರು ಸ್ವಲ್ಪ ಹೆಚ್ಚಿನ ಶ್ರದ್ಧೆಯನ್ನುವಹಿಸಿ ಕೆಲಸ ಮಾಡಬೇಕು. ಆ ರೀತಿ ಮಾಡುವುದಾದರೆ ಆಹಾರದ ಸ್ವಪರಿಪೂರ್ಣವಾಗುತ್ತದೆ ಇಲ್ಲದಿದ್ದರೆ ಖಂಡಿತಾ ಆಗುವುಧಿಲ್ಲ, ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಆಹಾರ ಪರಿಸ್ಥಿತಿಯ ವಿಚಾರದಲ್ಲಿ ಮೊನ್ನೆ ಆಹಾರ ಮಂತ್ರಿಗಳು ಈ ಸಭೆಯಲ್ಲಿ ಹೇಳಿಕೆಯನ್ನು ಕೊಟ್ಟಾಗ ನಾವು ಮದ್ರಾಸು ಮತ್ತು ಆಂಧ್ರದಿಂದ ಆಹಾರವನ್ನು ತರಿಸುತ್ತಿದ್ದೇವೆ, ಶೇಖರಣೆ ಮಾಡುತ್ತಿದ್ದೇವೆ ಎಂದು ಹೇಳಿದರು ಮತ್ತು ದೇಶದಲ್ಲಿ ಆಹಾರವನ್ನು ಲೆವಿ ಮೂಲಕ ಶೇಖರಣೆಮಾಡುತ್ತಿದ್ದೇವೆಂದು ಹೇಳಿದರು. ಈ ಆಹಾರಧಾನ್ಯವೆಲ್ಲ ಶೇಖರಣೆಯ ವಿಚಾರದಲ್ಲಿ ಬಹಳ ಗೊಂದಲವಿದೆ. ಇದಕ್ಕೆ ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ ಈ ಧಾನ್ಯ ವಸೂಲಿ ಸಂಬಂಧದಲ್ಲಿ ತರೀಕರೆಯಿಂದ ನನಗೆ ಒಂದು ಟೆಲಿಗ್ರಾಮು ಬಂದಿದೆ. ಈ ಟೆಲಿಗ್ರಾಮು ಮಾಜಿ ಡೆಪ್ಯುಟಿ ಸ್ಪೀಕರಿಂದ ನನಗೆ ಬಂಧಿದೆ. ಈ ಧಾನ್ಯ ವಸೂಲಿ ಸಂಬಂಧದಲ್ಲಿ ಅನೇಕ ಅಕ್ರಮಗಳು ನಡೆಯುತ್ತಿವೆ, ಅಲ್ಲಿ ಕೆಲವು ಜನಗಳು ಮತ್ತು ತಹಶೀಲ್ದಾರರು ನಿಂತುಕೊಂಡು ರೈತರನ್ನು ಲೂಟಿ ಮಾಡಿಸುತ್ತಿದ್ದಾರೆ ಎಂದು ನನಗೆ ಬರೆದಿದ್ದಾರೆ. ಅಧಿಕಾರಿಗಳಿಗೆ ತಾವು ಅಧಿಕಾರಿಗಳಿಗೆ ಏನು ಆಜ್ಞೆಯನ್ನು ಕೊಟ್ಟಿದ್ದೀರಿ, ಅದನ್ನು ಅವರು ಚಲಾಯಿಸುವಾಗ ಅವರು ಹೇಗೆ ಎಷ್ಟರಮಟ್ಟಿಗೆ ಇರಬೇಕು ಎಂಬುದು ಮುಖ್ಯವಾದದ್ದು. ಜನಗಳು ಕಷ್ಟದಲ್ಲಿರುವಾಗ ಲೆವಿ ಹಾಕಿರತಕ್ಕ ಪ್ರದೇಶದಲ್ಲಿ ಯಾವ ಪ್ರದೇಶದಲ್ಲಿ ಎಷ್ಟರ ಮಟ್ಟಿಗೆ ಆಹಾರದ ಅಭಾವ ಇದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಲೆವಿಯನ್ನು ವಸೂಲು ಮಾಡಬೇಕು. ಲೆವಿಯನ್ನು ವಸೂಲು ಮಾಡುವಾಗ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ವರ್ತನೆ ಮಾಡದೇ ಹೋದರೆ ಅದರಿಂದ ಅನಿಷ್ಟ ಪರಿಣಾಮಗಳು ಉಂಟಾಗುತ್ತವೆ. ಈ ಆಹಾರ ಧಾನ್ಯದ ಲೆವಿ ವಸೂಲಿಯಲ್ಲಿ ಏನು ಕಿರುಕುಳಗಳಾ ಗುತ್ತಿವೆ ಎನ್ನುವ ವಿಷಯದಲ್ಲಿ ಟೆಲಿಗ್ರಾಂ ಬಂದಿರುವುದಲ್ಲದೆ, ಪತ್ರಿಕೆಗಳಲ್ಲಿ ಕೂಡ ನಾವು ಅನೇಕ ವಿಚಾರಗಳನ್ನು ಓದಿದ್ದೇವೆ. ಮೊನ್ನೆ ಚಿಂತಾಮಣಿಯಲ್ಲಿ ಒಬ್ಬರು ಸಾಹೇಬರು ಒಬ್ಬ ರೈತರ ಕೈಗೆ ಬೇಡಿ ಹಾಕಿಕೊಂಡು ಅವರನ್ನು ಕರೆದುಕೊಂಡು ಹೋದ ಪ್ರಸಂಗವೂ ಕೂಡ ಪತ್ರಿಕೆಯಲ್ಲಿ ಬಂದಿತ್ತು.

(ಶ್ರೀ ಎಸ್. ಶಿವಪ್ಪ)

ಆದ್ದರಿಂದ ಈ ಆಹಾರ ಧಾನ್ಯ ಲೆವಿ ವಸೂಲಿಯಲ್ಲಿ ಅಧಿಕಾರಿಗಳು ಕಟ್ಟುನಿಟ್ಟಾಗಿ ಎಷ್ಟರ ಮಟ್ಟಿಗೆ ನಿಯಮದಿಂದ ಕೆಲಸ ಮಾಡಬೇಕೆಂಬ ಬಗ್ಗೆ ಅವರಿಗೆ ಸೂಚನೆಯನ್ನು ಕೊಟ್ಟರೆ ಅದರಿಂದ ರೈತರು ಬದುಕಿಕೊಳ್ಳುತ್ತಾರೆ ಎಂದು ನಾನು ಭಾವನೆ ಮಾಡುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರವಾಗಿ ನಾನು ಕೆಲವು ಮಾತುಗಳನ್ನು ಹೇಳುತ್ತೇನೆ. ವಿದ್ಯಾಭ್ಯಾಸದ ಇಲಾಖೆ ಬಹಳ ದೊಡ್ಡ ಇಲಾಖೆ ಈ ಇಲಾಖೆಗೆ ಈ ವರ್ಷ 29 ಕೋಟಿ ರೂಪಾಯಿಗಳನ್ನು ನಾವು ಖರ್ಚುಮಾಡುತ್ತಿದ್ದೇವೆ. ಈ ಹಣ ವರ್ಷೇ ವರ್ಷೇ ಏರುತ್ತಿದೆ. ವಿಧ್ಯಾಭ್ಯಾಸಕ್ಕಾಗಿ ವರ್ಷೇ ವರ್ಷೇ ನಾಲ್ಕು-ಐದು ಕೋಟಿ ರೂಪಾಯಿಗಳನ್ನು ಜಾಸ್ತಿ ಖರ್ಚುಮಾಡುತ್ತಿದೆ. ಈ 29 ಕೋಟಿ ರೂಪಾಯಿಗಳನ್ನು ಈ ಇಲಾಖೆಗೆ ಖರ್ಚುಮಾಡುವಾಗ ಈ ಹಣ ಎಷ್ಟರ ಮಟ್ಟಿಗೆ ಖರ್ಚಾಗುತ್ತದೆ ಮತ್ತು ಈ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವ ವಿಚಾರವನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಈ ವಿದ್ಯಾಭ್ಯಾಸ ಇಲಾಖೆಯಲ್ಲಿ ಅನೇಕ ಗೊಂದಲಗಳಿವೆ. ಇದರಲ್ಲಿ ನಾಲ್ಕು-ಐದು ಜನ ಡೆಪ್ಯುಟಿ ಡೈರೆಕ್ಟರುಗಳು ಎಲಿಮೆಂಟರಿ ವಿದ್ಯಾಭ್ಯಾಸಕ್ಕೆ ಒಬ್ಬರು; ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಒಬ್ಬರು, ಹೀಗೆ ಒಂದೊಂದು ಬಾಬುಗಳಿಗೆ ಒಬ್ಬೊಬ್ಬರು ಇದ್ದಾರೆ. ಅವರಲ್ಲಿ ಒಂದು ಗುಂಪು ಮನೋಭಾವ ಸೇರಿಕೊಂಡು ಬಂದಿದೆ. ಅದರಲ್ಲಿ ಒಂದು ಒಗ್ಗಟ್ಟು ಇಲ್ಲ. ಒಂದು ಹಿಡಿತ ಇಲ್ಲ. ಅದರಲ್ಲಿ ಒಬ್ಬೊಬ್ಬರು ಒಂದೊಂದು ಮುಖವಾಗಿ ಹೋಗುತ್ತಿದ್ದಾರೆ. ಈ ವಿದ್ಯಾಭ್ಯಾಸದ ಇಲಾಖೆಯಲ್ಲಿ ಒಂದು ಹಿಡಿತವಿಲ್ಲ. ಅದು ತನ್ನಷ್ಟಕ್ಕೆ ತಾನೇ ಹೋಗುತ್ತಿದೆ. ಇದರ ಆಡಳಿತದಲ್ಲಿ ಒಂದು ಬಿಗಿ ಇಲ್ಲ. ಅನೇಕ ಸ್ಕೂಲುಗಳಲ್ಲಿ ಕೆಲಸ ಮಾಡುತ್ತಿರುವ ಹೆಣ್ಣು ಮಕ್ಕಳು ನಮ್ಮ ಮಾನ ಅಪಹರಣ ವಾಗುತ್ತಿದೆ, ನಮ್ಮ ಮಾನವನ್ನು ರಕ್ಷಣೆ ಮಾಡುವ ಸರ್ಕಾರ ಇಲ್ಲವೇ ? ಎಂದು ಅನೇಕ ಹೆಣ್ಣು ಮಕ್ಕಳು ನೊಂದುಕೊಂಡು ನನಗೆ ಪತ್ರವನ್ನು ಬರೆಯುತ್ತಿದ್ದಾರೆ.

Sri S. NIJALINGAPPA (Chief Minister).—Please send then to me.

ಶ್ರೀ ಎಸ್. ಶಿವಪ್ಪ.—ಮುಖ್ಯ ಮಂತ್ರಿಗಳಿಗೆ ಬರೆದು ಅದರ ಕಾಪಿಯನ್ನು ನನಗೆ ಕಳುಹಿಸಿದ್ದಾರೆ. ಕೆಲವರು ಪ್ರಿಂಟ್ ಮಾಡಿ ಹಂಚಿದ್ದಾರೆ. ಇದು ಯಾವ ಸರ್ಕಾರಕ್ಕೂ ಮನ್ನಣೆ ಬರತಕ್ಕದ್ದಲ್ಲ.

Sri S. NIJALINGAPPA.—I am sorry, I have not recieved a single letter, I request the member to send all the copies.

ಶ್ರೀ ಎಸ್. ಶಿವಪ್ಪ.—ನನಗೆ ಬಂದಿರುವ ಪತ್ರಗಳು ಮುಖ್ಯ ಮಂತ್ರಿಗಳಿಗೂ ಮತ್ತು ವಿದ್ಯಾ ಮಂತ್ರಿಗಳಿಗೂ ಬಂದಿವೆ. ನಿಮಗೆ ಕಳುಹಿಸಿ ಅದರ ಕಾಪಿಯನ್ನು ನನಗೆ ಕಳುಹಿಸಿದ್ದಾರೆ. ಯಾವ ಇಲಾಖೆಯಲ್ಲಿ ಮಾನ ರಕ್ಷಣೆ ಮಾಡತಕ್ಕದ್ದೋ ಯಾವ ಇಲಾಖೆಯಲ್ಲಿ ಸದ್ಗುಣ ಸಂಪನ್ನರಾದ, ವಿದ್ಯಾವಂತರಾದ ಯುವಕ ಯುವತಿಯರನ್ನು ತಯಾರು ಮಾಡುತ್ತಾರೆಯೋ ಆ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಲ್ಲಿ ಕೂಡ ಮಾರಲ್ ಸ್ಟ್ಯಾಂಡರ್ಡ್ ಇಲ್ಲ ಎಂದು ಹೇಳಿದರೆ ಅವರಿಂದ ಎಂತಹ ಶಿಕ್ಷಣವನ್ನು ನಿರೀಕ್ಷಣೆ ಮಾಡಬಹುದು ?

ಇನ್ನು ವಿಶ್ವವಿದ್ಯಾನಿಲಯದ ಪರಿಸ್ಥಿತಿಯನ್ನು ತೆಗೆದುಕೊಳ್ಳುವುದಾದರೆ, ಮೈಸೂರು ದೇಶದಲ್ಲಿ ನಾಲ್ಕು ವಿಶ್ವವಿದ್ಯಾನಿಲಯಗಳಿವೆ. ಇದರಲ್ಲಿ ಅಗ್ರಿಕಲ್ಚರಲ್ ವಿಶ್ವವಿದ್ಯಾನಿಲಯವೂ ಸೇರಿದೆ. ಮೈಸೂರು, ಬೆಂಗಳೂರು ಮತ್ತು ಕರ್ನಾಟಕ ಈ ಮೂರು ವಿಶ್ವವಿದ್ಯಾನಿಲಯಗಳೂ ಕೂಡ ದೊಡ್ಡ ವಿಶ್ವವಿದ್ಯಾನಿಲಯಗಳು. ಬೆಂಗಳೂರು ವಿಶ್ವವಿದ್ಯಾನಿಲಯ ಹೊಸದಾಗಿ ಪ್ರಾರಂಭವಾಗಿದೆ. ಎರಡು ವರ್ಷ ಆಯಿತು. ಇದರ ಉಪಕುಲಪತಿಗಳು ಮೊನ್ನೆ ತಾನೆ ನಿಧನರಾದರು. ಅವರು ನಿಧನರಾದ ಮೇಲೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಗಳಿಲ್ಲ. ಈಗ ಸಧ್ಯಕ್ಕೆ ಟೆಂಪರರಿಯಾಗಿ ವಿದ್ಯಾ ಇಲಾಖೆಯ ಕಾರ್ಯದರ್ಶಿಯವರನ್ನು ಅದಕ್ಕೆ ಉಪಕುಲಪತಿಗಳಾಗಿ ನೇಮಕ ಮಾಡಿದ್ದಾರೆ. ಇವೊತ್ತು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೂ ಮೈಸೂರು ವಿಶ್ವವಿದ್ಯಾನಿಲಯಕ್ಕೂ ಒಂದು ನೀತಿಯನ್ನು ಇಟ್ಟುಕೊಂಡಿದ್ದಾರೆ. ಅದು ಏನೆಂದರೆ, ನಮ್ಮ ದೇಶದ ವಿಶ್ವವಿದ್ಯಾನಿಲಯದ ಆಡಳಿತವನ್ನು ಮಾಡುವುದಕ್ಕೆ ಉಪಕುಲಪತಿಗಳನ್ನು ಹೊರಗಡೆಯಿಂದ ಆಮದು ಮಾಡಿಕೊಳ್ಳುತಿದ್ದಾರೆ. ನಮ್ಮ ದೇಶದಲ್ಲಿ ನಮ್ಮ ವಿಶ್ವವಿದ್ಯಾನಿಲಯವನ್ನು ಆಳತಕ್ಕ ಜನ ಇಲ್ಲವೇ ? ನಮ್ಮ ವಿಶ್ವವಿದ್ಯಾನಿಲಯದ ಆಡಳಿತವನ್ನು ಮಾಡುವುದಕ್ಕೆ ಹೊರಗಡೆಯಿಂದ ಉಪಕುಲಪತಿಗಳನ್ನು ಏತಕ್ಕೋಸ್ಕರ ಆಮದು ಮಾಡಿಕೊಳ್ಳುತ್ತೀರಿ ? ಮೈಸೂರು ರಾಜ್ಯದಲ್ಲಿ ವಿದ್ಯಾಭ್ಯಾಸವಲ್ಲಿ

ಮುಂದುವರಿದ ಅನೇಕ ಜನ ವಿದ್ಯಾವಂತರು ಹೊರಗಡೆ ಹೋಗಿ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಯುನೈಟೆಡ್ ನೇಷನ್ಸಿಗೆ ಹೋಗಿ ಕೆಲಸ ಮಾಡಿ ಅಲ್ಲಿ ಹೆಚ್ಚಿನ ಗೌರವವನ್ನು ಸಂಪಾದನೆ ಮಾಡಿದ್ದಾರೆ. ನಮ್ಮ ದೇಶದ ಅಂಥ ವಿದ್ಯಾವಂತರನ್ನು ನಮ್ಮ ವಿಶ್ವದ್ಯಾನಿಲಯದಲ್ಲಿ ನೇಮಿಸಿಕೊಂಡು ಕೆಲಸ ಮಾಡುವುದಾದರೆ ಮೈಸೂರು ರಾಜ್ಯದ ವಿಶ್ವವಿದ್ಯಾನಿಲಯಗಳು, ಮೈಸೂರು ವಿದ್ಯಾ ಇಲಾಖೆ ಚನ್ನಾಗಿ ಕೆಲಸ ಮಾಡುತ್ತದೆ. ಅವರಿಗೆ ಭಯವಿರುತ್ತದೆ, ಭಕ್ತಿ ಇರುತ್ತದೆ ನಮ್ಮ ದೇಶದ ಜನ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಭಯ ಭಕ್ತಿಯಿಂದ ಹೆಚ್ಚು ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ. ನಮ್ಮ ದೇಶದಲ್ಲಿ ಶಕ್ತಿವಂತರು, ವಿದ್ಯಾವಂತರು ಇದ್ದಾರೆ. ನಮ್ಮ ವಿಶ್ವವಿದ್ಯಾನಿಲಯಕ್ಕೆ ಹೊರಗಿನಿಂದ ಉಪಕುಲಪತಿಗಳನ್ನು ತರತಕ್ಕಂಥ ಭಾವನೆ ಏನಿದೆ ಅದನ್ನು ದಯವಿಟ್ಟು ತೊಡೆದುಹಾಕಬೇಕು. ಮೈಸೂರು ದೇಶದಲ್ಲಿ ಕನ್ನಡಿಗರಿಗೆ ಪ್ರೋತ್ಸಾಹ ಕೊಡಬೇಕು. ನಮ್ಮವರಿಗೆ ನಾವೇ ಮರ್ಯಾದೆಯನ್ನು ಕೊಡದೇ ಇದ್ದರೆ ಹೊರಗಿನವರು ನಮ್ಮವರಿಗೆ ಮರ್ಯಾದೆಯನ್ನು ಕೊಡುತ್ತಾರೆಯೇ? ಕನ್ನಡ ದೇಶದ ಜನತೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಖಂಡಿತವಾಗಿಯೂ ಒಳ್ಳೆಯ ಸ್ಥಾನಗಳನ್ನು ಕೊಡತಕ್ಕದ್ದು. ವಿದ್ಯಾಭ್ಯಾಸ ಇಲಾಖೆಯಲ್ಲಿ ಯಾವುದಕ್ಕೆ ಹೆಚ್ಚು ಖರ್ಚಾಗಬೇಕೋ ಅದಕ್ಕೆ ಹೆಚ್ಚು ಖರ್ಚುಮಾಡುವುದಿಲ್ಲ. ಯಾವುದಕ್ಕೆ ಹೆಚ್ಚು ಖರ್ಚು ಆಗಬಾರದೋ ಅದಕ್ಕೆ ಖರ್ಚುಮಾಡುತ್ತಿದ್ದಾರೆ. ಈ ವಿದ್ಯಾಭ್ಯಾಸ ಇಲಾಖೆಯಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಹಣ ಅಪವ್ಯಯವಾಗುತ್ತದೆ ಎನ್ನುವ ಪಟ್ಟಿಯನ್ನು ವಿದ್ಯಾಭ್ಯಾಸದ ಡಿಮ್ಯಾಂಡು ಈ ಸಭೆಯಲ್ಲಿ ಬಂದಾಗ ವಿವರಗಳನ್ನು ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಅಪಾರವಾದ ಹಣವನ್ನು ವ್ಯಯಮಾಡತಕ್ಕದ್ದನ್ನು ನಿಲ್ಲಿಸಿ ಮಿತವ್ಯಯದಿಂದ ಖರ್ಚುಮಾಡಬೇಕೆಂದು ಹೇಳಿದ್ದೇವೆ ಎಂದು ಹೇಳುತ್ತಾರೆ. ಇದು ಏನಿದ್ದರೂ ನಿಮ್ಮ ಹೇಳಿಕೆಯಲ್ಲಿ ಕಾರ್ಯಗತವಾಗುತ್ತಿದೆಯೇ ಹೊರತು ಕಾರ್ಯತಃ ನಡೆದಿಲ್ಲ, ನಿಮ್ಮ ಮಾತಿನಲ್ಲಿ ನೀವೇ ತಪ್ಪಿ ನಡೆದಿದ್ದೀರಿ. ಈಗ ನಾನು ಇಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಜನರಲ್ ಅಡ್ಮಿನಿಸ್ಟ್ರೇಷನ್ ವಿಭಾಗದಲ್ಲಿ ತಾವು ಒಂದೆರಡು ಬಾಬುಗಳಲ್ಲಿ ಜಾಸ್ತಿ ಖರ್ಚು ಮಾಡಿದ್ದೀರಿ. ಅದು ಯಾವ ಬಾಬಿಗಾಗಿ ಎಂದು ನೋಡಿದರೆ, ರಾಜ್ಯಪಾಲರ ಮನೆಯ ಶೃಂಗಾರ ಮಾಡುವುದಕ್ಕೆ, ರಿಪೇರಿಗಳನ್ನು ಮಾಡುವುದಕ್ಕೆ ಹಾಗೂ ಸೋಫಾಗಳನ್ನು ಫರ್ನಿಷ್‌ಮಾಡುವುದಕ್ಕಾಗಿ ಇತ್ಯಾದಿ ಇತ್ಯಾದಿ ಬಾಬುಗಳಿಗಾಗಿ ಹಣ ಖರ್ಚು ಮಾಡುತ್ತಿದ್ದೀರಿ. ಇದಕ್ಕೋಸ್ಕರ ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಬೇಕೆಂದು ಒಂದು ಕಡೆ ಹೇಳಿದ್ದೀರಿ. ನೀವು ಖರ್ಚುಮಾಡಿರುವುದು ಒಂದು ಲಕ್ಷವೇ ಇರಬಹುದು. ಆದರೆ ಅದರ ಅವಶ್ಯಕತೆ ಇತ್ತೆ? ದೇಶದಲ್ಲಿ ಮಿತವ್ಯಯ ಸಾಧಿಸಬೇಕೆಂದು ಹೇಳುತ್ತಿರುವಾಗ ಹೀಗೆ ಅಲಂಕಾರಕ್ಕಾಗಿ ಮಿನಿಸ್ಟರುಗಳಿಗೆ ಮನೆಯನ್ನು ಅಲಂಕಾರ ಮಾಡಲು ಹಾಗೂ ಇನ್ನಿತರ ಕಡೆಗಳಲ್ಲಿ ಖರ್ಚು ಮಾಡಲು ಮಾಡಿದರೆ ಮಿತವ್ಯಯ ಮಾಡಿದಂತಾಯಿತೇ? ಒಂದು ವಿಷಯದಲ್ಲಿ ಮಾತ್ರ ನೀವು ಇಲ್ಲಿ ಮಿತವ್ಯಯವನ್ನು ಸಾಧಿಸಿದ್ದೇವೆ ಅದರಿಂದ ಒಂದು ಲಕ್ಷದಷ್ಟು ಉಳಿತಾಯವಾಗಿದೆ ಎಂದು ಇದರಲ್ಲಿ ಹೇಳಿದ್ದೀರಿ. ಅದು ಡಿಮ್ಯಾಂಡು ನಂಬರು 8. ಪಾರ್ಲಿಮೆಂಟು ಹಾಗೂ ಲೆಜಿಸ್ಲೇಚರು ಬಾಬಿನಲ್ಲಿ ಒಂದು ಲಕ್ಷದಷ್ಟು ಸೇವಿಂಗ್ಸ್ ಎಂದು ತೋರಿಸಿದ್ದೀರಿ. ಇದಕ್ಕೆ ಕಾರಣ ಕೊಟ್ಟಿರುವುದು lesser number of sittings of the Assembly. ಎಂದು ಈ ಶಾಸನ ಸಭೆಯ ಅಧಿವೇಶನವನ್ನು ಕರೆಯುವುದರಲ್ಲಿ ಕಡಿಮೆಮಾಡಿದುದರಿಂದ ಸುಮಾರು ಒಂದು ಲಕ್ಷದಷ್ಟು ಕಡಿಮೆ ಖರ್ಚಾಗಿದೆ ಎಂದು ಉಳಿತಾಯವನ್ನು ತೋರಿಸಿದೆ. ಎಂದರೆ ನೀವು ಶಾಸನ ಸಭೆಗೆ ಎಷ್ಟು ಮಟ್ಟಿನ ಗೌರವ ಕೊಟ್ಟಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ಈ ಶಾಸನ ಸಭೆಗಳನ್ನು ಎಷ್ಟು ದಿವಸ ಕರೆಯಬೇಕೆಂದು ಇತ್ತೋ ಅಷ್ಟು ದಿವಸಗಳು ಕರೆಯದೇ ಪ್ರಜಾಪ್ರಭುತ್ವದ ತತ್ವದಂತೆ ಅಸೆಂಬ್ಲಿಯನ್ನು ಕರೆಯದೇ ಕುಂಠಿತಗೊಳಿಸಿ ಬಿಡ್ಡೆಟ್ಟಿನಲ್ಲಿ ಈ ಒಂದು ಅಂಶದಲ್ಲಿ ಒಂದು ಲಕ್ಷ ರೂಪಾಯಿಗಳಷ್ಟು ಉಳಿತಾಯವನ್ನು ತೋರಿಸಿದ್ದೇವೆ ಎಂದು ಹೇಳುತ್ತೀರಿ. ಈ ಶಾಸನ ಸಭೆ ಎಷ್ಟು ದಿವಸಗಳು ಕೆಲಸ ಮಾಡಬೇಕಾಗಿತ್ತೋ ಅಷ್ಟು ದಿವಸಗಳು ಕೆಲಸ ಮಾಡಲು ಅವಕಾಶ ಮಾಡಿಕೊಡಲಿಲ್ಲ. ಪ್ರಜಾಪ್ರಭುತ್ವ ಈ ದೇಶದಲ್ಲಿ ಬೆಳೆಯುವುದಕ್ಕೆ ಬದಲಾಗಿ ಅದು ಕುಂಠಿತವಾಗುವಂತೆ ಮಾಡುತ್ತಿದ್ದೀರಿ. ಇದು ಒಳ್ಳೆಯ ಚಿಹ್ನೆಯಲ್ಲ. ಪ್ರಜಾಪ್ರಭುತ್ವ ಬೆಳೆಯಬೇಕಾದರೆ ಶಾಸನ ಸಭೆಗಳು ಎಷ್ಟು ಕಾಲ ನಡೆಯಬೇಕೋ ಅಷ್ಟು ಕಾಲ ನಡೆದು ಎಲ್ಲ ವಿಚಾರಗಳೂ ಶಾಸನ ಸಭೆಯಲ್ಲಿ ಚರ್ಚೆಯಾಗಬೇಕು. ವಿಷಯಗಳನ್ನೆಲ್ಲಾ ತುಲನ ಮಾಡಿ ಚರ್ಚೆಯಾಗುವಂತೆ ಮಾಡಬೇಕು ಮತ್ತು ದೇಶದ ರೈತರ ಜನರಸ್ಥಿತಿ ಜನಕ್ಕೆ ತಿಳಿಯಬೇಕು. ಆ ರೀತಿ ಸರಕಾರ ಮಾಡದೇ ಇರುವುದರಿಂದ ಖಂಡಿತ ಇದಕ್ಕೆ ಜವಾಬುದಾರರಾಗಿರತಕ್ಕವರು ಪ್ರಜಾಪ್ರಭುತ್ವವನ್ನು ಕುಂಠಿತಗೊಳಿಸುತ್ತಿದ್ದಾರೆ, ಇದರಲ್ಲಿ ಉಳಿತಾಯ ಮಾಡತಕ್ಕೂಡದು. ಹಣಕಾಸಿನ ಸಚಿವರಿಗೆ ಇದು ತಿಳಿಯಲಿಲ್ಲವಲ್ಲಾ.............

ಶ್ರೀ ಎಸ್. ನಿಜಲಿಂಗಪ್ಪ.—ಒಂದು ಲಕ್ಷ ಏಕೆ ಉಳಿತಾಯವಾಯಿತು ಎನ್ನುವುದನ್ನು ಬಡ್ಜೆಟ್ಟಿನಲ್ಲಿ ತೋರಿಸಿದ್ದಾರೆ. ನೀವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ ಮತ್ತು ನಮಗೆ ಯಾವ ದೂರುಗಳೂ ಬರದೇ ಇರಲಿ ಎಂದು ಮಾಡಿದೆ ಅಷ್ಟೇ.

ಶ್ರೀ ಎಸ್. ಶಿವಪ್ಪ.—ನೀವು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದು ಹೆದರಿ ಇಲ್ಲಿ ಅಧಿವೇಶನವನ್ನು ಕರೆಯದೇ ಹೋದರೆ ನಮ್ಮ ಸ್ಟೇಟಿನಲ್ಲಿ ಎಲ್ಲ ಕಡೆಗಳಲ್ಲಿಯೂ ಕೆಲಸ ಚೆನ್ನಾಗಿ ನಡೆಯುತ್ತಿದೆ ಎಂದು ತಾವಿಲ್ಲಿ ಹೇಳುವುದು ಸರಿಯಲ್ಲ. ಶಾಸನ ಸಭೆಯನ್ನು ಎಷ್ಟು ದಿವಸ ಸೇರಿಸಬೇಕೋ ಅಷ್ಟು ದಿವಸಗಳೂ ಸೇರಿಸಲೇ ಬೇಕು ಅದನ್ನು ಕುಂಠಿತಗೊಳಿಸಕೂಡದು ಎಂದು ನಾನು ಸರಕಾರಕ್ಕೆ ಒಂದು ಎಚ್ಚರಿಕೆಯ ಸೂಚನೆ ಕೊಡುತ್ತೇನೆ.

ಎರಡನೆಯದು ಈ ಸೇವಿಂಗ್ಸ್ ಎಂದರೆ ಮಿತವ್ಯಯ ವಿಚಾರವಾಗಿ ಒಂದೆರಡು ವಿಚಾರಗಳನ್ನು ಆಗಲೇ ಹೇಳಿರುತ್ತೇನೆ. ಇವೊತ್ತು ಹಣಕಾಸಿನ ಸಚಿವರಿಗೆ ನೇರವಾಗಿ ಸಂಬಂಧಪಟ್ಟ ಇಲಾಖೆಯಲ್ಲಿ ಮಿತವ್ಯಯ ಯಾವ ರೀತಿ ಮಾಡುತ್ತಿದ್ದಾರೆ ಎಂದು ಇಲ್ಲಿ ಹೇಳಬೇಕಾಗಿದೆ. ಅವರ ಕೈಕೆಳಗೆ ಎರಡು-ಮೂರು ಸಾವಿರ ರೂಪಾಯಿಗಳಷ್ಟು ಸಂಬಳ ಕೊಟ್ಟು ಒಬ್ಬರು ಅಧಿಕಾರಿಗಳನ್ನು ನೇಮಕಮಾಡಿಕೊಂಡಿದ್ದಾರೆ ಮತ್ತು ಅವರಿಗೆ ಬೇಕಾದ ಸಿಬ್ಬಂದಿಗಳನ್ನೂ ನೇಮಕಮಾಡಿದ್ದಾರೆ. ಇದು ಮಿತವ್ಯಯ ಮಾಡಿದಂತಾಯಿತೇ ? ಅಲ್ಲದೆ ಈಗ್ಗೆ ಕೆಲವು ದಿನಗಳ ಹಿಂದೆ ನಾನು ದೆಹಲಿಗೆ ಹೋಗಿದ್ದೆ. ಅಲ್ಲಿ ಮೈಸೂರು ಸರಕಾರದವರು ದೊಡ್ಡದಾಗಿ 'ಕಾವೇರಿ' ಎಂದು ಬೋರ್ಡು ಹಾಕಿಸಿ ಅಲ್ಲಿ ಒಂದು ಸ್ಟೇಟ್ ಇನ್‌ಫರ್‌ಮೇಷನ್ ಸೆಂಟರ್ ಎಂದು ತೆರೆದಿದ್ದಾರೆ. ಕೊಡಗಿನಲ್ಲಿರುವ ಕಾವೇರಿ ನದಿ ಅಲ್ಲಿಗೆ ಬಂದಿದೆ. ಇವೊತ್ತು ಕಾವೇರಿನದಿಯಲ್ಲೇ ನೀರಿಲ್ಲದೆ ಬತ್ತಿ ಹೋಗಿದೆ. ಅಂತಹ ಕಾವೇರಿ ಎನ್ನುವ ಹೆಸರನ್ನು ಹೇಳಿಕೊಂಡು ಇಲ್ಲಿ ಉಳಿತಾಯ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಹೀಗೆ ಉಳಿತಾಯ ಯೋಜನೆ ಎನ್ನುವುದು ಯಾವ ಮಾರ್ಗದಲ್ಲಿ ಹೋಗುತ್ತಿದೆ ಎನ್ನುವುದನ್ನು ನೀವೇ ನೋಡಬಹುದು ಬಾಯಲ್ಲಿ ಮಿತವ್ಯಯ ಮಾಡಬೇಕು ಎಂದು ದೊಡ್ಡದಾಗಿ ಉಪದೇಶ ಹೇಳುವವರೇ ಅದನ್ನು ಮಾಡದೆ ಹೋದರೆ ನೀವು ಮಿತವ್ಯಯ ಸಾಧನೆ ಮಾಡಿದಂತಾಯಿತೇ ? ನಾನು ಇವೊತ್ತು ಇಲ್ಲಿ ಇದನ್ನು ಒತ್ತಿ ಹೇಳಬೇಕಾಗಿದೆ. ನಿಮ್ಮ ಇಲಾಖೆ ಯಾವ ರೀತಿ ಕೆಲಸ ಮಾಡಬೇಕೋ ಆ ರೀತಿ ಹೋಗುತ್ತಿಲ್ಲ. ಒಟ್ಟಿನಲ್ಲಿ ಹಣ ಕಾಸಿನ ಪರಿಸ್ಥಿತಿಯ ಸ್ಥೂಲ ಪರಿಚಯವನ್ನು ಮಾತ್ರ ಇಲ್ಲಿ ಮಾಡಿ ನಮ್ಮ ಹಣಕಾಸಿನ ಪರಿಸ್ಥಿತಿ ಎಷ್ಟು ಭೀಕರವಾಗಿದೆ ಅದಕ್ಕೇನು ಕಾರಣ ಎನ್ನುವುದನ್ನು ಮಾತ್ರ ಇಲ್ಲಿ ಹೇಳಬೇಕಾಗಿದೆ. ನಾವು ಹಿಂದೆ ಏನು ಪ್ರಿನ್ಸ್‌ಲೀ ಸ್ಟೇಟು ಎಂದು ಹೇಳುತ್ತಿದ್ದೆವೋ ಅವರ ಕೈಯ್ಯಲ್ಲಿ ಆಡಳಿತ ಇದ್ದಾಗ ಬಹಳ ಕುಂಠಿತವಾಯಿತು ಎಂದು ತಿಳಿದುಕೊಂಡಿದ್ದೆವು. ಈಗ ನಾನಾಗಲೇ ಹೇಳಿದ ಹಾಗೆ ನಮ್ಮ ಫೈನಾನ್ಸ್ ಮಿನಿಸ್ಟರು ಇಲ್ಲಿ ಮೊದಲನೇ ಸಾರಿಗೆ ಅವರ ಭಾಷಣವನ್ನು ಓದುವುದಕ್ಕೆ ಹೊರಟಾಗ ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡಿದ್ದಾರೆಂದು ನಂಬಿಕೊಂಡಿದ್ದೆವು. ಅನೇಕ ಸಾರಿ ಇಲ್ಲಿ ನಾವುಗಳು ಹಿಂದೆ ಏನೇನು ಭಾಷಣಗಳನ್ನು ಮಾಡಿ ಸರಕಾರದಲ್ಲಿರುವ ತಪ್ಪುಗಳನ್ನು ತೋರಿಸಿದ್ದೆವೋ ಮತ್ತು ಎಲ್ಲೆಲ್ಲಿ ಏನೇನು ಲ್ಯಾಪ್ಸ್‌ಗಳು ಆಗಿವೆ ಎಂದು ಹೇಳುತ್ತಿದ್ದೆವೋ ಅದನ್ನೆಲ್ಲಾ ಈ ಸ್ಪೀಚ್ ಎತ್ತಿ ತೋರಿಸುತ್ತಿದೆ. ಇದು ಒಂದು ರೀತಿಯಾಗಿ ಕನ್‌ಫೆಷನ್ ಸ್ಟೇಟ್‌ಮೆಂಟು ರೀತಿಯಲ್ಲಿದೆ. ಈ ಸರಕಾರ ಕಳೆದ ಹದಿನೈದು ವರ್ಷಗಳಿಂದ ಏನೇನು ತಪ್ಪುಗಳನ್ನು ಮಾಡಿದರು ಎಂದು ನಾವು ಹೇಳಿದ್ದೆವೋ ಅವನ್ನೆಲ್ಲಾ ಈಗ ಒಪ್ಪಿಕೊಳ್ಳುತ್ತಾ ಬಂದಿದ್ದಾರೆ. ಈ ಸರಕಾರ ತನ್ನ ನೀತಿಯನ್ನು ಬದಲಾಯಿಸಿಕೊಳ್ಳದೇ ಹೋದರೆ ತನ್ನ ಹಣಕಾಸಿನ ಸ್ಥಿತಿಯನ್ನು ಭದ್ರವಾಗಿ ಇಟ್ಟುಕೊಳ್ಳದೆ ಹೋದರೆ, ಸರಕಾರ ತನ್ನ ದಿವಾಳಿತನವನ್ನು ಜನತೆಗೆ ತೋರಿಸಿದಂತಾಗುತ್ತದೆ. ಆಗಿಂದಾಗ್ಗೆ ಇಲ್ಲಿ ನಾವು ಸರಕಾರ ತಪ್ಪುದಾರಿಯಲ್ಲಿ ಹೋಗುತ್ತದೆ ಎಂದು ಹೇಳುತ್ತಿದ್ದರೂ ಕೊನೆಯ ನಾಲ್ಕು ವರ್ಷಗಳಾದ ಮೇಲೆ ನಿಮಗೆ ದೇವರು ಬುದ್ಧಿ ಕೊಟ್ಟರು ಎಂದು ಕಾಣುತ್ತದೆ. ಕಳೆದ ನಾಲ್ಕು ವರ್ಷಗಳಿಂದ ಮಾಡುತ್ತಿದ್ದ ತಪ್ಪುಗಳನ್ನು ಇವೊತ್ತು ನಮ್ಮ ಹಣಕಾಸಿನ ಸಚಿವರು ನಾವು ತಪ್ಪು ದಾರಿಯಲ್ಲಿ ಹೋಗುತ್ತಿದ್ದೇವೆ ಎಂದು ಆ ತಪ್ಪುಗಳನ್ನು ಇಲ್ಲಿ ಒಪ್ಪಿಕೊಂಡಿದ್ದಾರೆ. ಆ ತಪ್ಪಿಗೆ ಖಂಡಿತ ನೀವು ಪ್ರಾಯಶ್ಚಿತ್ತ ಮಾಡಿಕೊಳ್ಳಲೇ ಬೇಕು. ಇದನ್ನು ಖಂಡಿತ ಜನತೆ ಒಪ್ಪುತ್ತಾರೆ ಎಂದು ತಿಳಿದಿರಬಹುದು. ಜನತೆ 1967ನೇ ಇಸವಿಯಲ್ಲಿ ನಿಮಗೆ ಎಂತಹ ಪ್ರಾಶಸ್ತ್ಯ ಕೊಡುತ್ತಾರೆ ಎನ್ನುವುದನ್ನು ಮಾನ್ಯ ಅರ್ಥಸಚಿವರಲ್ಲಿ ಹೇಳುತ್ತೇನೆ. ನಮ್ಮ ದೇಶದಲ್ಲಿ ಕೆಲವು ಇಲಾಖೆಗಳಲ್ಲಿ ನಡೆಯುತ್ತಿರುವ ಅದಕ್ಷತೆಯಿಂದಾಗಿ ಆಡಳಿತ ತತ್ತ್ವ ಯಾವ ರೀತಿಯಾಗಿ ನಡೆಯಬೇಕೋ ಆರೀತಿಯಾಗದೆ ಜನತೆಗೆ ಆಹಾರ ಸರಿಯಾಗಿ ಸಿಕ್ಕುತ್ತಿಲ್ಲ. ಜನತೆಗೆ ವಿರೋಧವಾಗಿ ಯಾವ ಸರಕಾರವೂ ಕೂಡ ಆಳುವುದಕ್ಕೆ ಸಾಧ್ಯವಿಲ್ಲ. ಜನತೆಗೆ ಬೇಕಾದುದನ್ನು ಮಾಡಲು ಸಾಕಷ್ಟು ಸಹಾಯ ಸೌಕರ್ಯಗಳನ್ನು ಮಾಡಿಕೊಡದೇ ಹೋದರೆ ಯಾವ ಸರಕಾರವೂ ಸುಲಲಿತವಾಗಿ ಆಳುವುದಕ್ಕೆ ಸಾಧ್ಯವಿಲ್ಲ ಎಂದು ಇದನ್ನು ನಾನು ಇಲ್ಲಿ

ಒತ್ತಿ ಒತ್ತಿ ಹೇಳಬೇಕಾಗಿದೆ. 156 ಕೋಟಿಯಷ್ಟು ಆದಾಯ ಬಂದಿದೆ, 146 ಕೋಟಿಯಷ್ಟು ಖರ್ಚು ಎಂದು ತೋರಿಸಿ ರಿಸೀಟ್ಸ್ ಮತ್ತು ಎಕ್ಸ್‌ಪೆಂಡಿಚರ್ ಪೂರ್ತಿಯಾಗಿ ತೋರಿಸುವುದು ಬಹು ಮುಖ್ಯ. ಮುಖ್ಯವಾದ ಬಾಬುಗಳಿಗೆ ಹಣವನ್ನು ಕೊಡುವುದಕ್ಕೆ ಹಿಂದುಮುಂದು ನೋಡಬಾರದು. ಸಮಾಜವಾದದ ತತ್ವದ ವ್ಯವಸ್ಥೆಯ ಕರೆಗೆ ಎಷ್ಟುಮಟ್ಟಿಗೆ ಸರಕಾರ ಹೋಗುತ್ತಿದೆ ಎನ್ನುವುದು ಬಹಳ ಮುಖ್ಯವಾದ ವಿಚಾರ. ಇವೊತ್ತು ಇಲ್ಲಿ ಮಂಡಿಸಿರುವ ಹಣ ಕಾಸಿನ ಪತ್ರದಲ್ಲಿ ಎಷ್ಟುಮಟ್ಟಿಗೆ ಸಾಧನೆ ಮಾಡಿದ್ದಾರೆ ಯಾವ ಯಾವ ಹೊಸ ಸಾಧನೆಗಳನ್ನು ಸಾಧಿಸಿದ್ದೇವೆ ಎನ್ನುವುದನ್ನು ತಾವು ತೋರಿಸಿದ್ದೀರಾ ಎಂದು ನಾನು ಇಲ್ಲಿ ಕೇಳುತ್ತೇನೆ. ತಾವು ಮಾಡಬೇಕಾಗಿರುವ ಅನೇಕ ಕಾರ್ಯಗಳಲ್ಲಿ ತಾವು ತೋರಿಸುತ್ತಿರುವ ಸ್ಕೈರೆನ್ಸ್ ಏನೂ ಇಲ್ಲ ಎನ್ನುವುದನ್ನು ತೋರಿಸುತ್ತದೆ. ನಮ್ಮ ದೇಶ ಹಿಂದೆ ಕೈಗಾರಿಕೆಯಲ್ಲಿ ಬಹಳ ಉನ್ನತ ಸ್ಥಾನವನ್ನು ಪಡೆದಿತ್ತು. ಮೈಸೂರು ದೇಶದಲ್ಲಿ ಹಿಂದೆ ಸರಕಾರವೇ ತಾನೇ ತಾನಾಗಿ ಪಬ್ಲಿಕ್ ಸೆಕ್ಟರಿನಲ್ಲಿ ಏನೇನು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದರೋ ಅವು ಇಡೀ ಮೈಸೂರು ದೇಶಕ್ಕೆ ಒಂದು ಪ್ರಾಶಸ್ತ್ಯವನ್ನು ತಂದಿತ್ತು. ಏನೋ ಆಗ ಮಾಡಿದಂತಹ ಕಾರ್ಖಾನೆಗಳು ಇಂದು ನಮ್ಮ ಸಂಸ್ಥಾನದಲ್ಲಿ ಇವೆ. ಆಗ ಇದ್ದಂತಹ ಸರಕಾರದ ಮೂಲಕ ನೇರವಾಗಿ ಆದಂತಹ ಕಾರ್ಖಾನೆಗಳು ಎಂದರೆ ಭದ್ರಾವತಿ ಕಬ್ಬಿಣದ ಕಾರ್ಖಾನೆ, ಸೋಪು ಫ್ಯಾಕ್ಟರಿ ಇನ್ನೂ ಕೆಲವು ಕೈಗಾರಿಕೆ ಕಾರ್ಖಾನೆಗಳು ಹೀಗೆ ಮೂರು ನಾಲ್ಕು ಇಲ್ಲಿ ಬಂದು ಸ್ಥಾಪನೆಯಾದ ಕಾಲ ಆಗ ಇತ್ತು. ಈಗ ಸಮಾಜವಾದದ ಹೆಸರನ್ನು ಬಹಳ ದೊಡ್ಡದಾಗಿ ಹೇಳುತ್ತ ಬರುತ್ತಿದ್ದಾರೆ. ಆದರೆ ನಿಮ್ಮ ನೀತಿ ಯಾವ ರೀತಿಯಾಗಿದೆ ಎಂದರೆ ಪ್ರೈವೇಟು ಸೆಕ್ಟರಿನಲ್ಲಿ ಯಾರಾದರೂ ಬಂಡವಾಳ ಹಾಕುವವರು ದೊಡ್ಡ ದೊಡ್ಡ ಬಂಡವಾಳಗಾರರು ಇಲ್ಲಿಗೆ ಬಂದು ಕಾರ್ಖಾನೆಗಳನ್ನು ಮಾಡಬೇಕಾಗಿ ಬಂದಿದೆ. ಸರಕಾರ ನೇರವಾಗಿ ತನ್ನದೇ ಆದ ಕೈಗಾರಿಕೆಗಳನ್ನು ಮಾಡಲು ಬರುತ್ತಿಲ್ಲ. ಇದರಿಂದಾಗಿ ಸಾಕಷ್ಟು ಜನ ನಿರುದ್ಯೋಗದಿಂದ ನರಳುತ್ತಿದ್ದಾರೆ. ಉದ್ಯೋಗವಿಲ್ಲದೆ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಬಂಡವಾಳಗಾರರು ಇವರೆಲ್ಲರಿಗೂ ಉದ್ಯೋಗಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಅವರ ಕಾರ್ಖಾನೆಗಳಲ್ಲಿ ಕೂಡ ಹತ್ತು ಜನ ಕೆಲಸ ಮಾಡುವ ಕಡೆ ಐದು ಜನರು ಕೆಲಸ ಮಾಡುತ್ತಿದ್ದಾರೆ. ಇದನ್ನು ನಿವಾರಣೆ ಮಾಡಬೇಕಾದರೆ ಸರಕಾರ ದೊಡ್ಡ ಕೈಗಾರಿಕೆಗಳನ್ನು ಮಾಡಬೇಕು. ಕೈಗಾರಿಕೆಗಳಿಗಾಗಿ ಇಂಜನಿಯರಿಂಗ್ ಪಾಸು ಮಾಡಿರತಕ್ಕ ಹಾಗೂ ಪಾಲಿಟೆಕ್ನಿಕ್ ಡಿಪ್ಲೊಮಾಗಳನ್ನು ಮಾಡಿಕೊಂಡಿರತಕ್ಕ ವಿದ್ಯಾರ್ಥಿಗಳು ಕೆಲಸವಿಲ್ಲದೆ ಇವೊತ್ತು ಬೀದಿಯಲ್ಲಿ ಅಲೆಯುತ್ತಿದ್ದಾರೆ. ಯಾವ ಯಾವ ಕೈಗಾರಿಕೆಗಳಿಗೆ ಎಷ್ಟು ಗ್ರ್ಯಾಜುಯೇಟುಗಳು ಬೇಕು ಎನ್ನುವುದನ್ನು ಆಲ್ ಇಂಡಿಯಾ ಟೆಕ್ನಿಕಲ್ ಇನ್‌ಸ್ಟಿಟ್ಯೂಟು ಪ್ರಕಾರ ನಮಗೆ ಗೊತ್ತಾಗುತ್ತಿದ. ಅದರಂತೆ ಇವೊತ್ತು ನಮ್ಮ ದೇಶದಲ್ಲಿ ಬೇಕಾದಷ್ಟು ಇಂಜನೀಯರಿಂಗು ಗ್ರ್ಯಾಜುಯೇಟುಗಳು ಹಾಗೂ ಡಿಪ್ಲೊಮಾ ಹೋಲ್ಡರುಗಳನ್ನು ತಯಾರು ಮಾಡಿದ್ದರೂ ಅವರನ್ನು ಯಾವ ಯಾವ ಕೈಗಾರಿಕೆಗಳಲ್ಲಿ ಉಪಯೋಗ ಮಾಡಬೇಕೆನ್ನುವುದಕ್ಕೆ ಅದಕ್ಕೆ ತಕ್ಕ ಕೈಗಾರಿಕೆಗಳೇ ಆಗುತ್ತಿಲ್ಲ. ಆದರೆ ನಮ್ಮ ಮಾನ್ಯ ಹಣಕಾಸಿನ ಸಚಿವರು ಹೊಸದಾಗಿ ಇಲ್ಲಿಗೆ ಬಂದಿರುವುದರಿಂದ ಅವರೂ ಹೊಸ ನೀತಿಯನ್ನನುಸರಿಸಿ ತಕ್ಕ ಲೀಡ್ ಕೊಡುತ್ತಾರೆ ಎಂದು ಭಾವನೆ ಮಾಡಿಕೊಂಡಿದ್ದೆವು. ಅವರೂ ಯುವಕರು ಮತ್ತು ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಿರುವವರು, ಹೊಸ ರೀತಿಯಾದ ಮುಂಗಡ ಪತ್ರವನ್ನು ಕೊಟ್ಟಿದ್ದರೆ ನಾವೂ 'ಭಲೆ' ಎಂದು ಹೇಳುತ್ತಿದ್ದೆವು. ಆದರೆ ಅವರು ಹಿಂದೆ ಯಾವ ಹಳೆಯ ನೀತಿಯನ್ನು ಸರಕಾರ ಅನುಸರಿಸಿಕೊಂಡು ಬಂದಿತ್ತೋ ಅದನ್ನೇ ಈಗಲೂ ಅನುಸರಿಸಿಕೊಂಡು ಬರುತ್ತಿದ್ದಾರೆ. ಮತ್ತು ಇಲ್ಲಿಗೆ ಹೊರಗಿನವರು ಬಂದು ಬಂಡವಾಳ ಹಾಕಿ ಕೈಗಾರಿಕೆಗಳನ್ನು ನಡೆಸಬೇಕೆಂದು ಹೇಳುತ್ತಿದ್ದರೆ ಇದು ಸಮಾಜವಾದವೇ ಎಂದು ನಾನು ಕೇಳಬೇಕಾಗಿದೆ. ಜನ ನಿಮ್ಮ ಕೈಯ್ಯಲ್ಲಿ ಅಧಿಕಾರ ಕೊಟ್ಟಿದ್ದರೂ ಕೂಡ ನೀವು ಅವರನ್ನು ಮುಂದಕ್ಕೆ ತೆಗೆದುಕೊಂಡು ಹೋಗಲು ಆಗಲಿಲ್ಲ. ಈ ದಿವಸ ದೇಶದಲ್ಲಿ ಆಹಾರ ಪರಿಸ್ಥಿತಿ ಹದಗೆಟ್ಟಿದೆ, ಸಕ್ಕರೆ ಯಾವ ಅಂಗಡಿಯಲ್ಲಿ ನೋಡಿದರೂ ಇಲ್ಲ, ಕೇಂದ್ರ ಸರ್ಕಾರ ಎಕ್ಸೈಜು ಸುಂಕವನ್ನು ಹಾಕಿದಮೇಲೆ ಸಕ್ಕರೆ ಮಾಯವಾಗಿದೆ, ವ್ಯಾಪಾರಸ್ಥರು ಸಕ್ಕರೆ ಅಭಾವವನ್ನುಂಟುಮಾಡಿದ್ದಾರೆ. ದೇಶದಲ್ಲಿ ಕಳ್ಳಹಣ ಸಹಸ್ರಾರು ಕೋಟಿ ರೂಪಾಯಿಗಳಿರುವವರೆಗೂ ಯಾವ ವರ್ತಕರನ್ನು ಹದ್ದಿನಲ್ಲಿಡಲು ಸಾಧ್ಯವಿಲ್ಲ. ಹಾಗಿರುವಾಗ ಒಬ್ಬ ಬೊಂಬಾಯಿನಲ್ಲಿ ಕುಳಿತು ವ್ಯಾಪಾರದ ವಹಿವಾಟನ್ನು ನಡೆಸಬಹುದು ; ಎಣ್ಣೆ, ಸಕ್ಕರೆ, ಸಿಮೆಂಟು ಮುಂತಾದುವುಗಳ ಧಾರಣೆ ಏರಿಸಬಹುದು. ಎಲ್ಲವೂ ಬಂಡವಾಳಗಾರರ ಅಧೀನದಲ್ಲಿದೆ. ಅದನ್ನು ತಪ್ಪಿಸಲು ಸರಕಾರ ಎಷ್ಟೇ ಕಷ್ಟವಾದರೂ ಪ್ರಯತ್ನಪಡಬೇಕು, ಅಲ್ಲಿಯುವರೆಗೆ ಪರಿಸ್ಥಿತಿ ಸರಿಹೋಗುವುದಿಲ್ಲ.

3-00 P.M.

ಸರಕಾರ 3 ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿ ನಾಲ್ಕನೆಯ ಯೋಜನೆಯ ಮೊದಲನೆಯ ವರ್ಷಕ್ಕೆ ಕಾಲಿಡುತ್ತದೆ. ನಾಲ್ಕನೆಯ ಯೋಜನೆಯ ವಿಸ್ತೀರ್ಣವೆಷ್ಟು, ಸ್ವರೂಪವೇನು,

(ಶ್ರೀ ಎಸ್. ಶಿವಪ್ಪ)

ಗಾತ್ರವೇನು ಎಂಬುದು ಯಾರಿಗೂ ಕೂಡ ಸರಿಯಾಗಿ ಗೊತ್ತಾಗಿಲ್ಲ. ಈಗ ನಿಜವಾಗಿಯೂ ನಾಲ್ಕನೆಯ ಯೋಜನೆ ಕಾರ್ಯಗತವಾಗುತ್ತದೆಯೇ ಅಥವಾ ಮೂರನೆ ಯೋಜನೆಯು ಮುಗಿದರು ಅದೇ 5 ವರ್ಷಕ್ಕೆ ಬದಲಾಗಿ ಆರನೆಯ ವರ್ಷದಲ್ಲಿ ನಡೆಯುತ್ತಿದೆಯೋ ಎಂಬುದು ಸಂಶಯವಾಗಿದೆ. ಏಕೆಂದರೆ ನಾಲ್ಕನೆಯ ಯೋಜನೆಗೆ ಸುಮಾರು ಇಪ್ಪತ್ತೊಂದೂವರೆ ಕೋಟಿ ರೂಪಾಯಿ ಬೇಕು, ಅದನ್ನು ಹೇಗೆ ಒದಗಿಸುವುದು ಎಂಬ ವಿಚಾರ ಚರ್ಚೆಯ ಹಂತದಲ್ಲೇ ಇದೆ. ಅದು ಯಾವ ರೂಪ ತಾಳುತ್ತದೆ, ಬದಲಾವಣೆಯಾಗುವುದೇ ಎಂಬುದು ಅನುಮಾನದಲ್ಲೇ ಇದೆ. ನಮ್ಮ ಬಡ್ಜೆಟ್ಟಿನಲ್ಲಿ ಒಂದು ವರ್ಷಕ್ಕೆ ಕೇವಲ 50 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ 5 ವರ್ಷದ ಯೋಜನೆಯ ಮೊತ್ತ 537 ಕೋಟಿ ರೂಪಾಯಿಗಳು. ಅದರ ಪ್ರಕಾರ ಮೊದಲನೆಯ ವರ್ಷ 100 ಕೋಟಿ ರೂಪಾಯಿಗಳನ್ನೊದಗಿಸಬೇಕಾಗಿತ್ತು. ಇದರಿಂದಲೇ ಈ ಯೋಜನೆ ಯಾವ ರೂಪ ತಾಳುವುದೋ ಎಂದು ಹಿಂದುಮುಂದು ನೋಡಬೇಕಾಗಿದೆ. ಹೊರದೇಶದಿಂದ ಬರುವ ಸಹಾಯದ ಮೇಲೆ ಈ ಯೋಜನೆ ನಿಂತಿದೆ ಎಂಬುದನ್ನು ನಾವು ನೋಡಬಹುದು. ಓವರ್‌ಡ್ರಾಫ್ಟಿನ 50 ಕೋಟಿ ರೂಪಾಯಿಗಳನ್ನು ತೀರಿಸಲು 25 ಕೋಟಿ ರೂಪಾಯಿಗಳ ಸೆಕ್ಯೂರಿಟಿ ಮಾರಿಸಿ 25 ಕೋಟಿ ಒದಗಿಸಿ ಉಳಿದ 25 ಕೋಟಿಗೆ ಸಾಲಮಾಡಿ ಹಣ ಒದಗಿಸಬೇಕೆಂದು ಹೇಳಿರುವುದನ್ನು ನೋಡಿದರೆ ಮೈಸೂರು ದೇಶದ ಆರ್ಥಿಕ ಸ್ಥಿತಿ ಹೇಗಿದೆಯೆಂಬುದು ಗೊತ್ತಾಗುತ್ತದೆ. ಫೈನಾನ್ಸ್ ಕಮಿಷನ್ 39 ಕೋಟಿ ರೂಪಾಯಿಗಳನ್ನು ಕೊಡಿಸಿತು. ಇದರಿಂದ ಸ್ವಲ್ಪ ಉಸಿರಾಡುವುದಕ್ಕೆ ಅವಕಾಶವಾಗಿದೆ. ಆ ಕಮಿಷನ್ನಿನವರು ಇಂಥ ಒಳ್ಳೆಯ ಉಪಕಾರಮಾಡಿದ್ದಾರೆ. ಇಂಥ ಅವಕಾಶವಿರುವಾಗ ಸರಕಾರದವರೂ ಕೂಡ ಹೆಚ್ಚು ತೆರಿಗೆ ಹಾಕುವ ಸಾಹಸಕ್ಕೇಕೆ ಹೋಗಬೇಕು ? ಮುಂದೆ ಕೂಡ ಪ್ರಯಾಣಿಕರ ಮೇಲೆ ತೆರಿಗೆ ಹಾಕುವವರಾಗಿದ್ದಾರೆ. ಈ ದಿವಸ ಫೈನಾನ್ಸ್ ಕಮಿಷನ್ನಿನಿಂದ ಹೆಚ್ಚು ಆದಾಯ ಬಂದಿದೆ, ಮುಂದೆ ಕೂಡ 5 ವರ್ಷಗಳವರೆಗೆ 3 ಕೋಟಿ ರೂಪಾಯಿಗಳ ಸಹಾಯ ದೊರೆಯಲಿದೆ. ಈಗಾಗಲೇ ಮಾರಾಟ ತೆರಿಗೆ ಕಾನೂನು ಎರಡುಸಲ ತಿದ್ದುಪಡಿಯಾಗಿದೆ, ಮೊನ್ನೆತಾನೆ ಅರ್ಬನ್ ಲ್ಯಾಂಡ್ ಟ್ಯಾಕ್ಸ್ ಮಸೂದೆ ಅಂಗೀಕಾರವಾಗಿದೆ, ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜ್ ಅಮೆಂಡ್‌ಮೆಂಟ್ ಬಿಲ್ ಪಾಸಾಗಿದೆ, ಸರ್ವೆ ಸೆಟ್ಲಮೆಂಟ್ ಮಸೂದೆ ಪಾಸಾಗಿದೆ. ಇದೆಲ್ಲದರಿಂದ ಸುಮಾರು 15 ಕೋಟಿ ರೂಪಾಯಿ ಬರಬಹುದು. ಇಷ್ಟಾದರೂ ಸಾಲದು, ಪ್ರಯಾಣಿಕರ ಮೇಲೆ ಸುಂಕ ಹಾಕುವುದಕ್ಕೆ ಹೊರಟಿದ್ದಾರೆ. ಈಗಾಗಲೇ ಕೇಂದ್ರ ಸರಕಾರದ ಬಜೆಟ್ಟಿನಿಂದ ಜೀವನಮಟ್ಟ ಎಷ್ಟು ಏರಿದೆ ಎಂಬುದನ್ನು ನೋಡಬಹುದು, ಸಕ್ಕರೆ, ಎಣ್ಣೆ, ಬಟ್ಟೆ, ಸಿಗರೇಟು ಮುಂತಾದುವುಗಳಮೇಲೆ ಸುಂಕ ಹೆಚ್ಚಿಸಿದ್ದಾರೆ. ಇದನ್ನು ನೋಡಿ ನೀವು ಕೇಂದ್ರ ಸರಕಾರದ ಮೇಲೆ ಹೈಪೋಟಿ ಮಾಡುತ್ತಿದ್ದೀರಿ, ಕೇಂದ್ರದವರು ನಿಮ್ಮಮೇಲೆ ಹೈಪೋಟಿ ಮಾಡುತ್ತಿದ್ದಾರೆ. ಇದರಿಂದ ಜನರಿಗೆ ಬಹಳ ತೊಂದರೆಯಾಗಿದೆ.

**Sri C. J. MUCKANNAPPA** (Sira).—Sir, an observation was made by the Speaker of Lok Sabha and also the Chairman of Rajya Sabha that when the Budget was under discussion, at least one Cabinet Minister must be present. Here, there is not even one Cabinet Minister present when the Budget is under discussion and when the Leader of Opposition is speaking. Such a scant respect is shown to this House.

**Sri R. DAYANANDA SAGAR** (Deputy Minister for Sericulture).—Sir, we are weightier than the Minister.

**Sri C. J. MUCKANNAPPA.**—Sir, he may be weightier but he is not a Cabinet Minister.

*(Sri B. Rachiah, Minister for Forest and Fisheries, entered the House.)*

I am glad that one Minister has just entered the House.

ಶ್ರೀ ಎಸ್. ಶಿವಪ್ಪ.—ಈಗತಾನೆ ಮುಕ್ಕಣ್ಣಪ್ಪನವರು ಹೇಳಿದ್ದನ್ನು ನೋಡಿದರೆ ಸರಕಾರ ಎಷ್ಟುಮಟ್ಟಿಗೆ ಹಣಕಾಸಿನ ವಿಚಾರದಲ್ಲಿ ವಿವೇಚನೆಯಿಂದ ಕೆಲಸಮಾಡುತ್ತಿದೆಯೆಂಬುದು ವ್ಯಕ್ತವಾಗುತ್ತದೆ. ತೆರಿಗೆಗಳ ಹೆಚ್ಚಳದಿಂದ ದಿನಬಳಕೆಯ ವಸ್ತುಗಳ ಬೆಲೆಗಳು ದಿನೇ ದಿನೇ ಏರುತ್ತಿವೆ,

ಜೀವನ ವೆಚ್ಚ ಅಧಿಕವಾಗುತ್ತಿದೆ. ಇದರಿಂದಾಗಿ ದೇಶದಲ್ಲಿ ಜನರು ಬದುಕುವುದೇ ಕಷ್ಟವಾಗಿದೆ. ಹಣಕಾಸಿನ ಪರಿಸ್ಥಿತಿ ಹೀಗಿದೆ, ಅದನ್ನು ಸರಿಪಡಿಸುವುದಕ್ಕೆ ಇಷ್ಟು ತೆರಿಗೆ ಹಾಕಬೇಕಾಗಿದೆ ಎಂದು ಹೇಳಬೇಕಾದ್ದು ಸಂಪ್ರದಾಯ. ಆದರೆ ಹಣಕಾಸಿನ ಬಡ್ಜೆಟ್ಟನ್ನು ಮಂಡಿಸುವುದಕ್ಕೆ ಮುಂಚಿತವಾಗಿ ತೆರಿಗೆ ಮಸೂದೆ ತಂದಿದ್ದಾರೆ. ಇದು ಒಂದು ಹಾಸ್ಯಾಸ್ಪದವಾದ ವಿಚಾರ. ಎಲ್ಲೂ ಕೂಡ ಈ ರೀತಿಯಿಲ್ಲ. ಪಂಚವಾರ್ಷಿಕ ಯೋಜನೆಗೆ ಹಣ ಸಾಲದಾಗಿದೆ, ಅದಕ್ಕೋಸ್ಕರ ಹೆಚ್ಚು ಹೆಚ್ಚು ತೆರಿಗೆ ಹಾಕಬೇಕೆಂದು ಕೆಲವು ತೆರಿಗೆ ಮಸೂದೆಗಳನ್ನು ತಂದರು, ಅವುಗಳು ಅಂಗೀಕೃತವಾದವು. ಅದೂ ಸಾಲದು ಎಂದು ಹೇಳಿ ಬಜೆಟ್ ಮಂಡನೆಯ ಸಮಯದಲ್ಲಿ ಕೂಡ ಬಸ್ ಪ್ರಯಾಣಿಕರ ಮೇಲೆ ತೆರಿಗೆ ಹಾಕಲು ಒಂದು ಮಸೂದೆಯನ್ನು ಮಂಡನೆ ಮಾಡಿದ್ದಾರೆ. ಅದರಿಂದ ಬರತಕ್ಕಂಥ ಹಣ 2 ಕೋಟಿಯಾಗಬಹುದೆಂದು ಹೇಳಿದ್ದಾರೆ. ಈ ಪ್ರಕಾರವಾಗಿ ಇವರು ಮತ್ತು ಕೇಂದ್ರ ಸರ್ಕಾರದವರು ಸೇರಿ ಇವತ್ತಿನ ದಿವಸ ಎರಡು ಕಡೆಯಿಂದಲೂ ತೆರಿಗೆಗಳನ್ನು ಹಾಕಿ ಜನತೆಯನ್ನು ಅಪ್ಪಳಿಸುತ್ತಿದ್ದಾರೆ. ಒಂದು ಕಡೆ ರಾಜ್ಯ ಸರ್ಕಾರ, ಒಂದು ಕಡೆ ಕೇಂದ್ರ ಸರ್ಕಾರ, ಇವೆರಡರ ತೆರಿಗೆ ಭರಾಟೆಯಿಂದ, ಸುರಿಮಳೆಯಿಂದ ಜನತೆ ಕಂಗಾರಾಗಿದ್ದಾರೆ, ಕಂಗೆಟ್ಟಿದ್ದಾರೆ, ಮತ್ತು ಇವರಿಬ್ಬರ ಮಧ್ಯೆ ಸಿಕ್ಕಿ ಚಟ್ನಿಯಾಗಿದ್ದಾರೆ. ಹಣದುಬ್ಬರದಿಂದ ದೇಶದ ಆರ್ಥಿಕ ಸ್ಥಿತಿ ಕೆಟ್ಟು ದೇಶದ ಜನ ಕ್ರಾಂತಿ ಏಳತಕ್ಕ ಒಂದು ಸಮೀಪಕ್ಕೆ ಬಂದಿದ್ದಾರೆ. ಆಹಾರ ನೀತಿಯ ಅಸಮರ್ಥತೆ, ತೆರಿಗೆಯ ಹೊರೆಯನ್ನು ಯಾವ ಚರಿತ್ರೆಯಲ್ಲೂ ಕಂಡವರಾಗಿಲ್ಲ. ಮಹಮದ್‌ಬಿನ್ ತೊಗಲಕ್‌ನ ಕಾಲದಲ್ಲೂ ಇಷ್ಟು ಹೆಚ್ಚಿನ ತೆರಿಗೆ ಇರಲಿಲ್ಲ. ಕಣ್ಣು ಕಾಣದ ಕುರುಡರಂತೆ ಈ ದೇಶದಲ್ಲಿ ತೆರಿಗೆಯನ್ನು ಹಾಕುತ್ತಿದ್ದಾರೆ. ಜನರು ತೆರಿಗೆ ಕೊಡುವ ಶಕ್ತಿಯನ್ನು ಎಷ್ಟರ ಮಟ್ಟಿಗೆ ಹೊಂದಿದ್ದಾರೆ ಎಂಬುದನ್ನು ನೋಡದೆ ಹಣದ ಆಸೆಗಾಗಿ ಹೆಣದಂತೆ ಬಾಯಿಬಿಡುತ್ತಿದ್ದಾರೆ. ಜನಗಳು ಹೆಣವಾಗಿದ್ದಾರೆ. ಜನಗಳನ್ನು ಹೆಣ ಮಾಡಬೇಕೆಂದು ಮಾಡಿದ್ದಾರೆ. ಎಷ್ಟು ಹಣ ಕೊಟ್ಟರೂ ಕೂಡ ಈ ಸರ್ಕಾರದ ತೂತು ಕೊಡವನ್ನು ತುಂಬಲು ಸಾಧ್ಯವಿಲ್ಲವಾಗಿದೆ. ಈ ಒಂದು ಭಾವನೆ ಎಲ್ಲಿಯವರೆಗೆ ಇರುತ್ತದೆ, ಅಂದಿನವರೆಗೆ ದೇಶದಲ್ಲಿ ಸುಖರಾಜ್ಯ ಸ್ಥಾಪನೆ ಮಾಡತಕ್ಕ ಯೋಗ್ಯತೆ ನಿಮಗಿಲ್ಲವೆಂದು ಹೇಳಬೇಕಾಗಿದೆ. ಸುಖರಾಜ್ಯ ಸ್ಥಾಪನೆ ಮಾಡುವ ಶಕ್ತಿ ನಿಮಗೆ ಇದ್ದ ಪಕ್ಷದಲ್ಲಿ, ಈ ಅನ್ಯಾಯ ಪರಂಪರೆಗಳನ್ನು ಮಾಡಿ, ತೆರಿಗೆಗಳನ್ನು ಹಾಕುತ್ತೇವೆ ಎನ್ನುವ ಸಾಹಸ ಮಾಡುತ್ತಾ ಇರಲಿಲ್ಲ. ಎಷ್ಟು ಹಣ ಕೊಟ್ಟರೆ ತಾನೇ ಸುಖರಾಜ್ಯ ಸ್ಥಾಪನೆ ಮಾಡಲು ಸಾಧ್ಯವಾದೀತು ? ಇದು ಕನಸೇ ಹೊರತು ನನಸಾಗದು. ಇಷ್ಟು ಹೇಳಿ ಹಣಕಾಸಿನ ಸಚಿವರು ತಂದಿರತಕ್ಕ ಈ ಆಯವ್ಯಯ ಪತ್ರವನ್ನು ಬಹಳ ತೀವ್ರವಾಗಿ ವಿರೋಧ ಮಾಡುತ್ತೇನೆ. ಇವರು ಹೂಡಿರತಕ್ಕ ವಾದ ಕೇವಲ ಒಂದು ಅರಣ್ಯರೋಧನವಾಗಿದೆ. ತಮ್ಮ ತಪ್ಪನ್ನು ತಾವೇ ಕಾಣದೆ ತಾವೂ ಕೂಡ ದೇಶದಲ್ಲಿ ಸರ್ಕಾರವನ್ನು ಆಳುತ್ತಿದ್ದೇವೆ ಅನ್ನತಕ್ಕಂಥ ನೀತಿ ಏನಿದೆ ಇದು ಖಂಡಿತವಾಗಿಯೂ ಅಕ್ಷಮ್ಯ ಅಪರಾಧ. ತಮ್ಮ ತಪ್ಪನ್ನು ಒಪ್ಪಿಕೊಂಡಮೇಲೆ, ಇನ್ನು ಉಳಿದಿರತಕ್ಕದ್ದು ಅವರಿಗೆ ಒಂದೇ ಒಂದು ದಾರಿ, ಅಧಿಕಾರದಿಂದ ಈ ಕಾಂಗ್ರೆಸ್ ಸರ್ಕಾರ ಪದಚ್ಯುತವಾಗಬೇಕು. ಅಂದಿಗೆ ತಮ್ಮ ತಪ್ಪಿಗೆ ಶಿಕ್ಷೆಮಾಡಿಕೊಂಡ ಹಾಗೆ ಆಗುತ್ತದೆ. ಇಲ್ಲವಿದ್ದರೆ ಜನತೆ ಇನ್ನು ಕೇವಲ 8 ತಿಂಗಳಲ್ಲಿ ಶಿಕ್ಷೆಯನ್ನು ಕೊಡುತ್ತಾರೆ. ಈ ಹಣಕಾಸಿನ ಪತ್ರವನ್ನು ನಾನು ವಿರೋಧಿಸುತ್ತೇನೆ.

† ಶ್ರೀ ಡಿ. ಎಮ್. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಪತಿಗಳೆ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರುವ ಆಯವ್ಯಯ ಪತ್ರವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಇಷ್ಟು ಹೊತ್ತು ಕೂಡ ಬಹಳ ಕುತೂಹಲದಿಂದ ವಿರೋಧಪಕ್ಷದ ನಾಯಕರು ಮಾಡಿದ ಭಾಷಣವನ್ನು ಕೇಳಿದೆ. ಕನ್ನಡದಲ್ಲಿ ಒಂದು ಗಾದೆ ಇದೆ, ಅದರಂತೆ ಮಂತ್ರಕ್ಕಿಂತ ಉಗುಳೇ ಜಾಸ್ತಿಯಾಗಿತ್ತು. ಕೊನೆಯಲ್ಲಿ ಬಹಳ ಉದ್ವೇಗದಿಂದ ಸರ್ಕಾರಕ್ಕೆ ಯೋಗ್ಯತೆಯಿಲ್ಲ, ಸರ್ಕಾರ ಬಿಟ್ಟು ಹೋಗಬೇಕೆಂದು ಹೇಳಿದರು. ನಾನಾದರೂ ಕೂಡ ಮಾತನಾಡುವುದಕ್ಕೆ ಮುಂಚಿತವಾಗಿ ಅವರಿಗೆ ಹೇಳುತ್ತೇನೆ. ತಾವು ಆತುರ ಪಡಬೇಡಿ, 1967ನೇ ಇಸವಿಯಲ್ಲಿ ಚುನಾವಣೆ ಇದೆ. ಅದನ್ನು ಎದುರಿಸೋಣ, ಅದರಲ್ಲಿ ಯಾರು ಹೋಗುತ್ತಾರೆ, ಯಾರು ಉಳಿಯುತ್ತಾರೆ ಎನ್ನುವುದನ್ನು ನೋಡೋಣ ಎಂದು ವಿರೋದಪಕ್ಷದ ನಾಯಕರಿಗೆ ಸವಾಲು ಹಾಕುತ್ತೇನೆ. ಕಳೆದ 3 ಚುನಾವಣೆಗಳಲ್ಲೂ ಇದೇ ಮಾತನ್ನು ಹೇಳಿಕೊಂಡು ಬಂದರು. ಆದರೆ ಜನತೆ ಕಾಂಗ್ರೆಸ್ ಉಮೇದುವಾರರಿಗೆ ಅದ್ಭುತವಾದ ಜಯವನ್ನು ಗಳಿಸಿಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರ 3 ಚುನಾವಣೆಗಳಲ್ಲೂ ಗೆದ್ದು, ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳನ್ನೂ ನಡೆಸಿಕೊಂಡು ಜನಗಳ ಹಿತಾಶಕ್ತಿಯನ್ನು ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ನಡೆಸಿಕೊಂಡು ಬಂದಿದ್ದಾರೆ ಎಂಬ ಮಾತನ್ನು ತಮ್ಮ ಮೂಲಕ ಮಾನ್ಯ ವಿರೋಧಪಕ್ಷದ ನಾಯಕರಿಗೆ ತಿಳಿಯಬಯಸುತ್ತೇನೆ. ಹಣಕಾಸಿನ ಸಚಿವರು ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟವಾಗಿದ್ದರೂ ಅವರು ಕೂಡ ತಮ್ಮ ಆಯವ್ಯಯ ಭಾಷಣದಲ್ಲಿ ಪರಿಸ್ಥಿತಿಯನ್ನು ವಿವರವಾಗಿ

(ಶ್ರೀ ಡಿ. ಎಂ. ಸಿದ್ದಯ್ಯ)

ತೋರಿಸಿದ್ದಾರೆ. ಮತ್ತು ಕಷ್ಟಪಟ್ಟು ಅಂಕಿಅಂಶಗಳನ್ನು ಸಂಗ್ರಹಿಸಿ ಕಳೆದ 3 ಪಂಚವಾರ್ಷಿಕ ಯೋಜನೆಗಳಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದಾರೆ, ಯಾವ ರೀತಿ ಯೋಜನೆಗಳು ಫಲಪ್ರದವಾಗಿವೆ ಯೆಂದು ಬಿಚ್ಚುಮನಸ್ಸಿನಿಂದ, ಪ್ರಾಮಾಣಿಕತೆಯಿಂದ ಹೇಳಿದ್ದಾರೆ. ಆದ್ದರಿಂದ ಅವರು ಈ ಸಭೆಯು ಮಾನ್ಯತೆಗೆ ಅರ್ಹರು. ಶ್ರೀ ಶಿವಪ್ಪನವರು ಕನ್‌ಫೆಷನ್ ಸ್ಟೇಟ್‌ಮೆಂಟ್ ಎಂದು ಹೇಳುತ್ತಾರೆ, ಅದು ಸರಿಯಲ್ಲ ಅದು ಪ್ರಾಮಾಣಿಕತೆಯಿಂದ ಕೂಡಿದೆಯೆಂದು, ಇದ್ದುದನ್ನು ಇದ್ದಹಾಗೆ ಹೇಳುವ ನಿಷ್ಠೆಯಿಂದ ಕೂಡಿದ ಹೇಳಿಕೆಯೆಂದು ನಾನಾದರೂ ಹೇಳಬಯಸುತ್ತೇನೆ. ಯಾವ ವಿಷಯ ವನ್ನಾದರೂ ಕೂಡ ಪ್ರಸ್ತಾಪ ಮಾಡುವಾಗ ಮಾನ್ಯ ಸಭೆಗೆ ವಂಚಿಸಿ ಸತ್ಯಕ್ಕೆ ದೂರವಾದ ಮಾತು ಗಳನ್ನು ಹೇಳುವುದಕ್ಕೆ ಸರ್ಕಾರಕ್ಕಾಗಲೀ ವಿರೋಧಪಕ್ಷದವರಿಗಾಗಲೀ ಅವಕಾಶವಿಲ್ಲ. ವಿರೋಧ ಪಕ್ಷದ ಉದ್ದೇಶವಾದರೂ ಕೂಡ ಒಂದಾನೊಂದು ದಿವಸ ಸರ್ಕಾರವನ್ನು ನಡೆಸಬೇಕು ಎನ್ನುವುದು. ಮುಂದುವರಿದ ದೇಶವಲ್ಲಿ ವಿರೋಧಪಕ್ಷದ ಸಭಾ ನಾಯಕರಿಗೆ ಎಷ್ಟು ಮನ್ನಣೆ ಗೌರವ ಇದೆ. ಹಿಂದೆ ಒಂದು ಸಾರಿ ಹೇಳಿದ ಹಾಗೆ ವಿರೋಧಪಕ್ಷದ ನಾಯಕರಿಗೆ, ಸಭಾನಾಯಕರಿಗೆ ಕೊಡುವಷ್ಟೇ ಸಂಭಾವನೆಯನ್ನು ಮುಂದುವರೆದ ಪಾಶ್ಚಿಮಾತ್ಯ ದೇಶದಲ್ಲಿ ಕೊಡುತ್ತಾರೆ. ಕಾರಣವೇನೆಂದರೆ, ವಿರೋಧಪಕ್ಷದವರು ಸುವ್ಯವಸ್ಥೆಯಿಂದ ಕೂಡಿದ ಪಕ್ಷಗಳಾಗಿರುವುದರಿಂದ ಚುನಾವಣೆಯಲ್ಲಿ ಗೆದ್ದು ಅವರು ಅಧಿಕಾರಕ್ಕೆ ಬರಬಹುದು, ಮತ್ತು ಅವರು ಅಧಿಕಾರಕ್ಕೆ ಬರುವ ಮುಂಚೆ ಎಷ್ಟು ಜವಾಬ್ದಾರಿಯಿಂದ ಮಾತನಾಡುತ್ತಾರೋ, ಅಷ್ಟೇ ಜವಾಬ್ದಾರಿಯಿಂದ ಅಧಿಕಾರಕ್ಕೆ ಬಂದ ಮೇಲೆ ಕೆಲಸ ಮಾಡಬೇಕು ಎನ್ನುವುದನ್ನು ಅವರು ಮರೆಯಬಾರದು. ಆದರೆ ದುರದೃಷ್ಟವಶಾತ್ ನಮ್ಮ ದೇಶದ ವಿರೋಧಪಕ್ಷದ ಪರಿಸ್ಥಿತಿಯೇನಾಗಿದೆಯೆಂದರೆ, ಅದು ಇನ್ನೂ ಶೈಶವಾವಸ್ಥೆಯಲ್ಲಿದೆ.

Sri C. J. MUCKANNAPPA.—Point of order, Sir.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಈಚೆಗೆ ನಮ್ಮ ಕಡೆಯವರನ್ನು ಹಣದ ಆಸೆ ತೋರಿಸಿ ಕೊಂಡುಕೊಳ್ಳುತ್ತಿದ್ದಾರೆ.

ಉಪಾಧ್ಯಕ್ಷರು.—ಆ ಮಾತನ್ನು ತಾವು ವಾಪಸ್ ತೆಗೆದುಕೊಳ್ಳಬೇಕು ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ವಾಪಸ್ ತೆಗೆದುಕೊಂಡಿದ್ದೇನೆ. ಆದರೆ ಪ್ರಜಾಪ್ರಭುತ್ವವಿರುವ ಕಡೆಯಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ವಿರೋಧಪಕ್ಷದ ನಾಯಕರಿಗೆ ಗೌರವ ಕೊಟ್ಟು ಸಂಬಳ ಸಾರಿಗೆ ಮತ್ತು ಮಾನ್ಯತೆ ಕೊಡುತ್ತಾರೆಂದು ಹೇಳಿದರು. ಎಷ್ಟೋ ಕಷ್ಟಪಟ್ಟುಕೊಂಡು ಚುನಾ ವಣೆಯಲ್ಲಿ ಗೆದ್ದು ಇಲ್ಲಿಗೆ ಬಂದ ಮೇಲೆ ಅನೇಕ ಆಕರ್ಷಣೆ ತೋರಿಸಿ ಅತ್ತ ಕಡೆಗೆ ಆಹ್ವಾನಿಸುತ್ತಾರೆ. ಅಂಥ ಆಹ್ವಾನ ನನಗೂ ಮತ್ತು ಬೇರೆಯವರಿಗೂ ಬಂದಿತ್ತು. ಇದರಿಂದ ವಿರೋಧಪಕ್ಷಗಳು ಬೆಳೆಯುವುದಕ್ಕೆ ಏನು ಪ್ರೋತ್ಸಾಹ ಕೊಟ್ಟಾಗಾಯಿತು ? ಇದು ಭ್ರಷ್ಟಾಚಾರವಲ್ಲವೇ ?

ಉಪಾಧ್ಯಕ್ಷರು.—ಇದರಲ್ಲಿ ಏನೂ Point of Order ಇಲ್ಲ.

Sri H. R. KESHAVA MURTHY (Gandasi).—On a point of order, ರೂಲಿಂಗ್ ಪಾರ್ಟಿಯ ಜನರಲ್ ಸೆಕ್ರೆಟರಿಯವರು, ವಿರೋಧಪಕ್ಷದ ನಾಯಕರು ಸಭೆಯಲ್ಲಿ ಇಲ್ಲದೆ ಇರತಕ್ಕ ಕಾಲದಲ್ಲಿ ಅವರ ಮೇಲೆ ಹೀನಾಯವಾಗಿ ಹಾಗೆ ಹೇಳಬಹುದೇ ?

Mr. DEPUTY SPEAKER.—There is no point of order.

ಶ್ರೀ ಡಿ. ಎಂ. ಸಿದ್ದಯ್ಯ.—ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಶಿವಪ್ಪನವರು ಮಾತನಾಡಿದ ರೀತಿಯು ಅಷ್ಟು ಗೌರವಯುತವಾದುದಲ್ಲ ಮತ್ತು ಸಮಂಜಸವಾದುದಲ್ಲ. ಹಾಗೆ ಮಾತನಾಡಲು ನನಗೆ ಸಾಧ್ಯವಿಲ್ಲ, ಅಭ್ಯಾಸವಿಲ್ಲ. ಒಬ್ಬರು ಸದಸ್ಯರು ಇಲ್ಲಿ ಒಂದು ಮಾತನ್ನು ಹೇಳಿದರು. ಏನೆಂದರೆ, ಅವರು ಜನರಲ್ ಸೆಕ್ರೆಟರಿಯಾಗಿದ್ದಾರೆ ತಮ್ಮ ಪಕ್ಷಕ್ಕೆ ಸೇರಲು ಒತ್ತಾಯ ಮಾಡುತ್ತಾರೆ ಎಂದು. ಆ ದೃಷ್ಟಿಯಿಂದ ಹೇಳುವುದಾದರೆ, ಅನೇಕ ಜನ ಮಾನ್ಯ ಸದಸ್ಯರುಗಳು ಬಹಳ ಸಂತೋಷದಿಂದ ಕಾಂಗ್ರೆಸ್ ಪಕ್ಷಕ್ಕೆ ಸೇರುತ್ತಾ ಇದ್ದಾರೆ. ನಾವು ಯಾರೂ ಅವರಿಗೆ ಒತ್ತಾಯ ಮಾಡುತ್ತಾ ಇಲ್ಲ. ಕಾರಣವೇನೆಂದರೆ, ಕಾಂಗ್ರೆಸ್ ಪಕ್ಷದ ಆಡಳಿತ ನೋಡಿ ಸಂತೋಷಪಟ್ಟು ತಮ್ಮಿಷ್ಟಕ್ಕೆ ತಾವೇ ಸೇರಿಕೊಳ್ಳುತ್ತಾರೆ. ನಿಜವಾಗಿಯೂ ಇದರಿಂದ ನಮ್ಮ ಸೇವೆಯು ಸಾರ್ಥಕಗೊಳಿಸಿದೆಯೇ ಹೊರತು ಅನ್ಯಥಾ ಅಲ್ಲ. ಈಗ ಮಂಡಿಸಿದಂತಹ ಆಯವ್ಯಯ ಪಟ್ಟಿಯಲ್ಲಿ ಮಾನ್ಯ ಹಣಕಾಸಿನ ಸಚಿವರು ಬಹಳ ತುಲನಾತ್ಮಕ ದೃಷ್ಟಿಯಿಂದ 1966-67ನೇ ಸಾಲಿನ ಆದಾಯದಲ್ಲಿ 156 ಕೋಟಿ 53 ಲಕ್ಷ ಚಿಲ್ಲರೆ ಉತ್ಪತ್ತಿಯನ್ನು, 154 ಕೋಟಿ ಖರ್ಚನ್ನು ತೋರಿಸಿ 2

ಕೋಟಿ 53 ಲಕ್ಷ ಉಳಿತಾಯವನ್ನು ತೋರಿಸಿದ್ದಾರೆ. ನಾವಾದರೂ ಕೂಡ ಅಷ್ಟು ಆಶಾದಾಯಕವಾದ ಆಯವ್ಯಯ ಪಟ್ಟಿಯನ್ನು ನಿರೀಕ್ಷಿಸಿರಲಿಲ್ಲ. ದೇಶದ ಪರಿಸ್ಥಿತಿ ಕಠಿಣವಾದರೂ, ಕಷ್ಟವಾದರೂ ನಮ್ಮ ಆರ್ಥಿಕ ಪರಿಸ್ಥಿತಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಕಳವಳ ಪಟ್ಟು ಹೇಳಿದ ಹಾಗೆ ನಾವು ಯಾರೂ ಗಾಬರಿ ಪಡಬೇಕಾಗಿಲ್ಲ ಎಂದು ಹೇಳಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಆಕ್ಷೇಪಣೆಯಲ್ಲಿ ಕೇಂದ್ರದಿಂದ ರಾಜ್ಯಸರ್ಕಾರ ಬೇಕಾದಷ್ಟು ಸಾಲವನ್ನು ತೆಗೆದುಕೊಂಡಿದ್ದಾರೆ. ಓವರ್ ಡ್ರಾಫ್ಟ್ ತೆಗೆದು ಕೊಂಡಿದ್ದಾರೆ ಎಂದು ಹೇಳಿದರು. ಹಣಕಾಸಿನ ಪರಿಸ್ಥಿತಿಯನ್ನು ಚರ್ಚಿಸುವಾಗ ಅಗತ್ಯತೆಗಳನ್ನು ಪರಿಣಾಮಕರವಾದ ರೀತಿಯಲ್ಲಿ ತಿಳಿಸಿದ್ದೇ ಆದರೆ ನನಗಾದರೂ ತುಂಬಾ ಸಂತೋಷವಾಗುತ್ತಿತ್ತು. ಫೆಡರಲ್ ರಾಜ್ಯಾಂಗದಲ್ಲಿ ಪ್ರಾಂತ್ಯಗಳು ರಚನಾತ್ಮಕವಾದ ಕೆಲಸಗಳನ್ನು ಮಾಡಬೇಕಾದರೆ ನಮ್ಮ ಉತ್ಪತ್ತಿ ಏನಿದೆ, ಅದರಿಂದ ಇಲ್ಲಿ ದೊಡ್ಡ ಕೆಲಸಗಳನ್ನು, ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಫೆಡರಲ್ ರಾಜ್ಯಾಂಗದ ನೀತಿಯಲ್ಲಿ ಕೇಂದ್ರಸರ್ಕಾರ ಅಧಿಕ ರೀತಿಯಲ್ಲಿ ಪ್ರಾಂತ್ಯ ಸರ್ಕಾರಗಳಿಗೆ ನೆರವನ್ನು ಕೊಡಬಹುದು, ಸಾಲದ ರೂಪವಾಗಿ ಕೊಡಬಹುದು, ಗ್ರಾಂಟ್ ರೂಪವಾಗಿ ಕೊಡಬಹುದು ; ಹೀಗೆ ನಾನಾ ರೀತಿಯಲ್ಲಿ ಕೇಂದ್ರ ಸರ್ಕಾರ ಸಹಾಯ ಮಾಡಿದರೆ ವಿವಿಧ ಪ್ರಾಂತ್ಯಗಳು ಸುಪ್ರಷ್ಟವಾಗಿ ಬೆಳೆದು ಕೇಂದ್ರಕ್ಕೆ ಶಕ್ತಿ ಕೊಡುವುದಲ್ಲದೆ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ಉದ್ದೇಶವೇನಿದೆ, ಅದನ್ನು ಕೇಂದ್ರೀಕರಿಸಿ ದೇಶವನ್ನು ಸಮಾಜವಾದದ ಕಡೆಗೆ ಒಯ್ಯಬೇಕು. ನಾವು ಸ್ವಾತಂತ್ರ್ಯಬಂದ ಮೇಲೆ ದೇಶದಲ್ಲಿರತಕ್ಕ 45 ಕೋಟಿ ಜನಗಳ ಆರ್ಥಿಕ, ಸಾಮಾಜಿಕ ಪರಿಸ್ಥಿತಿಗಳು ಉತ್ತಮವಾಗ ಬೇಕು ಎನ್ನುವ ದೃಷ್ಟಿಯನ್ನಿಟ್ಟುಕೊಂಡು, ಆ ರೀತಿ ನಿಯಮಗಳನ್ನು ಹಾಕಿದ್ದೇವೆ. ಅದನ್ನು ಸಾರ್ಥಕಗೊಳಿಸಬೇಕಾದರೆ ಈ ರೀತಿಯ ಸಲಹೆಗಳನ್ನು ತಂದು ಟೀಕಿಸುವುದು ಸಾಧುವಾದುದಲ್ಲ ಮತ್ತು ಲೌಕಿಕವಲ್ಲ ಎಂದು ನಾನು ಭಾವಿಸುತ್ತೇನೆ. ಮತ್ತೊಂದು, ಸಾಲ ತಂದ ಮೇಲೆ ಬಡ್ಡಿಯನ್ನು ಕೊಡಬೇಕು. ಆ ಸಾಲಗಳನ್ನು ತಂದು ಯಾವ ಯಾವ ಕೆಲಸಗಳ ಮೇಲೆ ಹಾಕುತ್ತೇವೆ ಆ ಯೋಜನೆಗಳ ಉತ್ಪತ್ತಿಯು ಪರಿಪೂರ್ಣವಾಗಿ ಸಿಗಲು ಕೆಲವು ವರ್ಷಗಳಾಗುತ್ತವೆ. ಈ ದೃಷ್ಟಿಯಿಂದ ತಾತ್ಕಾಲಿಕವಾಗಿ ನಮ್ಮ ಪರಿಸ್ಥಿತಿಯು ಕಠಿಣವಾಗಿ ಕಂಡು ಬಂದರೂ ಕೂಡ ಉತ್ತರೋತ್ತರವಾಗಿ ನಮ್ಮ ಆರ್ಥಿಕ ಪರಿಸ್ಥಿತಿಯು ಸಮಾಜದ ಒಂದು ನೀತಿಯ ಮೇಲೆ ನಿಂತು ಸಮಾಜ ರಚನೆಯಾಗತಕ್ಕ ಕಾಲದಲ್ಲಿ, ಇವೆಲ್ಲಾ ಅನಿವಾರ್ಯ ಘಟನೆಗಳೆಂದು ನಾನು ತಿಳಿಯುತ್ತೇನೆ.

ಅಷ್ಟೇ ಅಲ್ಲ ನಮ್ಮ `ಹಣಕಾಸಿನ ಸಚಿವರು ತಮ್ಮ ಭಾಷಣದಲ್ಲಿ ನಮೂದಿಸಿರುವ ಹಾಗೆ ಕೇಂದ್ರಕ್ಕೂ ಪ್ರಾಂತಕ್ಕೂ ಹಣ ಸರಿಯಾಗಿ ವಿಲೇವಾರಿಯಾಗುತ್ತಿಲ್ಲ. ಅದಕ್ಕೆ ಒಂದು ಹೊಸ ವ್ಯವಸ್ಥೆ ಮಾಡಬೇಕು. ನಮಗೆ ನ್ಯಾಯವಾಗಿ ಸಲ್ಲತಕ್ಕ ಗ್ರಾಂಟ್ ವಗೈರೆ ಏನಿದೆ, ಅದು ಫಿನಾನ್ಸ್ ಕಮಿಶನ್ನಿನ ಶಿಫಾರಸಿಗನುಸಾರವಾಗಿ ನಮಗೆ ದೊರಕುತ್ತಾ ಇಲ್ಲ. ಅದಕ್ಕೆ ಒಂದು ಹೈಪವರ್ ಕಮಿಶನ್ ಮಾಡಿ ಅದನ್ನು ಪರೀಕ್ಷಿಸಿ ನಮಗೆ ಸರಿಯಾದ ರೀತಿಯಲ್ಲಿ ಹಣವನ್ನು ಒದಗಿಸಬೇಕು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಒಂದು ಮಾತಿನಲ್ಲಿ ಹೇಳುವುದಾದರೆ, ನಾವು ಏನು ಸಾಲ ಪಡೆಯುತ್ತಿದ್ದೇವೆ ಮತ್ತು ಏನು ಗ್ರಾಂಟಗಳನ್ನು ಪಡೆಯುತ್ತಿದ್ದೇವೆ, ಇದನ್ನು ನಾವು ನಮ್ಮ ಎಲ್ಲಾ ಅಭಿವೃದ್ಧಿ ಕೆಲಸಗಳಿಗೆ ಹಾಕಿದ್ದೇವೆ. ಅದರಿಂದ ಉತ್ಪತ್ತಿ ಬಂದ ಹಾಗೆ, ನಮ್ಮ ಆರ್ಥಿಕ ಪರಿಸ್ಥಿತಿಯು ಉತ್ತಮವಾಗುತ್ತದೆಂದು ನಾನು ಇಲ್ಲಿ ಸ್ಪಷ್ಟಪಡಿಸುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಶರಾವತಿ ಯೋಜನೆಗೋಸ್ಕರ ನೂರು ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಈಗಾಗಲೇ ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನವರು ನಾಲ್ಕುಕೋಟಿ ರೂಪಾಯಿ ಬೆಲೆಯ ಉತ್ಪತ್ತಿ ತೋರಿಸಿದ್ದಾರೆ. ಕೇವಲ ಎರಡು ಯೂನಿಟ್ ಕಮಿಶನ್ ಮಾಡಿದ್ದಾರೆ. ಇನ್ನು ಬೇಕಾದಷ್ಟು ವಿದ್ಯುಚ್ಛಕ್ತಿ ಉತ್ಪನ್ನ ಮಾಡಿ ನಾವು ನಮ್ಮ ಕೈಗಾರಿಕೆಗಳಿಗೆ, ವ್ಯವಸಾಯಕ್ಕೆ, ಹಾಗೂ ಇತರ ಅಭಿವೃದ್ಧಿ ಕಾರ್ಯಗಳಿಗೆ ಸಾಕಾದಷ್ಟು ಉಪಯೋಗಿಸುವುದಲ್ಲದೆ ನಮ್ಮ ನೆರೆಹೊರೆಯ ಪ್ರಾಂತ್ಯಗಳಿಗೂ ಕೊಡುವರೀತಿಯಲ್ಲಿ, ಅಧಿಕ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಮಾಡಲಿದ್ದೇವೆ. ಅದರಿಂದ ಬರತಕ್ಕ ಹಣಕಾಸು ಏನು ಇದೆ ಅದನ್ನು ನಮ್ಮ ಹಣಕಾಸಿನೊಂದಿಗೆ ಸರಿದೂಗಿಸಕೊಳ್ಳಬಹುದು ಎಂದು ಹೇಳುವುದರಲ್ಲಿ ಸಂಶಯವಿಲ್ಲ.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಈಗ ಮಾನ್ಯ ಮಿತ್ರರು ವಿದ್ಯುಚ್ಛಕ್ತಿ ಬಹಳವಾಗಿ ಉತ್ಪತ್ತಿಯಾಗುತ್ತಿದೆ ಎಂದು ಹೇಳಿದರು. ಆದರೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ಇರತಕ್ಕಂತಹ ಸಲಕರಣೆಗಳು, ವೈಯರು, ಕಂಬ, ಇತ್ಯಾದಿಗಳು ಇಲ್ಲದೆ ಹಳ್ಳಿಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆ ಇರುವುದರಿಂದ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ. ಹೇಳುತ್ತೀರಾ ಸ್ವಾಮಿ.

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ಮಾನ್ಯ ಸದಸ್ಯರಿಗೆ ಗೊತ್ತಿದೆ ವಿದ್ಯುಚ್ಛಕ್ತಿ ಸರಬರಾಜಿನಿಂದ ಎಷ್ಟೋ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೇವೆ; ಎಷ್ಟೋ ಪಂಪ್ ಸೆಟ್ಟುಗಳನ್ನು ಸ್ಥಾಪಿಸುವುದಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡಿ ಆಹಾರ ಉತ್ಪಾದನೆಗೆ ಸಹಾಯ ಮಾಡಿದ್ದೇವೆ. ಮತ್ತು ಎಷ್ಟೋ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಾ ಇದ್ದೇವೆ. ಒಂದು ಮಾತು ಸತ್ಯ. ನಾವು ಎಷ್ಟು ಕೈಗಾರಿಕೆಗಳನ್ನು ಮಾಡಿ ಪರಿಪೂರ್ಣವಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಬೇಕೋ ಅಷ್ಟು ಕೈಗಾರಿಕೆಗಳ ಪ್ರಾರಂಭ ಇನ್ನೂ ಆಗಿಲ್ಲ ಎಂದು ಜನತೆಗೆ ಹೇಳಲು ಹಿಂಜರಿಯುವುದಿಲ್ಲ. ಉದಾಹರಣೆಗೆ ಇವತ್ತಿನ ದಿವಸ ಸ್ಟೀಲ್ ಪ್ಲಾಂಟ್, ಅಲ್ಯೂಮಿನಿಯಂ ಪ್ಲಾಂಟ್ ಮತ್ತು ಇನ್ನಿತರ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ನಾವು ಪ್ರಾರಂಭ ಮಾಡಿದ್ದೇವೆ, ಅದಕ್ಕೆ ಸಾಕಾವಷ್ಟು ವಿದ್ಯುಚ್ಛಕ್ತಿ ನಮ್ಮಲ್ಲಿ ಇದೆ. ಹೀಗೆ ವಿದ್ಯುಚ್ಛಕ್ತಿಯನ್ನು ನಾವು ವಿವಿಧ ರೀತಿಯಲ್ಲಿ ನಮ್ಮ ಕೈಗಾರಿಕೆಗಳಿಗೆ, ವ್ಯವಸಾಯ ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಸಾಕಾದಷ್ಟು ಉತ್ಪತ್ತಿ ಮಾಡಿದ್ದೇವೆ. ಮಾನ್ಯ ಹಣಕಾಸಿನ ಸಚಿವರು ಆಯವ್ಯಯ ಪಟ್ಟಿಯಲ್ಲಿ ಕೊಟ್ಟಿರುವ ಹಾಗೆ ನಾವು ಮುಖ್ಯವಾಗಿ ನಮ್ಮ ಆಹಾರ ಪರಿಸ್ಥಿಯನ್ನು ಸರಿಪಡಿಸಿಕೊಳ್ಳಬೇಕು, ಇವತ್ತು ಅವರು ಹೇಳಿದ ಹಾಗೆ ಮಳೆ ಬಾರದೆ, ನಮ್ಮ ದೇಶದಲ್ಲಿ ಆಹಾರ ಪರಿಸ್ಥಿತಿಯು ಬಹಳ ಕಠಿಣವಾಗಿದೆ; ಜನರು ಕಷ್ಟದಲ್ಲಿದ್ದಾರೆ. ಆದುದರಿಂದ ಸರ್ಕಾರದವರು ಆಹಾರದ ಯೋಜನೆಯಲ್ಲಿ ಹೊಸ ಮಾರ್ಗವನ್ನು ಹುಡುಕಿ ಮೊನಾಪಲಿ ಪ್ರೊಕ್ಯೂರ್‌ಮೆಂಟ್ ಮಾಡಬೇಕು. ಮತ್ತು ಆಹಾರ ಸಂಗ್ರಹಣೆ ಮಾಡುವುದಕ್ಕೋಸ್ಕರ ಬೇಕಾದಷ್ಟು ಸಿಬ್ಬಂದಿ ವರ್ಗಗಳು ಬೇಕು. ಅದನ್ನು ಸರಿಯಾದ ಕಾಲದಲ್ಲಿ ತಮ್ಮ ಮುಂದೆ ಇಡುತ್ತಾರೆಂಬುದೇ ಮಾನ್ಯ ಹಣಕಾಸಿನ ಸಚಿವರ ಸೂಚನೆ. ಮೊನಾಪಲಿ ಪ್ರೊಕ್ಯೂರ್‌ಮೆಂಟ್ ಮಾಡುವುದು ಸೂಕ್ತವಾದ ಕಾರ್ಯ. ಹಳ್ಳಿಗಾಡಿನ ಜನರ ಹಿತದೃಷ್ಟಿಯನ್ನಿಟ್ಟುಕೊಂಡು ಪ್ರತಿಯೊಂದು ಪಂಚಾಯಿತಿಗಳಲ್ಲೂ ಫೇರ್‌ಪ್ರೈಸ್ ಡಿಪೋ ತೆರೆದು ಯಾರಿಗೆ ಆಹಾರ ಒದಗಿಸಿ ಕೊಡಬೇಕೋ ಅವರೆಲ್ಲರಿಗೂ ಯಾವ ಪಕ್ಷಪಾತವಿಲ್ಲದೆ ಸರ್ಕಾರ ಏರ್ಪಾಡು ಮಾಡಬೇಕೆಂಬ ಸಲಹೆಯನ್ನು ಸರ್ಕಾರಕ್ಕೆ ನೀಡಲು ಆಶಿಸುತ್ತೇನೆ.

ಈ ಒಂದು ಆಹಾರದ ನೀತಿ ಏನಿದೆ ಅದು ಕೇಂದ್ರದಲ್ಲೂ ದೊಡ್ಡ ಸಮಸ್ಯೆಯಾಗಿದೆ. ಈ ಈ ಜೋನಲ್ ಪದ್ಧತಿಯನ್ನು ತೆಗೆದು ಹಾಕಬೇಕು. ಆಹಾರವನ್ನು ನಾವು ಧಾರಾಳವಾಗಿ ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಹೋಗಲು ಬಿಡಬೇಕು. ಕೇಂದ್ರದಲ್ಲಿ ಆಲೋಚನೆ ಮಾಡುತ್ತಾ ಇದ್ದಾರೆ. ಯಾವ ಪ್ರಾಂತ್ಯದಲ್ಲಿ ಹೆಚ್ಚಾಗಿ ಆಹಾರ ಬೆಳೆಯುತ್ತಾರೊ, ಅಲ್ಲಿಂದ ಕಡಿಮೆ ಬೆಳೆಯುತಕ್ಕಂತ ರಾಜ್ಯಗಳಿಗೆ ಕಳಿಸಬೇಕು. ಈ ಜೋನಲ್ ಪದ್ಧತಿ ತೆಗೆದು ಹಾಕಿಬಿಟ್ಟರೆ ಅದರಿಂದ ಬಹಳ ಉತ್ತಮವಾಗುತ್ತದೆ. ಆದರಿಂದ ದೇಶದಲ್ಲಿ ಆಹಾರದ ಹಾಹಾಕಾರ ಏನು ಇದೆ ಅದು ಸಡಿಲಗೊಳ್ಳುತ್ತದೆ. ಸರ್ಕಾರ ಆ ಸಮಸ್ಯೆಯನ್ನು ಬಗೆಹರಿಸಬೇಕೆಂದು ಯೋಚಿಸುತ್ತಿದೆ. ನಮ್ಮ ಸರ್ಕಾರ ಮೊನಾಪಲಿ ಪ್ರೊಕ್ಯೂರ್‌ಮೆಂಟ್ ಮಾಡುವುದನ್ನು ನಾನು ಸ್ವಾಗತಿಸುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಈ ಆಹಾರ ಸಂಗ್ರಹಣೆ ಮಾಡಿ ಹೆಚ್ಚಿನ ಜವಾಬ್ದಾರಿಯನ್ನು ಸರ್ಕಾರ ಹೊತ್ತು, ಸಾಕಾದಷ್ಟು ಶ್ರದ್ಧೆಯಿಂದ ಮತ್ತು ಜನಗಳ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಸರಿಯಾದ ಹಂಚಿಕೆ ವ್ಯವಸ್ಥೆ ಮಾಡಬೇಕೆಂದು ನಾನು ಸೂಚಿಸುತ್ತೇನೆ.

3-30 P.M.

ಆಹಾರದ ವಿಚಾರದಲ್ಲಿ ರೈತನಿಗೆ ಬೇಕಾದ ಸಾಲ, ಗೊಬ್ಬರ ಮತ್ತು ಬೀಜ ಎಲ್ಲವನ್ನೂ ಕೂಡ ಒದಗಿಸತಕ್ಕ ಕಾಲದಲ್ಲಿ ಒಂದೇ ಸಮನೆ ಸಕಾಲದಲ್ಲಿ ಒದಗಿಸಬೇಕು. ಸಾಲ ಕೊಟ್ಟು ಬೀಜ ಸಪ್ಲೈ ಮಾಡದೆ ಇದ್ದರೆ, ಎರಡೂ ಕೊಟ್ಟು ಗೊಬ್ಬರ ಕೊಡದೆ ಹೋದರೆ, ಆಹಾರ ಬೆಳೆಯುವುದು ಕಠಿಣವಾಗುತ್ತದೆ. ಆಹಾರ ಬೆಳೆಯುವುದು ಭಾಷಣ ಮಾಡುವಷ್ಟು ಸುಲಭವಲ್ಲ. ಯೋಜನೆ ತಯಾರು ಮಾಡುವಷ್ಟು ಸುಲಭವಲ್ಲ. ಯಾರು ಆಹಾರ ಬೆಳೆಯುತ್ತಾರೋ ಅವರಿಗೆ ಅದರ ಕಷ್ಟ ಗೊತ್ತು. ಸ್ವಲ್ಪ ಸಹಾಯ ಕೊಟ್ಟು ಸಕಾಲದಲ್ಲಿ ರೈತನಿಗೆ ಬೇಕಾದ ವಸ್ತುಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ತೀವ್ರ ಗತಿಯಿಂದ ಆಹಾರ ಇಲಾಖೆ ಹಾಗೂ ಈ ನೀರಾವರಿ ಇಲಾಖೆ ಒಗ್ಗಟ್ಟಿನಿಂದ ಪರಸ್ಪರ ಸಹಕರಿಸಿ ರೈತರ ಹಿತದೃಷ್ಟಿಯಿಂದ ಕರ್ತವ್ಯವನ್ನು ಬಹಳ ಶ್ರದ್ಧೆಯಿಂದ ಮಾಡಬೇಕು. ಮಾನ್ಯ ಸಚಿವರು ಆಹಾರ ಸಮಸ್ಯೆ ದೊಡ್ಡ ಸಮಸ್ಯೆ, ಅದನ್ನು ತೀವ್ರ ಗತಿಯಿಂದ ನಡೆಸಬೇಕು ಎಂದು ಅಪ್ಪಣೆ ಕೊಡಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ನೀರಾವರಿ ಯೋಜನೆ ಬಹಳ ಮುಖ್ಯವಾದುದು. ನಮ್ಮ ದೇಶದಲ್ಲಿ 8·5 ಪರ್ಸೆಂಟು ಮಾತ್ರ ನೀರಾವರಿ ಆಗಿದೆ. ನೆರೆ ಪ್ರಾಂತಗಳಲ್ಲಿ 45–46 ಪರ್ಸೆಂಟು ನೀರಾವರಿ ಆಗಿದೆ. ಆದರೂ ಅವರು ತೀವ್ರಗತಿಯಿಂದ ನೀರಾವರಿ ಯೋಜನೆ ಮಾಡುತ್ತಾ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ, ಅವರು ಅನೇಕ ಇಲಾಖೆ

ಗಳ ಖರ್ಚನ್ನು ನಿಲ್ಲಿಸಿ ಅವೆಲ್ಲವನ್ನೂ ಏಕಮುಖವಾಗಿ ಇನ್ನು ನೀರಾವರಿ ಯೋಜನೆಗಳಿಗೆ ಖರ್ಚು ಮಾಡುತ್ತಾ ಇದ್ದಾರೆ. ಆಂಧ್ರದಲ್ಲಿ ರೋಡ್ ಮಾಡುವ ಕೆಲಸ, ಸ್ಕೂಲ್ ಬಿಲ್ಡಿಂಗ್ ನಿರ್ಮಾಣ ಮಾಡುವ ಕೆಲಸ ಮುಂತಾದ ಎಲ್ಲಾ ಕೆಲಸ ನಿಲ್ಲಿಸಿ ನೀರಾವರಿ ಯೋಜನೆಗಳಿಗಾಗಿ ಹಣವನ್ನು ಏಕ ಮುಖವಾಗಿ ಖರ್ಚು ಮಾಡುತ್ತಾ ಇದ್ದಾರೆ. ಆಹಾರ ಪರಿಸ್ಥಿತಿ ಸರಿಹೋಗುವತನಕ ಸ್ಕೂಲು ಕಟ್ಟಿ ಸದೇ ಇದ್ದರೆ, ರಸ್ತೆ ಮಾಡದಿದ್ದರೆ ಪ್ರಳಯವಾಗುವುದಿಲ್ಲ. ಕೆಲವು ಕಾಲ ರಸ್ತೆ ಇಲ್ಲದೆ, ಬಿಲ್ಡಿಂಗ್ ಇಲ್ಲದೆ ಇರಬಹುದು. ಕೆಲವು ಕಾಲ ಜನತೆಗೆ ಆಹಾರ ಒದಗಿಸದೇ ಇದ್ದರೆ ಏನು ಪರಿಸ್ಥಿತಿ ಉದ್ಭವ ವಾಗುತ್ತದೆ ಎಂಬು ಗೊತ್ತಿದೆ. ಅದನ್ನು ತಡೆಗಟ್ಟಿ ಮನುಷ್ಯನಿಗೆ ಅವಶ್ಯವನ್ನು ಒದಗಿಸಬೇಕು. ಈ ಬಿಲ್ಡಿಂಗ್ ವಗೈರೆ ಬಾಬುಗಳಿಗೆ, ರಸ್ತೆ ಸೇತುವೆಗಳಿಗೆ ಖರ್ಚು ಮಾಡುವ ಹಣವನ್ನು ಉಳಿತಾಯ ಮಾಡಿ, ನಾವು ಏನು ಈ ನೀರಾವರಿಗಾಗಿ ಹಣವನ್ನು ಖರ್ಚು ಮಾಡುತ್ತಿದ್ದೇವೋ ಅದರ ಜೊತೆಗೂಡಿಸಿ ಕೆಲಸ ಮಾಡಬೇಕು ಎಂದು ಸಲಹೆ ಮಾಡುತ್ತಾ ಇದ್ದೇನೆ. ದೊಡ್ಡ ನೀರಾವರಿ ಯೋಜನೆಗಳ ವಿಷಯದಲ್ಲಿ ಮುಖ್ಯ ಮಂತ್ರಿಗಳು ಆಗಾಗ್ಗೆ ಹೇಳಿಕೆಗಳನ್ನು ಕೊಟ್ಟಿದ್ದಾರೆ. ನಿನ್ನೆ ಕೂಡ ಪತ್ರಿಕೆಗಳಲ್ಲಿ ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ಒಂದು ಕೃಷ್ಣಾ ಪ್ರಾಜೆಕ್ಟಿಗೆ 120 ಕೋಟಿ ರೂಪಾಯಿ ಖರ್ಚು ಆಗತಕ್ಕದ್ದು. ಇದನ್ನು ನ್ಯಾಷನಲ್ ಪ್ರಾಜೆಕ್ಟ್ ಮಾಡಿ ಕೇಂದ್ರದಿಂದ ಮಾಡಿರತಕ್ಕ ಸಾಹಸ ಕೆಲಸ ವನ್ನು ಅವರು ಮಾಡಲೇಬೇಕು ಎಂದು ಒತ್ತಾಯಪೂರ್ವಕವಾಗಿ ಈ ಸಭೆಯ ಮೂಲಕ ಅವರಿಗೆ ಬಿನ್ನವಿಸಿಕೊಳ್ಳುತ್ತೇನೆ. ಆಂಧ್ರದಲ್ಲಿ ಹೇಗೆ ನಾಗಾರ್ಜುನ ಸಾಗರ ಕಟ್ಟಿಸಿದ್ದಾರೋ ಒರಿಸ್ಸಾದಲ್ಲಿ ಹೇಗೆ ದೊಡ್ಡ ಪ್ರಾಜೆಕ್ಟ್ ಕೇಂದ್ರ ಸರ್ಕಾರ ಕಟ್ಟಿಸಿ ಕೊಟ್ಟಿದ್ದಾರೋ ಪಂಜಾಬಿನಲ್ಲಿ ಹೇಗೆ ಭಾಕ್ರಾ ನಂಗಲ್ ನ್ಯಾಷನಲ್ ಪ್ರಾಜೆಕ್ಟನ್ನಾಗಿ ರಾಷ್ಟ್ರೀಯ ಯೋಜನೆಯಂತೆ ಕಟ್ಟಿದ್ದಾರೋ ಹಾಗೆ ಮತ್ತು ಮೂರು ರಾಜ್ಯಗಳಲ್ಲಿ ದೊಡ್ಡ ದೊಡ್ಡ ರಾಷ್ಟ್ರೀಯ ಪ್ರಾಜೆಕ್ಟುಗಳು ಆಗುತ್ತಾ ಇವೆಯೋ ಹಾಗೆಯೇ ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಏತಕ್ಕೆ ನ್ಯಾಷನಲ್ ಪ್ರಾಜೆಕ್ಟ್ ಆಗಿ ಕಟ್ಟಬಾರದು ? ಅದನ್ನು ಕಟ್ಟುವ ಹಾಗೆ ಸರ್ಕಾರದವರು ಕೇಂದ್ರವನ್ನು ಒತ್ತಾಯ ಮಾಡಬೇಕೆಂದು ಹೇಳುತ್ತೇನೆ. ವಿರೋಧ ಪಕ್ಷದ ನಾಯಕರು, ಇದೇ ಮಾತನ್ನು ಸೂಚಿಸಿದ್ದಾರೆ. ಅವರ ಜೊತೆಗೆ ಧ್ವನಿಗೂಡಿಸಿ ನಾನು ಒತ್ತಾಯ ಮಾಡುತ್ತೇನೆ. ಈ ದೊಡ್ಡ ಪ್ರಾಜೆಕ್ಟನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡರೆ ಉಳಿದ ಅನೇಕ ಪ್ರಾಜೆಕ್ಟ್‌ಗಳನ್ನು ನಾವು ತೆಗೆದುಕೊಳ್ಳಬಹುದು. ಅವುಗಳಿಗೆ ಸುಮಾರು 370 ಕೋಟಿ ರೂಪಾಯಿ ವೆಚ್ಚವಾಗಬಹುದು ಇದಕ್ಕೋಸ್ಕರ ಸರ್ಕಾರದಲ್ಲಿ ಒಂದು 15 ವರ್ಷದ ಯೋಜನೆ ತಯಾರಾಗಿದೆ. ಈಗ ಅದಕ್ಕೆ 500 ಕೋಟಿ ರೂಪಾಯಿ ಆಗಬಹುದು ಎಂದು ಅಭಿಪ್ರಾಯ ಪಟ್ಟಿ ದ್ದಾರೆ. ಇವೊತ್ತು ನಾನು ಸರ್ಕಾರದ ತೀವ್ರಗಮನಕ್ಕೆ ತರತಕ್ಕ ಮುಖ್ಯ ವಿಷಯ, ಕಾವೇರಿ ಬೇಸಿನ್ ನಲ್ಲಿ ಇರತಕ್ಕ ಪ್ರಾಜೆಕ್ಟುಗಳನ್ನು 1972 ರ ಒಳಗೆ ಕಟ್ಟದೇ ಇದ್ದ ಪಕ್ಷದಲ್ಲಿ ಮದ್ರಾಸ್ ಸರ್ಕಾರಕ್ಕೂ ನಮಗೂ ಆದ ಒಪ್ಪಂದ ಬದಲಾಯಿಸಬೇಕಾಗುತ್ತದೆ. ಅವರು ತಮ್ಮ ಕಡೆ ಇರುವ ಪ್ರಾಜೆಕ್ಟು ಗಳನ್ನೆಲ್ಲಾ ಕಟ್ಟಿ ಸಿದ್ಧವಾಗಿದ್ದಾರೆ. ಕೃಷ್ಣಾ ನದಿ ನೀರಿನ ಹಂಚಿಕೆ ವಿಚಾರದಲ್ಲಿ ಹೊಡೆದಾಡಿ ಸಾಕಷ್ಟು ಪರಿಪೂರ್ಣತೆಯನ್ನು ಪಡೆದಿದೆ. ಕಾವೇರಿ ಬೇಸಿನ್ ಪ್ರಾಜೆಕ್ಟ್ ನಿಧಾನ ಮಾಡಿ ಮಂದ ಗತಿಯಿಂದ ಹೋದರೆ, ನಮಗೆ ಅದರಿಂದ ಬಹಳ ತೊಂದರೆ ಆದೀತು. ಇದರ ಕಡೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಈ ದೊಡ್ಡ ಕೃಷ್ಣಾ ಪ್ರಾಜೆಕ್ಟು ಕೇಂದ್ರಕ್ಕೆ ವಹಿಸಿದರೆ ಉಳಿದ ಹಣ ವನ್ನೆಲ್ಲಾ ಮೀಡಿಯಂ ಮತ್ತು ಮೈನರ್ ಪ್ರಾಜೆಕ್ಟ್‌ಗಳಿಗೆ ಉಪಯೋಗಿಸಿ ನಿರ್ದಿಷ್ಟ ಕಾಲದಲ್ಲಿ ಕೆಲಸ ಗಳನ್ನು ಮುಗಿಸುವುದಕ್ಕೆ ಸಾಧ್ಯವಾದೀತು. ಈ ವಿಷಯದಲ್ಲಿ ಹೆಚ್ಚಿನ ದೃಢ ಸಂಕಲ್ಪ ಮಾಡಬೇಕು. ಧೈರ್ಯದಿಂದ ಮುಂದೆ ಹೋಗಬೇಕು ಎನ್ನುವ ಮಾತನ್ನು ಮುಖ್ಯಮಂತ್ರಿಗಳಿಗೆ ಅವರ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಈ ಪ್ರಾಜೆಕ್ಟುಗಳನ್ನು ಮಾಡದೇ ಇದ್ದ ಪಕ್ಷದಲ್ಲಿ ಆಗಾಗ ಸಕಾಲ ದಲ್ಲಿ ಮಳೆ ಬಾರದೆ ಆಹಾರದ ಕೊರತೆ ನೀಗಿಸುವುದಕ್ಕೆ ಕಷ್ಟವಾಗಬಹುದು. ಆದುದರಿಂದ ಟಾಪ್ ಪ್ರಿಯಾರಿಟಿ ಕೊಟ್ಟು ಆಹಾರ ಉತ್ಪಾದನೆ ಮಾಡುವುದಕ್ಕೆ, ಏನು ಮೈನರ್ ಇರ್ರಿಗೇಷನ್ ಇವೆ, ಜಾಗ್ರತೆ ಆಹಾರವನ್ನು ಬೆಳೆಯತಕ್ಕ ಏನು ಯೋಜನೆಗಳನ್ನು ಹಾಕಿದ್ದೀರಿ, ಅವುಗಳ ಜೊತೆಗೆ ಶಾಶ್ವತ ವಾದ ಕ್ಷಾಮವನ್ನು ತಪ್ಪಿಸುವುದಕ್ಕೆ ಜನಗಳಿಗೆ ಅನ್ನದ ಕೊರತೆಯನ್ನು ನೀಗಿಸುವುದಕ್ಕೆ ಏನು ದೊಡ್ಡ ಪ್ರಾಜೆಕ್ಟು ಇವೆ, ಅವನ್ನೆಲ್ಲಾ ಸರ್ಕಾರದವರು ಧೈರ್ಯ ಮಾಡಿ ತೆಗೆದುಕೊಂಡು ಕೆಲವು ಇಲಾಖೆ ಗಳಿಗೆ ಹಣವನ್ನು ಖರ್ಚು ಮಾಡುವುದನ್ನು ನಿಲ್ಲಿಸಿ, ಇರುವ ಹಣವನ್ನೆಲ್ಲಾ ಸೇರಿಸಿ ಕೆಲಸ ಮಾಡ ಬೇಕು. ಹಾಗೆ ಮಾಡುವುದರಿಂದ ಆಹಾರದ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯ ಎಂದು ತಮಗೆ ಮೂಲಕ ಸರ್ಕಾರಕ್ಕೆ ನಿವೇದಿಸುತ್ತೇನೆ.

ಎರಡನೆಯದಾಗಿ ಕೈಗಾರಿಕಾ ವಿಷಯದಲ್ಲಿ ಮಾತನಾಡುವುದಾದರೆ, ನಮ್ಮ ಮೈಸೂರು, ಸರ್. ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾರವರ ಕಾಲದಲ್ಲಿ ಕೈಗಾರಿಕಾ ಉತ್ಪಾದನೆಯಲ್ಲಿ ಒಳ್ಳೆಯ ಹೆಸರು ಪಡೆದಿತ್ತು. ಇವೊತ್ತಿನ ದಿವಸ ಕೈಗಾರಿಕೆಯಲ್ಲಿ ಎಷ್ಟು ಮಟ್ಟಿಗೆ ಪ್ರಗತಿಯನ್ನು ಸಾಧಿಸ ಬೇಕೋ ಅಷ್ಟರಮಟ್ಟಿಗೆ ಸಾಧಿಸಿಲ್ಲ. ಈ ವಿಚಾರದಲ್ಲಿ ಮದ್ರಾಸ್ ಕೈಗಾರಿಕಾ ಸಚಿವರು ಡೆಲ್ಲಿಗೆ

(ಶ್ರೀ ಡಿ. ಎಂ. ಸಿದ್ದಯ್ಯ)

ಪ್ರಯಾಣ ಮಾಡಬೇಕಾದರೆ, ಅಲ್ಲಿಯ ಕೈಗಾರಿಕೋದ್ಯಮಿಗಳನ್ನು ಕರೆಸಿ, ಯಾವ ಯಾವ ಸಹಾಯ ಆಗಬೇಕೆಂಬುದನ್ನೆಲ್ಲಾ ಮನಸ್ಸಿಗೆ ತಂದುಕೊಂಡು ನೋಟ್ ಮಾಡಿಕೊಂಡು, ಡೆಲ್ಲಿಗೆ ಹೋಗಿ ಏನು ಏನು ಸಹಾಯ ಪಡೆಯಬಹುದೋ ಅವನ್ನೆಲ್ಲಾ ಪಡೆದುಕೊಂಡು ಬರುತ್ತಾರೆ. ಬಹುಶಃ ಮದ್ರಾಸ್‌ನಲ್ಲಿ ಇಷ್ಟೊಂದು ಕೈಗಾರಿಕೆ ಯಶಸ್ವಿಯಾಗಬೇಕಾದರೆ ಅಲ್ಲಿಯ ಸರ್ಕಾರ ಹಾಗೂ ಕೈಗಾರಿಕಾ ಮಂತ್ರಿಗಳು ಮುಖ್ಯ ಕಾರಣ ಎಂದು ನಾನು ಈ ಸಭೆಯಲ್ಲಿ ಹೇಳಬೇಕಾಗಿಲ್ಲ. ಅದು ಜನಜನಿತವಾದ ಮತ್ತು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನಮ್ಮ ದೇಶದಲ್ಲಿ ಪ್ರಕೃತಿಯ ಸೌಕರ್ಯಗಳು ಬೇಕಾದಷ್ಟು ಇವೆ. ಇದನ್ನೆಲ್ಲಾ ನಾವು ಕ್ರೋಢೀಕರಿಸಬೇಕು. ಕೈಗಾರಿಕೆಗಳಿಗೆ ಬೇಕಾದಷ್ಟು ಪವರನ್ನು ಶರಾವತಿಯಲ್ಲಿ ಉತ್ಪತ್ತಿ ಮಾಡುತ್ತಿದ್ದಾರೆ. ಅವನ್ನು ಒದಗಿಸಿಕೊಟ್ಟು ಕೈಗಾರಿಕೆಗಳಿಗೆ ಉತ್ತೇಜನ ಮಾಡುವುದಾದರೆ ಅದರ ಜೊತೆಗೆ ಅದಕ್ಕೆ ಸಂಬಂಧಪಟ್ಟ ಇತರ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಧ್ಯವಾದೀತು. ದೊಡ್ಡ ಕೈಗಾರಿಕೆಗಳನ್ನು ನಾವು ಬಹಳಮಟ್ಟಿಗೆ ಉತ್ತೇಜನಕರವಾದ ರೀತಿಯಲ್ಲಿ ಸಾಧಿಸುವುದಕ್ಕೆ ನಮಗೆ ಎಲ್ಲಾ ಸೌಕರ್ಯಗಳು ಇವೆ. ಸರ್ಕಾರ ಇದಕ್ಕೆ ನಿಗಾ ಕೊಟ್ಟು ಬಹಳ ಶ್ರದ್ಧೆಯಿಂದ ಕೆಲಸ ಮಾಡಬೇಕು ಎಂದು ತಿಳಿಸುತ್ತೇನೆ. ಅವರೇ ಅಪ್ಪಣೆ ಕೊಡಿಸಿರುವ ಹಾಗೆ 400 ಅಪ್ಲಿಕೇಷನ್ ಬಂದಿದ್ದವು, ಅವುಗಳಲ್ಲಿ 150 ಅಪ್ಲಿಕೇಷನ್‌ಗೆ ಲೈಸೆನ್ಸ್ ಕೊಟ್ಟಿತ್ತು, ಆದರೆ ಲೈಸೆನ್ಸ್ ಕೊಟ್ಟಿರುವುದು ಎಲ್ಲಾ ಕಾರ್ಯಗತಮಾಡಿಲ್ಲ ಎಂದು ಹೇಳಿದ್ದಾರೆ. ಸರ್ಕಾರದವರು ಅರ್ಜಿಯನ್ನು ಶಿಫಾರ್ಸು ಮಾಡುವಾಗ ಅವರ ಯೋಗ್ಯತೆ ಏನು, ಪ್ರೈವೇಟ್‌ಗೆ ಏಜೆನ್ಸಿಗೆ ಶಿಫಾರಸ್ಸು ಮಾಡುವಾಗ ಅವರಿಗೆ ಇರತಕ್ಕ ಬಂಡವಾಳ ಏನು, ಕೈಗಾರಿಕೆಯಲ್ಲಿ ಅವರಿಗೆ ಎಷ್ಟು ಮಟ್ಟಿಗೆ ಉತ್ತೇಜನ ಇದೆ, ಶ್ರದ್ಧೆ ಇದೆ ಎಂದು ಸರ್ಕಾರದವರು ನೋಡಿ ಲೈಸೆನ್ಸ್ ಶಿಫಾರಸು ಮಾಡಬೇಕು. ಯಾರು ಅವರ ಬಂಡವಾಳ ಹಾಕಿ ಕೈಗಾರಿಕೋದ್ಯಮ ನಡೆಸುತ್ತಾರೆ. ಅವರಿಗೆ ಸರ್ವವಿಧವಾದ ಸಹಾಯ ಮಾಡಬೇಕು ಎಂದು ಹೇಳುತ್ತೇನೆ. ಇತ್ತೀಚೆಗೆ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗೆ ಉತ್ತೇಜನ ಕೊಡುತ್ತಾ ಇದ್ದಾರೆ.

ಇನ್ನು ಮೂರನೇಯದಾಗಿ ರಾಜ್ಯದ ಹಣಕಾಸಿನ ಬಗ್ಗೆ ಕಷ್ಟ ಪರಿಸ್ಥಿತಿಯಲ್ಲಿ ಇದ್ದರೂ ಕೂಡ ರಾಜ್ಯ ಸರ್ಕಾರದ ನೌಕರರಿಗೆ 210 ರೂಪಾಯಿ ಸಂಬಳದವರೆಗೆ 5 ರೂಪಾಯಿ ತುಟ್ಟಿ ಭತ್ಯ ಜಾಸ್ತಿ ಮಾಡಿದ್ದಾರೆ. ಇದರಿಂದ ರಾಜ್ಯಕ್ಕೆ ಒಟ್ಟು 1.5 ಕೋಟಿ ರೂಪಾಯಿ ಖರ್ಚಾಗುತ್ತದೆ. ಬೆಲೆ ಹೆಚ್ಚಾಗಿರತಕ್ಕಂಥ ಈಗಿನ ಪರಿಸ್ಥಿತಿಯಲ್ಲಿ 210 ರೂಪಾಯಿ ಸಂಬಳದವರೆಗೆ 5 ರೂಪಾಯಿ ತುಟ್ಟಿ ಭತ್ಯ ಏನು ಹೆಚ್ಚು ಕೊಟ್ಟಿರುತ್ತಾರೆಯೋ ಅದಕ್ಕಾಗಿ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ನಮ್ಮ ಕರ್ನಾಟಕ ರಂಗಭೂಮಿಯಲ್ಲಿ ಅನೇಕ ಶ್ರೇಷ್ಠ ದರ್ಜೆಯ ನಟ ವರ್ಗದವರು ಇದ್ದಾರೆ. ಕನ್ನಡ ರಂಗಭೂಮಿಯ ನಟ ಶ್ರೇಷ್ಠರು ಬಹಳ ತೊಂದರೆಯಲ್ಲಿದ್ದಾರೆ. ಒಂದು ಕನ್ನಡ ಫಿಲ್ಮ್ ಸ್ಟುಡಿಯೋ ಮಾಡಿ ಕನ್ನಡ ಫಿಲ್ಮ್ ತಯಾರು ಮಾಡುವುದಕ್ಕೆ ಕಷ್ಟವಾಗಿದೆ. ಕನ್ನಡ ಫಿಲ್ಮುಗಳಿಗೆ ಉತ್ತೇಜನ ಕೊಡಬೇಕಾಗಿದೆ. ಈ ಉದ್ಯಮದಲ್ಲಿ ತೊಡಗಿರುವವರನ್ನು ನಿಕೃಷ್ಟ ಭಾವನೆಯಿಂದ ಕಾಣುತ್ತಾರೆ. ಈ ಕಷ್ಟ ಪರಿಹಾರ ಮಾಡುವುದಕ್ಕಾಗಿ ಸರ್ಕಾರದವರು ಸಿನೆಮಾ ಉದ್ಯಮದಲ್ಲಿ ಹಾಕಿರುವ ತೆರಿಗೆ ಮೇಲೆ ಸರ್‌ಚಾರ್ಜು ಹಾಕಿ ಅದರಿಂದ ಬರತಕ್ಕ ಹಣವನ್ನು ಕೊಟ್ಟು ಉತ್ತೇಜನ ಕೊಡಬೇಕೆಂದು ಮಾಡುವುದಾಗಿ ಹೇಳಿದ್ದಾರೆ. ಯಾರಿಗೆ ಟ್ಯಾಕ್ಸ್ ಕೊಡುವುದಕ್ಕೆ ಯೋಗ್ಯತೆ ಇದೆಯೋ ಸಾಮರ್ಥ್ಯವಿದೆಯೋ ಅಂಥವರ ಮೇಲೆ ಟ್ಯಾಕ್ಸ್ ಹಾಕಿ ಈ ಉದ್ಯಮದಲ್ಲಿ ತೊಡಗಿರುವಂಥವರಿಗೆ ಅನುಕೂಲವಾಗುವಂತೆ ಸಹಾಯ ಮಾಡತಕ್ಕಂಥಾದ್ದು ಯೋಗ್ಯವಾಗಿದೆ. ಸರ್ಕಾರಕ್ಕೆ ಬಹಳ ದಿವಸದಿಂದ ಈ ಒಂದು ಆಶೆ ಇದ್ದಿತು. ಕಷ್ಟ ಕಾಲದಲ್ಲಿ ಈಗ ಅವರಿಗೆ ಸಹಾಯ ಕೊಟ್ಟಿದ್ದಾರೆ ಆದುದರಿಂದ ನಾನು ಅವರಿಗೆ ಅಭಿನಂದಿಸುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳಲು ಬಯಸುತ್ತೇನೆ. ಈಗಿನ ಕಷ್ಟದ ಪರಿಸ್ಥಿತಿಯಲ್ಲಿ, ಸಂದಿಗ್ಧ ಪರಿಸ್ಥಿತಿಯಲ್ಲಿ ಬಹಳ ಶ್ರಮಪಟ್ಟು ಹಣಕಾಸಿನ ಸಚಿವರು ನಮ್ಮ ಮುಂದೆ ಈ ವರ್ಷದ ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದಾರೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಏನೇನು ತಪ್ಪು ಆಗಿದೆಯೋ, ಯಾವುದನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲವೋ ಎಲ್ಲಿ ಎಡವಿ ಬಿದ್ದಿದ್ದೇವೆಯೋ ಅದೆಲ್ಲವನ್ನೂ ಸರಿಪಡಿಸಿ ಈ ನಾಲ್ಕನೇ ಪಂಚ ವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿ, ಯಾವ ಸದುದ್ದೇಶದಿಂದ ಈ ದೇಶವನ್ನು ಸಮಾಜವಾದೀ ಸಮಾಜ ರಚನೆಯಲ್ಲಿ ತೆಗೆದುಕೊಂಡು ಹೋಗಿ ಸುಖೀ ರಾಜ್ಯ ನಿರ್ಮಾಣ ಮಾಡಬೇಕೆಂದು ಸರ್ಕಾರ ಹೊರಟಿದೆ, ಆ ಸುಖೀರಾಜ್ಯ ನಿರ್ಮಾಣ ಮಾಡುವ ಈ ಮಹಾ ಕಾರ್ಯದಲ್ಲಿ ವಿರೋಧ ಪಕ್ಷದವರೂ ಕೂಡ ಸಹಾಯ ಮಾಡಬೇಕೆಂದು ಈ ಮೂಲಕ ಬಯಸು

ತ್ತೇನೆ. ರಾಜಕೀಯದಲ್ಲಿ ಬೇರೆ ಬೇರೆ ಪಕ್ಷಗಳು ಇದ್ದರೂ ಕೂಡ ಎಲ್ಲರ ಘನ ಉದ್ದೇಶ ಅಂದರೆ, ಈ ದೇಶವನ್ನು ಸುಖೀರಾಜ್ಯ ಮಾಡಬೇಕು ಎಂದು. ಇದು ನಮ್ಮೆಲ್ಲರ ಪವಿತ್ರ ಕರ್ತವ್ಯವಾಗಿದೆ. ನಮ್ಮ ಅರ್ಥ ಸಚಿವರ ಬಜೆಟ್ ಭಾಷಣವು ಆಶಾದಾಯಕವಾಗಿದೆ. ಅದಕ್ಕೆ ನಾನು ಸಂಪೂರ್ಣವಾಗಿ ಬೆಂಬಲ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಹೀಗೆ ಈ ವರ್ಷ ಆಶಾದಾಯಕ ಪರಿಸ್ಥಿತಿಯಿಂದ ಪ್ರಾರಂಭ ವಾಗಿದ್ದರೂ ಕೂಡ ಪ್ರಕೃತಿ ವಿಕೋಪದಿಂದ ಮಳೆ ಇಲ್ಲದೆ ಆಹಾರದ ಕೊರತೆಯುಂಟಾಗಿದೆ. ಅದನ್ನು ಸರಿಯಾಗಿ ಪರಿಹರಿಸಬೇಕಾಗಿದೆ. ಇದಲ್ಲದೆ ಹೋದ ವರ್ಷ ಪಾಕಿಸ್ತಾನದೊಡನೆ ನಡೆದ ಯುದ್ಧದಲ್ಲಿ ಜಯಿಸಿದ್ದೇವೆ. ತಾಷ್ಕೆಂಟ್ ಒಪ್ಪಂದ ಮಾಡಿಕೊಂಡಿರುವುದನ್ನು ಸಹ ಅವರು ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾವು ಮುನ್ನಡೆಯುತ್ತಿದ್ದೇವೆ. ನನ್ನ ಮಾತನ್ನು ಮುಗಿಸುವ ಮುಂಚೆ ಇನ್ನೊಂದು ಮಾತನ್ನು ಹೇಳುತ್ತೇನೆ. ರಾಜ್ಯದಲ್ಲಿಯ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಮಾಡಿಕೊಡಬೇಕೆಂದು ಮಾನ್ಯ ಅರ್ಥ ಸಚಿವರಿಗೆ ಹೇಳುತ್ತೇನೆ. ಇದಕ್ಕೆ ಎಷ್ಟೇ ಹಣ ಖರ್ಚು ಆಗಲಿ ಇದನ್ನು ಮಾಡುವುದು ಮುಖ್ಯವಾದ ಕೆಲಸ. ಪ್ರತಿಯೊಂದು ಹಳ್ಳಿಗೆ ಒಂದು ಕುಡಿ ಯುವ ನೀರಿನ ಬಾವಿ ಕೊಡಬೇಕು ಎಂದು ಸೂಚಿಸಿ ಮಾನ್ಯ ಹಣಕಾಸಿನ ಸಚಿವರು ಮಂಡಿಸಿದ ಆಯವ್ಯಯ ಪಟ್ಟಿಯನ್ನು ಸಂತೋಷದಿಂದ ಅನುಮೋದಿಸಿ, ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ದುಗ್ಗಪ್ಪ (ಹೊಳಲ್ಕೆರೆ).—ಮಾನ್ಯ ಸಭಾಪತಿಗಳೇ, ಸಭೆಯ ಮುಂದೆ ಮಂಡಿಸಿರುವ ಆಯವ್ಯಯ ಪಟ್ಟಿಯನ್ನು ಸಂತೋಷದಿಂದ ಅನುಮೋದಿಸಿ ಎರಡು ಮಾತು ಹೇಳಲು ಬಯಸುತ್ತೇನೆ. ಸ್ವಾಮಿ, ಈ ವರ್ಷದ ಆಯವ್ಯಯ ಪಟ್ಟಿಯ ಮೇಲೆ ಮಾತನಾಡುತ್ತಾ ನಮ್ಮ ವಿರೋಧ ಪಕ್ಷದ ಮುಖಂಡರು ಬರೀ ಟೀಕೆ ಮಾಡಿದ್ದಾರೆ. ಕಂದಾಯದ ನೀತಿಯ ಬಗ್ಗೆ ಕರಭಾರದ ನೀತಿಯ ಬಗ್ಗೆ ಯಾವುದೇ ಒಂದು ಸೂಚನೆ ಅವರು ಕೊಡಲಿಲ್ಲ. ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಅವರು ಸರ್ಕಾರಕ್ಕೆ ಏನಾದರೂ ಉಪಯುಕ್ತ ಕೆಲವು ಸೂಚನೆಗಳನ್ನು ಕೊಡಬಯಸುತ್ತಾರೆಯೋ ಎಂದು ಕಾದು ನೋಡಿದೆ ಆದರೆ ಅವರಿಂದ ಅಂಥ ಸೂಚನೆ ಯಾವುದೂ ಬರಲಿಲ್ಲ. ಈ ಮಾನ್ಯ ಸಭೆಯಲ್ಲಿ ಒಂದು ಮಾತು ಹೇಳುತ್ತೇನೆ. ಯುವಕರಾದ ನಮ್ಮ ಹಣಕಾಸಿನ ಸಚಿವರು ಒಂದು ರೀತಿಯಲ್ಲಿ ದಿಟ್ಟರು, ಧೀರರು ಎಂದು ಹೇಳಬಹುದು. ನಮ್ಮ ಹಣಕಾಸಿನ ಸಚಿವರು ಈ ಮಹಾ ಸಭೆಯಲ್ಲಿ ಕಂದಾಯ ಸರ್‌ಚಾರ್ಜ್ ಮಸೂದೆ ಚರ್ಚೆ ಮಾಡುವ ಕಾಲದಲ್ಲಿ ವಿರೋಧ ಪಕ್ಷದವರಿಗೆ ಒಂದು ಸವಾಲು ಹಾಕಿದ್ದಾರೆ. ಬಹು ಕಾಲದಿಂದ ಬಂದು ಈ ದೇಶದಲ್ಲಿರತಕ್ಕಂಥ ಕಂದಾಯ ಪದ್ಧತಿ ತೆಗೆದು ಹಾಕಿ ಸರ್ಕಾರದ ಬೊಕ್ಕಸಕ್ಕೆ ಬೇರೆ ರೀತಿಯಿಂದ ಯಾವುದೇ ರೂಪದಲ್ಲಿ ಹೊಸ ರೀತಿಯಿಂದ ಹಣ ಬರುವ ಹಾಗೆ ಪ್ರಯತ್ನ ಮಾಡಿದರೆ ಅದನ್ನು ಚರ್ಚಿಸುವುದಕ್ಕೆ ಒಂದು ಮೀಟಿಂಗ್ ಮಾಡುತ್ತೇ ನೆಂದು ವಿರೋಧ ಪಕ್ಷದವರಿಗೆ ತಿಳಿಸಿದ್ದಾರೆ. ಆ ರೀತಿ ಮಾಡುವುದಾದರೆ ಭೂಕಂದಾಯ ವಸೂಲಿ ಯನ್ನು ಕೈಬಿಡಲು ತಯಾರಿದ್ದೇನೆಂದು ಅವರು ಸವಾಲು ಹಾಕಿದ್ದಾರೆ. ಈ ಸವಾಲನ್ನು ನಮ್ಮ ಸ್ನೇಹಿತರಾದ ವಿರೋಧ ಪಕ್ಷದ ಮುಖಂಡರಾದ ಶ್ರೀ ಶಿವಪ್ಪನವರು ಅದನ್ನು ಬಹಳ ಕಳಕಳಿಯಿಂದ ಯೋಚನೆ ಮಾಡಿ ಅವರಿಗೆ ಸೂಕ್ತ ಸಲಹೆ ಕೊಡಬಹುದು ಎಂದು ನಾನು ತಿಳಿದುಕೊಂಡಿದ್ದೆ ಎಂದು ಅವರಿಗೆ ಹೇಳಬಯಸುತ್ತೇನೆ. ನಮ್ಮ ಅರ್ಥ ಸಚಿವರು ಫೈನಾನ್ಸ್ ಡಿಪಾರ್ಟ್‌ಮೆಂಟ್ ವಹಿಸಿ ಕೊಂಡಿರುವ ಪರಿಸ್ಥಿತಿಯು ಅಭಾವ ಪರಿಸ್ಥಿತಿಯ ಮೂಲಕ ಬಹಳ ಕಷ್ಟದ್ದಾಗಿದೆ. ಇಂಥ ಕಷ್ಟದ ಪರಿಸ್ಥಿತಿಯಲ್ಲಿ ಕೂಡ ಅವರು ತಮ್ಮ ಭಾಷಣವನ್ನು ಬಹಳ ಕಷ್ಟಪಟ್ಟು ಶ್ರದ್ಧೆ ವಹಿಸಿ ಎಲ್ಲ ಅಧಿಕಾರಿ ಗಳ ಸಹಕಾರದಿಂದ ತಯಾರ್ಮಾಡಿ ಈ ಭಾಷಣದಲ್ಲಿ ನಮಗೆ ಒಂದು ಸುಂದರವಾದ ಚಿತ್ರವನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದಕ್ಕಾಗಿ ನಿಜವಾಗಿಯೂ ಇವರನ್ನು ಅಭಿನಂದಿಸಬೇಕಾಗಿದೆ.

[MR. SPEAKER in the Chair.]

(*Sri Muckannappa rose*)

MR. SPEAKER.—How many times should I tell the Hon'ble members not to disturb. All those criticisms are personal. Such things should not be levelled against any members here.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಲ್ಲೊಂದು ಇಲ್ಲೊಂದು ಇಂಥ ಮಾತು ಇರಬೇಕು. ಇಲ್ಲದೇ ಹೋದರೆ ಸಭೆಯಲ್ಲಿ ಚರ್ಚೆ ಸಪ್ಪೆಯಾಗುತ್ತದೆ.

ಅಧ್ಯಕ್ಷರು.—ಹಾಗಾದರೆ ನ್ಯಾಯವಾಗಿ ಕೆಲಸ ಮಾಡಿದ ಹಾಗೆ ಆಗುವುದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಈಗ ನಾನು ಅಂಕಿಅಂಶಗಳನ್ನು ಪುನಃ ಓದುವ ಶ್ರಮ ತೆಗೆದುಕೊಳ್ಳದೆ ಇಷ್ಟು ಮಾತ್ರ ಹೇಳಬಲ್ಲೆ. ಈಗಾಗಲೇ ಹಣಕಾಸಿ ಸಚಿವರು ತಮ್ಮ ಭಾಷಣದಲ್ಲಿ ಹೇಳಿರುವ ಹಾಗೆ ಸರ್ಕಾರವು ತನ್ನ ಬೊಕ್ಕಸದಲ್ಲಿಯ ಹಣವನ್ನು ಅನೇಕ ಕೈಗಾರಿಕೆಗಳಲ್ಲಿ ದೊಡ್ಡ ದೊಡ್ಡ ಜಲಾಶಯಗಳಲ್ಲಿ ತೊಡಗಿಸಿದ್ದಾರೆ. ಈಗಾಗಲೇ ನಮ್ಮ ಜಲಾಶಯಗಳು ಪ್ರತಿಫಲವನ್ನು ಕೊಡುತ್ತಿವೆ. ಭದ್ರಾಜಲಾಶಯ, ಶರಾವತಿ ಪ್ರಾಜೆಕ್ಟ್‌ಗಳಿಂದ ಪ್ರತಿಫಲ ಬರುತ್ತಿದೆ. ಅರ್ಥ ಸಚಿವರ ಅಭಿಪ್ರಾಯದಂತೆ ದೇಶದ ಆರ್ಥಿಕ ಪರಿಸ್ಥಿತಿ ಭದ್ರವಾಗಿದೆ. ಭದ್ರ ಬುನಾದಿಯ ಮೇಲೆ ಮುಂದುವರಿಯುತ್ತದೆ ಎನ್ನುವ ಆಸೆ ಇದೆ. ಇದರಲ್ಲಿ ಉತ್ಪ್ರೇಕ್ಷೆ ಇಲ್ಲ. ಆರ್ಥಿಕ ಸ್ಥಿತಿ ಶಿಥಿಲವಾಗಿದೆ ಎನ್ನುವುದಕ್ಕೆ ವಿರೋಧಪಕ್ಷದವರಲ್ಲಿ ಅಂಕಿ ಅಂಶಗಳೇನಾದರೂ ಇದ್ದರೆ ಅದನ್ನು ಹೇಳಿಲ್ಲ. ಅಂಕಿ ಅಂಶಗಳ ಆಧಾರದಿಂದ ಕೊಟ್ಟಿರುವ ಸಲಹೆಗಳನ್ನು ನಾವು ಕೇಳುತ್ತೇವೆ. ಮನ್ನಣೆ ಮಾಡುತ್ತೇವೆ.

ಕೆಲವು ಬಹು ಮುಖ್ಯವಾದ ನೀತಿಗಳನ್ನು ನಮ್ಮ ಸರ್ಕಾರ ತಾಳಿದೆ. ವಿರೋಧ ಪಕ್ಷದ ಸದಸ್ಯರು ಸಹ ಅವುಗಳನ್ನು ಸ್ವಾಗತ ಮಾಡಿಯೇ ಮಾಡುತ್ತಾರೆ. ಉದಾಹರಣೆಗೆ ಉಚಿತ ಸೆಕಂಡರಿ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಕನ್ನಡ ಚಲನ ಚಿತ್ರದ ಉದ್ಯಮಕ್ಕೆ ನಾವು ಬೆಂಬಲ ಕೊಡಬೇಕು ಎನ್ನುವ ಉದ್ದೇಶದಿಂದ ಒಂದು ಹೊಸ ನೀತಿಯನ್ನು ನಿರೂಪಿಸಿದ್ದಾರೆ. ಮನರಂಜನೆ ತೆರಿಗೆಯನ್ನು ಸ್ವಲ್ಪ ಹೆಚ್ಚು ಮಾಡಿ ಅದರಿಂದ ಬರುವ ಹಣದಿಂದ ಚಲನಚಿತ್ರ ಉದ್ಯಮಕ್ಕೆ ಸಹಾಯ ಮಾಡಿ ಪ್ರೋತ್ಸಾಹ ಮಾಡಲು ಒಂದು ನೀತಿಯನ್ನು ನಿರೂಪಿಸಿದ್ದಾರೆ. ಇದರ ಬಗ್ಗೆ ಯಾರೂ ಟೀಕೆ ಮಾಡಲಾರರು. ಇದರ ಜೊತೆಗೆ ಒಂದು ವಿಚಾರವನ್ನು ಹೇಳಬೇಕಾಗಿದೆ. ಲೋಕೋಪಯೋಗಿ ಇಲಾಖೆಯಿಂದ ಅನೇಕ ಜಲಾಶಯಗಳನ್ನು ನಿರ್ಮಾಣ ಮಾಡಿಸುತ್ತಾರೆ. ಅವು ನಿರ್ಮಾಣವಾದ ಮೇಲೆ ಅವುಗಳ ಉಪಯೋಗ ಹೇಗೆ, ನಿಜವಾಗಿಯೂ ಅವುಗಳಿಂದ ಪ್ರತಿಫಲ ಸಿಕ್ಕುತ್ತಿದೆಯೇ ಇಲ್ಲವೇ ಎನ್ನುವ ಬಗ್ಗೆ ಅಧಿಕಾರಿಗಳು ಅಷ್ಟು ಆಸಕ್ತಿಯಿಂದ ಇರುವುದಿಲ್ಲ. ನಾನಾದರೂ ಈಗ ಸರ್ಕಾರವನ್ನು ಕೇಳುತ್ತೇನೆ, ಜಲಾಶಯಗಳು ನಿರ್ಮಾಣವಾದ ಮೇಲೆ, ನಿರ್ಮಾಣ ಮಾಡುವುದಕ್ಕೆ ಸರ್ಕಾರ ಎಷ್ಟು ಕಾತುರತೆಯಿಂದ ಕೂಡಿರುತ್ತದೆಯೋ, ದುಡ್ಡನ್ನು ಎಷ್ಟು ಆಸಕ್ತಿಯಿಂದ ಖರ್ಚು ಮಾಡುತ್ತದೆಯೋ ಅದಕ್ಕಿಂತ ಮಿಗಿಲಾಗಿ ಅಧಿಕಾರಿಗಳಿಗೆಸೂಚನೆಯನ್ನು ಕೊಟ್ಟು ಅವುಗಳಿಂದ ಪ್ರಯೋಜನವನ್ನು ಪಡೆಯುವುದಕ್ಕೆ ಒತ್ತಾಯ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ, ಗಾಯತ್ರಿ ಜಲಾಯವನ್ನು 35 ಲಕ್ಷ ರೂಪಾಯಿ ಖರ್ಚು ಮಾಡಿ ನಿರ್ಮಾಣ ಮಾಡಿಸಿದರು. ಆದರೆ ಯಾರ ಉಪಯೋಗಕ್ಕಾಗಿ ಅದನ್ನು ನಿರ್ಮಾಣ ಮಾಡಿದ್ದಾರೆಯೋ ಆ ರೈತರು ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಅವರು ತೊಂದರೆಯಲ್ಲಿದ್ದಾರೆ. ಅವರಿಗೆ ತಕ್ಕ ಸವಲತ್ತುಗಳನ್ನು ಕೊಟ್ಟರೆ ಯಾವ ಉದ್ದೇಶದಿಂದ ಅಪಾರವಾದ ದ್ರವ್ಯವನ್ನು ಖರ್ಚುಮಾಡಿ ಈ ಜಲಾಶಯವನ್ನು ನಿರ್ಮಿಸಿದ್ದಾರೆಯೋ ಅದರ ಪ್ರತಿಫಲ ದೊರೆಯುವುದಲ್ಲದೆ ಜನರ ಕಲ್ಯಾಣವು ಆಗುತ್ತದೆ.

ಇದರ ಜೊತೆಗೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ ಅದು ಅನಿವಾರ್ಯವಾಗಿದೆ. ರಾಷ್ಟ್ರ ಪುನರ್ವಿಂಗಡಣೆಯಾದ ಮೇಲೆ ಸ್ಟೇಟ್ಸ್ ರಿ-ಆರ್ಗನೈಜೇಷನ್ ಆಕ್ಟ್ ಪ್ರಕಾರ ಆಯಾ ಪ್ರಾಂತದ ಅಧಿಕಾರಿಗಳ ಹಿತಾಸಕ್ತಿಯನ್ನು ಕಾಪಾಡತಕ್ಕದ್ದು ನ್ಯಾಯ. ಅವರ ಹಕ್ಕು ಅದು. ಆದರೆ ಏನೋ ಒಂದು ಕಾರಣದಿಂದ ಇದನ್ನು ನಿಧಾನ ಮಾಡಿದ್ದೇವೆ. ಹೀಗೆ ನಿಧಾನ ಮಾಡುವುದು ಒಳ್ಳೆಯದಲ್ಲ. ಅತೃಪ್ತ ಅಧಿಕಾರಿಗಳು ಕೋರ್ಟು ಕಛೇರಿಗಳಿಗೆ ಹೋಗಿದ್ದಾರೆ. ಅವರಿಗೆ ಬಹಳ ಬೇಸರವಾಗಿದೆ. ನಮ್ಮ ಹೈಕೋರ್ಟ್‌ನವರು ಒಂದು ತೀರ್ಮಾನವನ್ನು ತೆಗೆದುಕೊಂಡರೂ ಸಹ ಸರ್ಕಾರ ಆ ಬಗ್ಗೆ ಯಾವ ನಿರ್ಧಾರವನ್ನೂ ತೆಗೆದುಕೊಳ್ಳಲಿಲ್ಲ ಎನ್ನುವ ವಿಚಾರ ನಮಗೂ ಬೇಸರವನ್ನುಂಟುಮಾಡುವಾಗ ಅಧಿಕಾರಿಗಳ ವಿಷಯ ಹೇಳುವುದಕ್ಕೇ ಸಾಧ್ಯವಿಲ್ಲ. ಅತೃಪ್ತ ಅಧಿಕಾರಿಗಳಿಂದ ಹೇಗೆ ಸಮರ್ಪಕವಾಗಿ ಕೆಲಸವನ್ನು ತೆಗೆದುಕೊಳ್ಳುವುದು ಎನ್ನುವುದು ಅರ್ಥವಾಗುವುದಿಲ್ಲ. ಈಗಲಾದರೂ ಕಾಲ ವಿಳಂಬವಾದರೂ ಚಿಂತೆ ಇಲ್ಲ, ಸರ್ಕಾರ ಇವರ ಬಗ್ಗೆ ಸೂಕ್ತ ತೀರ್ಮಾನಗಳನ್ನು ತೆಗೆದುಕೊಂಡು ಅಧಿಕಾರವರ್ಗದಲ್ಲಿ ಈಗ ಉಂಟಾಗಿರುವ ಅತೃಪ್ತ ಭಾವನೆಯನ್ನು ನಿವಾರಣೆ ಮಾಡಿ ಅದಷ್ಟು ಬೇಗ ತ್ವರಿತವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆಯನ್ನು ಕೊಡ ಬಯಸುತ್ತೇನೆ.

ನಮ್ಮಲ್ಲಿ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ಹಾಗೆ ಒಂದು ಇಲಾಖೆ ಇದೆ. ನಮ್ಮ ಅಕ್ಕ ಪಕ್ಕದ ರಾಜ್ಯಗಳಲ್ಲಿ ಹರಿಜನ ಅಪ್‌ಲಿಫ್ಟ್‌ಮೆಂಟ್ ಡಿಪಾರ್ಟ್‌ಮೆಂಟ್ ಎಂದು ಅದನ್ನು ಕರೆಯುತ್ತಾರೆ ನಮ್ಮಲ್ಲಿ ಏನು ಕಾರಣದಿಂದಲೋ ಏನೋ ಅದನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಎಂದು ಬದಲಾವಣೆ ಮಾಡಿದ್ದಾರೆ. ಈ ಜನಗಳ ಮನೋಭಾವನೆ ಹೇಗಿದೆ ಎಂದರೆ, ಏನಾದರೂ ಸವಲತ್ತುಗಳು ಸಿಕ್ಕುವುದಿದ್ದರೆ, ಅವನ್ನು ಪಡೆಯುವುದಕ್ಕೆ ಅವಕಾಶವಿದ್ದರೆ, ಆ ಪರಿಸ್ಥಿತಿಯನ್ನು ಅನುಸರಿಸಿ ಹಿಂದುಳಿದ ವರ್ಗಕ್ಕೆ ಸೇರಿದ್ದಾರೆಯೇ ಇಲ್ಲವೋ, ಆದರೂ ನಾವೆಲ್ಲರೂ ಹಿಂದುಳಿದ ವರ್ಗಕ್ಕೆ

ಸೇರಿದ್ದೇವೆ ಎನ್ನುವಂಥ ಭಾವನೆ ಬರುತ್ತದೆ. ಹೀಗಾದರೆ ನಮ್ಮ ರಾಜ್ಯದಲ್ಲಿ ಶೇಕಡ 50ಕ್ಕಿಂತ ಹೆಚ್ಚು ಜನ ಸೋಷಿಯಲ ಬ್ಯಾಕ್‌ವರ್ಡ್ ಕ್ಲಾಸ್ ಎಂದರೆ ಇಡೀ ದೇಶವೇ ಬ್ಯಾಕ್‌ವರ್ಡ್‌ಕ್ಲಾಸ್ ಆದೀತು.

ಶ್ರೀ ಎಸ್. ನಿಜಲಿಂಗಪ್ಪ.—ಅದು ನಿಜ. ನಮ್ಮಲ್ಲಿ ಶೇಕಡ 70ಕ್ಕಿಂತ ಹೆಚ್ಚು ಜನ ಹಿಂದುಳಿದವರಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಮಂತ್ರಿಗಳನ್ನು ಒಪ್ಪಿಕೊಂಡರೂ ಸಹಿತ, ಆ ಭಾವನೆಯನ್ನು ನಾವು ತೊಡೆದುಹಾಕಬೇಕು. ಇಂಥ ಒಂದು ಇಲಾಖೆ ಮೊಟ್ಟಮೊದಲು ಏನಿತ್ತು, ಯಾವ ಉದ್ದೇಶದಿಂದ ಸಮಾಜದಲ್ಲಿ ಅತ್ಯಂತ ಕನಿಷ್ಠ ಮತ್ತು ನತದೃಷ್ಟ ವರ್ಗಗಳಿಗೆ ಸಹಾಯವನ್ನು ಕೊಡುವ ಸಲುವಾಗಿ ಏನು ಇಲಾಖೆ ಇತ್ತು, ಆ ಇಲಾಖೆ ಅವರಿಗೋಸ್ಕರವೇ ಮೀಸಲಾಗಿದ್ದರೆ ಹೆಚ್ಚು ಅನುಕೂಲವಾದೀತು ಎನ್ನುವ ಭಾವನೆ ಇರುವುದರಿಂದ ನಾನಾದರೂ ಸಲಹೆ ಮಾಡುತ್ತೇನೆ, ಮೊದಲು ಇದ್ದ ಹಾಗೆ ಈ ಇಲಾಖೆಯನ್ನು ಹರಿಜನ್ ಅಪ್‌ಲಿಫ್ಟ್‌ಮೆಂಟ್ ಡಿಪಾರ್ಟ್‌ಮೆಂಟ್ ಎಂದು ಕರೆಯುವುದು ಸೂಕ್ತವಾದೀತು ಎಂದು. ಯಾರು ಯಾರು ಪರಿಶಿಷ್ಟ ವರ್ಗಕ್ಕೆ ಸೇರಿದ್ದಾರೆಂಬ ಬಗ್ಗೆ ಒಂದು ಪಟ್ಟಿ ಇದೆ. ಆ ಪಟ್ಟಿಯನ್ನು ಈಗ ಪುನರ್ವಿಮರ್ಶೆ ಮಾಡಬೇಕಾಗಿದೆ. ಹಾಗೆ ಮಾಡತಕ್ಕ ಕಾಲದಲ್ಲಿ ಯಾವ ಆಧಾರದ ಮೇಲೆ ಯಾವ ತತ್ವದ ಮೇಲೆ, ಯಾವ ನೀತಿಯ ಮೇಲೆ, ಒಂದು ಕೋಮು ಪರಿಶಿಷ್ಟ ವರ್ಗಕ್ಕೆ ಸೇರಬೇಕಾಗಿದೆ ಎನ್ನುವುದು ಮೊದಲು ನಿರ್ಧಾರವಾಗಬೇಕಾಗಿದೆ. ಪರಿಶಿಷ್ಟ ವರ್ಗಗಳ ಪಟ್ಟಿಯನ್ನು ಮಾಡಿದ ಉದ್ದೇಶವಾದರೂ, ಯಾರು ಸಮಾಜದಲ್ಲಿ ಅತ್ಯಂತ ನಿಕೃಷ್ಟರಿದ್ದಾರೆ, ಅತ್ಯಂತ ಕೆಳದರ್ಜೆಯಲ್ಲಿದ್ದಾರೆ ಅವರ ಒಂದು ಪಟ್ಟಿಯನ್ನು ಮಾಡಬೇಕಾಗಿದೆ. ಆ ರೀತಿ ಮಾಡುವುದಾದರೆ, ಬಹು ಜನ ಹಿಂದುಳಿದ ಪ್ರತಿನಿಧಿಗಳ ಅಭಿಪ್ರಾಯಕ್ಕೆ ಮನ್ನಣೆಯನ್ನು ನಾವು ಕೊಡುವುದಾದರೆ, ಯಾರು ಸಮಾಜದಲ್ಲಿ ಬಹುತೇಕ ಅಸ್ಪೃಶ್ಯರು ಎಂದು ಪರಿಗಣಿಸಲ್ಪಟ್ಟಿದ್ದರೋ, ಅಂಥ ಕೋಮುಗಳನ್ನು ಮಾತ್ರ ಪರಿಶಿಷ್ಟ ವರ್ಗಕ್ಕೆ ಸೇರಿಸಿ ಆ ಪಟ್ಟಿಯನ್ನು ಪುನರ್ರಚಿಸತಕ್ಕದ್ದು ಸೂಕ್ತವಾದುದು ಮತ್ತು ಅತಿ ಶೀಘ್ರವಾಗಿ ಆ ಪಟ್ಟಿಯನ್ನು ಮಾಡಬೇಕಾಗಿದೆ. ಹಾಗೆ ಮಾಡಬೇಕೆಂದು ನಾನು ಮುಖ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

Sri S. NIJALINGAPPA.—I want to know from the Hon'ble Member whether Scheduled Castes only should be included or Scheduled Tribes also be included ?

Sri C. J. MUCKANNAPPA.—Which are the sections of the people that have to be deleted ?

Sri S. NIJALINGAPPA.—Let us know from him.

4-00 P.M.

ಶ್ರೀ ಜಿ. ದುಗ್ಗಪ್ಪ.—ಪರಿಶಿಷ್ಟ ವರ್ಗಗಳೊಡನೆ ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಷೆಡ್ಯೂಲ್ಡ್ ಟ್ರೈಬ್ಸ್ ವರ್ಗಗಳ ಪಟ್ಟಿಯನ್ನೂ ಸಹ ರಿವೈಸ್ ಮಾಡುವ ಪರಿಸ್ಥಿತಿ ಬಂದಿದೆ. ಎರಡನ್ನೂ ಸಹ ಸೇರಿಸುವುದು ಅತಿ ಅನಿವಾರ್ಯವಾಗಿದೆ. ಅದನ್ನು ಅತಿ ಜರೂರಾಗಿ ಮಾಡುವ ಪರಿಸ್ಥಿತಿ ಬಂದಿದೆ. ಈ ವಿಷಯದಲ್ಲಿ ಮುಖ್ಯ ಮಂತ್ರಿಗಳ ಅನುಭವ ಬಹಳ ಹೆಚ್ಚಾಗಿದೆಯೆಂದು ಹೇಳಬಹುದು. ಮೈಸೂರು ಸಂಸ್ಥಾನದ ಜನರ ಹಾಗೂ ಪರದೇಶಗಳ ಜನರ ಅಳಿವು ಉಳಿವನ್ನು ಹೋಲಿಸಿದರೆ ನಮ್ಮ ಪ್ರಾಂತದ ಜನರ ಅನುಭವವನ್ನು ಈ ಸರ್ಕಾರದವರು ಬಹಳ ಚೆನ್ನಾಗಿ ಮನಗಂಡಿದ್ದಾರೆ. ಜನತೆಯ ಮನೋಭಿಪ್ರಾಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಚೆನ್ನಾಗಿ ಅರಿತಿದ್ದಾರೆ. ಸರ್ಕಾರದವರು ನಮ್ಮ ಹಿಂದುಳಿದ ಜನರ ಏಳಿಗೆಯ ಬಗ್ಗೆ ಒಂದು ಸೂಕ್ತವಾದ ನಿಲುವನ್ನು ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ನಮ್ಮ ಪ್ರಾಂತದ ಪರವಾಗಿ ಏನು ನಾನು ಹೇಳಿದೆನೋ, ಯಾರು ಸಮಾಜದಲ್ಲಿ ಅಸ್ಪೃಶ್ಯತಾವರ್ಗಕ್ಕೆ ಸೇರಿದವರು ಎಂಬುದಾಗಿ ಕರೆಯಲ್ಪಟ್ಟಿದ್ದಾರೋ ಅಂತಹವರನ್ನೆಲ್ಲಾ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಕೂಡಲೇ ಸೇರಿಸಬೇಕೆಂದು ನಾನು ಈ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಹಿಂದುಳಿದ ವರ್ಗಗಳವರೆಲ್ಲರ ಸಹಾನುಭೂತಿ ನಮ್ಮ ಅರ್ಥ ಸಚಿವರ ಮೇಲೆ ಪೂರ್ಣವಾಗಿದೆ. ಅವರೆಲ್ಲರೂ ಮುಖ್ಯ ಮಂತ್ರಿಗಳಿಗೂ ಹಾಗೂ ಹಣಕಾಸಿನ ಸಚಿವರಿಗೂ ಚಿರಋಣಿಗಳಾಗಿದ್ದಾರೆಂದು ನಾನು ಹೇಳಿದರೆ ಅದೇನೂ ಅತಿಶಯೋಕ್ತಿ ಆಗಲಾರದೆಂದು ನಾನು ತಿಳಿದಿದ್ದೇನೆ. ಏಕೆಂದರೆ, ನಾವು ಸ್ವತಂತ್ರಗಳಿಸಿದ ನಂತರ ನಮ್ಮ ಕಾಂಗ್ರೆಸ್ ಸರ್ಕಾರ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಒಂದು ಗೃಹ ನಿರ್ಮಾಣದ ಯೋಜನೆಯನ್ನು ಹಾಕಿದ್ದುದನ್ನು ಕಾರಣಾಂತರದಿಂದ ಕೈಬಿಟ್ಟಿದ್ದರು. ಆದರೆ

(ಶ್ರೀ ಜಿ. ದುಗ್ಗಪ್ಪ)

ಈ ವರ್ಷ ನಮ್ಮ ಅರ್ಥ ಸಚಿವರ ವೈಯಕ್ತಿಕ ಆಸಕ್ತಿಯಿಂದ ಸುಮಾರು 3 ಕೋಟಿ ರೂಪಾಯಿಗಳಿಗಿಂತಲೂ ಮಿಗಿಲಾದ ಹಣವನ್ನು ಈ ಹಿಂದುಳಿದ ವರ್ಗಗಳ ಗೃಹ ನಿರ್ಮಾಣ ಸೌಕರ್ಯಕ್ಕಾಗಿ ಮೀಸಲಾಗಿಟ್ಟಿದ್ದಾರೆ. ಬರೀ ಮೀಸಲಾಗಿಡುವುದೇ ಅಲ್ಲ, ಹಿಂದೆ ಈ ಹಣ ಎಲ್ಲರಿಗೂ ಸೇರಿ ಒಂದು ವ್ಯವಸ್ಥಿತ ರೀತಿಯಲ್ಲಿ ಖರ್ಚಾಗುತ್ತಿರಲಿಲ್ಲ. ಈಗ ಆ ಹಣ ಒಂದು ಸುವ್ಯವಸ್ಥಿತ ರೀತಿಯಲ್ಲಿ ಖರ್ಚಾಗುವುದಕ್ಕೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿದ್ದಾರೆ. ಆ ವರ್ಗಗಳು ಹಾಗೂ ಪರಸ್ಪರ ಸಹಕಾರಿ ಸಂಘಗಳು ಅವುಗಳಿಗೆ ಸಂಬಂಧಪಟ್ಟ ಹಾಗೆ ಫೆಡರೇಷನ್ನುಗಳನ್ನು ಮಾಡಿ ಅವುಗಳ ಮೂಲಕ ಈ ಹಣವನ್ನು ಆ ವರ್ಗಗಳಿಗೆ ಕೊಡಬೇಕೆಂದು ಮಾಡಿದ್ದಾರೆ. ಇದು ನಿಜವಾಗಿ ಎಲ್ಲ ವರ್ಗಗಳವರೂ ಕೂಡ ಮೆಚ್ಚತಕ್ಕ ವಿಚಾರ. ಈ ಆಯವ್ಯಯ ಪಟ್ಟಿಯನ್ನು ಹಣಕಾಸಿನ ಸಚಿವರು ಮಂಡಿಸಿದ ತಕ್ಷಣವೇ ಅವರಿಗೆ ನನ್ನ ಅಭಿನಂದನೆಗಳನ್ನು ಹೇಳಿದೆ. ಅವರು ಬಹಳ ದೊಡ್ಡ ಮನಸ್ಸು ಮಾಡಿ ನತದೃಷ್ಟ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಇಂತಹ ಯೋಜನೆಯನ್ನು ಹಾಕಿದ್ದರಿಂದ ಅವರಿಗೆ ಮತ್ತೊಮ್ಮೆ ನನ್ನ ಮನಃಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನೊಂದು ವಿಷಯ. ಈ ದೇಶದಲ್ಲಿ ಗೃಹ ಕೈಗಾರಿಕೆಗಳು ಬಹಳ ಇವೆ. ಅವುಗಳ ಪೈಕಿ ಅತ್ಯಂತ ಹೆಚ್ಚಿಗೆ ಹಣವನ್ನು ಸಂಪಾದಿಸತಕ್ಕದ್ದು ಚರ್ಮದ ಗೃಹ ಕೈಗಾರಿಕೆ. ಈ ದಿವಸ ರಷ್ಯಾ ದೇಶದವರು ನಮ್ಮ ದೇಶಕ್ಕೆ ಲಕ್ಷಾಂತರ ಬೂಟುಗಳು ಬೇಕಾಗಿವೆಯೆಂದು ಕೇಳಿದ್ದಾರೆ. ಅನೇಕ ಚರ್ಮದ ಉಪಕರಣಗಳು ನಮ್ಮ ಡಿಫೆನ್ಸ್ ಇಲಾಖೆಗೆ ಬೇಕಾಗಿವೆ. ಇವನ್ನೆಲ್ಲಾ ತಯಾರಿಸತಕ್ಕ ಮೂಲವಸ್ತು ಚರ್ಮ. ಈ ಗೃಹ ಕೈಗಾರಿಕೆಯನ್ನು ವ್ಯವಸ್ಥಿತವಾದ ರೀತಿಯಲ್ಲಿ ರೂಪುಗೊಳಿಸಲು ಹಾಗೂ ಆರ್ಗನೈಜ್ ಮಾಡತಕ್ಕ ಒಂದು ವ್ಯವಸ್ಥಿತವಾದ ಕ್ರಮ ನಮ್ಮ ಪ್ರಾಂತದಲ್ಲಿಲ್ಲ. ಯಾರು ಈ ಗೃಹ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಾರೋ ಅಂತಹವರನ್ನು ಸಮಾಜದಲ್ಲಿ ನಿಕೃಷ್ಟವಾಗಿ ಕಾಣುತ್ತಾರೆ. ಅಂತಹವರಿಗೆ ಈ ಗೃಹ ಕೈಗಾರಿಕೆಯ ಪ್ರತಿಫಲ ದೊರೆಯುತ್ತಾ ಇಲ್ಲ. ಯಾರೋ ಹಣವಂತ ವ್ಯಾಪಾರಿಗೆ ಈ ಗೃಹ ಕೈಗಾರಿಕೆಯಿಂದ ಕೋಟ್ಯಾಂತರ ರೂಪಾಯಿಗಳ ಪ್ರತಿಫಲ ದೊರೆಯುತ್ತಾ ಇದೆ. ಹೀಗಾಗಬಾರದು. ಈ ಕೈಗಾರಿಕೆಯಲ್ಲಿ ತೊಡಗಿ ಕಷ್ಟಪಟ್ಟು ದುಡಿಯುವವರಿಗೆ ಇದರ ಫಲ ದೊರೆಯಬೇಕು. ಈ ಗೃಹ ಕೈಗಾರಿಕೆಯಲ್ಲಿ ಶಕ್ತಿವಂತ ಯುವಕರಿಗೆ ಚೆನ್ನಾಗಿ ಸರಿಯಾದ ತರಪೇತು ಕೊಡಬೇಕು. ಅಂತಹವರ ಮನೆಯಲ್ಲಿ ಚರ್ಮ ಹದ ಮಾಡುವ ಕೈಗಾರಿಕೆಯನ್ನು ಸ್ಥಾಪಿಸಬೇಕು. ಇದರ ಒಂದು ಟೆಕ್ನಿಕಲ್-ನೊ-ಹೌ ತಿಳಿದವರಿಗೆ ಈ ಕೈಗಾರಿಕೆಯನ್ನು ಕೊಡುವುದು ಒಳ್ಳೆಯದು. ಅಕ್ಷರಸ್ಥ ಯುವಕರಿಗೂ ಸಹ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರುಗಳಲ್ಲಿ ಈ ಕೈಗಾರಿಕೆಯ ಬಗ್ಗೆ ತರಪೇತು ಕೊಡಬೇಕೆಂದು ನನ್ನ ಸಲಹೆ. ಮತ್ತೆ ನಾಲ್ಕನೇ ಯೋಜನೆಯಲ್ಲಿ ಹಿಂದುಳಿದ ವರ್ಗಗಳ ಬಗ್ಗೆ ಅನೇಕ ಯೋಜನೆಗಳು ಇವೆ. ನಾನು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುವುದು ಏನೆಂದರೆ, ಈಗಿರತಕ್ಕ ಎಲ್ಲಾ ಯೋಜನೆಗಳನ್ನೂ ನಿಲ್ಲಿಸಿ ಕೇವಲ ಎರಡು ಮುಖ್ಯವಾದ ಯೋಜನೆಗಳನ್ನು ಮಾತ್ರ ಜಾಗ್ರತೆಯಾಗಿ ಮುಂದುವರಿಸಬೇಕೆಂಬುದು. ಆ ಎರಡು ಯೋಜನೆಗಳು ಯಾವುವೆಂದರೆ ಹಿಂದುಳಿದ ವರ್ಗಗಳ ವಿದ್ಯಾಭ್ಯಾಸ ಯೋಜನೆ ಮತ್ತು ಗೃಹ ನಿರ್ಮಾಣ ಯೋಜನೆ. ಇತರ ಯಾವ ಯೋಜನೆಗಳಿಂದಲೂ ಅಷ್ಟಾಗಿ ಇವರ ಆರ್ಥಿಕಾಭಿವೃದ್ಧಿಯು ಉಪಯುಕ್ತವಾಗಿ ಆಗಲಾರದು. ಬೇರೆ ಸಣ್ಣ ಪುಟ್ಟ ಯೋಜನೆಗಳನ್ನು ಕೂಡಲೇ ಕೈ ಬಿಡಬೇಕು. ಈ ಎರಡು ಯೋಜನೆಗಳನ್ನು ಬಹು ಮುಖ್ಯವಾಗಿ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅವಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಸೂಚಿಸಿ ಮತ್ತೊಮ್ಮೆ ಸರ್ಕಾರದವರನ್ನು ಅಭಿನಂದಿಸಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಅಧ್ಯಕ್ಷರೇ, ಹಣಕಾಸಿನ ಮಂತ್ರಿಗಳು ಬರಡಾದ 66-67 ನೇ ವರ್ಷದ ಆಯವ್ಯಯ ಪಟ್ಟಿಯನ್ನು ಈ ಸಾರಿ ಮಂಡಿಸಿದ್ದಾರೆ. ಅವರ ಭಾಷಣದಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲವೆಂದು ನಿವೇದಿಸಿ ಆಯವ್ಯಯದಲ್ಲಿ 2 ಕೋಟಿ 53 ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ತೋರಿಸಿದ್ದು ಒಂದು ಆಶ್ಚರ್ಯಕರವಾದ ಸಂಗತಿ. ಅಷ್ಟೇ ಅಲ್ಲದೆ ಈ ಆಯವ್ಯಯವನ್ನು ತಯಾರು ಮಾಡುವುದರಲ್ಲಿ ಹಣಕಾಸಿನ ಮಂತ್ರಿಗಳು ಅವರ ಒಂದು ಜಾಣತನವನ್ನು ತೋರಿಸಿ ಇದರಲ್ಲಿ ಹೆಚ್ಚುವರಿ ತೋರಿಸಿದ್ದಾರೆಂದು ನಾನು ಹೇಳುತ್ತಿದ್ದೇನೆ. ಅವರ ಭಾಷಣದ ಒಂದು ಕಡೆಯಲ್ಲಿ ಈ ದೇಶದಲ್ಲಿ ಅನಾವೃಷ್ಟಿಯುಂಟಾಗಿ ಆಹಾರದ ಕೊರತೆಯಿಂದ ಇವತ್ತಿನ ದಿವಸ ದೇಶದಲ್ಲಿ ತುಂಬಾ ಹಾಹಾಕಾರ, ಅಭಾವ ಪರಿಸ್ಥಿತಿಯುಂಟಾಗಿದೆ ಎಂದು ಹೇಳಿದ್ದಾರೆ. ಅದು ನಿಜ. ಸರ್ಕಾರದವರು ಒಂದನೇ, ಎರಡನೇ, ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳನ್ನು ಈಗಾಗಲೇ ಮುಗಿಸಿದ್ದರೂ ಕೂಡ, ನಮ್ಮ ರಾಜ್ಯದ ಹೆಚ್ಚಿನ ಹಣವನ್ನು ವ್ಯವಸಾಯ ಖಾತೆಗೇ

ಖರ್ಚು ಮಾಡಿದ್ದಾಗ್ಯೂ ಹೆಚ್ಚಿಗೆ ಆಹಾರ ಧಾನ್ಯಗಳನ್ನು ಬೆಳೆಯದೇ ಇರುವುದನ್ನು ನೋಡಿದರೆ ಬಹಳ ವ್ಯಸನಕರವಾದ ಸಂಗತಿಯಾಗಿದೆ. ಏಕೆಂದರೆ, ವ್ಯವಸಾಯ ಖಾತೆಯವರು ಸರಿಯಾದ ರೀತಿಯಲ್ಲಿ ಬಡ್ಜೆಟ್ಟಿನಲ್ಲಿ ಒದಗಿಸಿದ್ದ ಹಣವನ್ನು ಖರ್ಚುಮಾಡದೆ, ಸರಿಯಾದ ರೀತಿಯಲ್ಲಿ ವ್ಯವಸಾಯ ಸಲಕರಣೆಗಳನ್ನು ರೈತರಿಗೆ ನೀಡದೆ, ರೈತರಿಗೆ ಸಕಾಲದಲ್ಲಿ ಸರ್ವ ರೀತಿಯಲ್ಲಿಯೂ ಸಹಾಯ ಮಾಡದೆ ಇಂತಹ ಒಂದು ಅಪಾರವಾದ ಅಭಾವ ಪರಿಸ್ಥಿತಿಗೆ ಇವತ್ತು ಈಡಾಗುವುದಕ್ಕೆ ಕಾರಣವಾಗಿದೆ. ಒಂದು ದೃಷ್ಟಿಯಲ್ಲಿ ಈ ದೇಶದಲ್ಲಿ ಸುಮಾರು 3-4 ವರ್ಷಗಳಿಂದ ಅನಾವೃಷ್ಟಿ, ಹಾಗೂ ಅತಿವೃಷ್ಟಿಗಳಿಂದಾಗಿ ಸಕಾಲಕ್ಕೆ ಮಳೆ ಬಾರದೆ ಇವತ್ತು ಹೆಚ್ಚಿಗೆ ಆಹಾರಾಭಾವ ಉಂಟಾಗಿರತಕ್ಕ ಪರಿಸ್ಥಿತಿಯಾಗಿದೆ. ಸರ್ಕಾರದವರು ಅನಾವಶ್ಯಕವಾಗಿ ಯದ್ವಾತದ್ವಾ ಹಣವನ್ನು ಖರ್ಚು ಮಾಡುವುದನ್ನು ಬಿಟ್ಟು ವ್ಯವಸಾಯಕ್ಕೆ ವ್ಯವಸ್ಥಿತ ರೀತಿಯಲ್ಲಿ ಹೆಚ್ಚಿಗೆ ಹಣವನ್ನು ಖರ್ಚು ಮಾಡಿದ್ದರೆ ಇನ್ನೂ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತಿತ್ತು. ಇನ್ನು ನೀರಾವರಿ ಬಗ್ಗೆ ಸರ್ಕಾರದವರು ಮೇಲಿಂದ ಮೇಲೆ ಪ್ರಚಾರ ಕಾರ್ಯ ಮಾಡುತ್ತಿದ್ದಾರೆ, ಅಷ್ಟೇ ಅಲ್ಲದೆ ಬಾವಿಗಳಿಗಾಗಿ, ಕೆರೆಕಟ್ಟೆಗಳಿಗಾಗಿ ಬೃಹತ್ ಯೋಜನೆಗಳನ್ನು ಇಟ್ಟುಕೊಂಡು ಹೆಚ್ಚಿಗೆ ನೀರಾವರಿ ಸೌಕರ್ಯವನ್ನು ರೈತರಿಗೆ ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಸಾಫಲ್ಯವಾಗಿದೆಯೆಂಬುದನ್ನು ಹೇಳುತ್ತೇನೆ. ಉದಾಹರಣೆಗೆ, ಈಗಾಗಲೇ ಕಟ್ಟಿರತಕ್ಕ ಭದ್ರಾ ಮತ್ತು ತುಂಗಾಭದ್ರಾ ಅಣೆಕಟ್ಟು ಯೋಜನೆಗಳನ್ನು ತೆಗೆದುಕೊಳ್ಳೋಣ. ಆ ಯೋಜನೆಗಳಿಂದ ಸಾಕಷ್ಟು ನೀರನ್ನು ಈಗ ಒದಗಿಸುತ್ತಾ ಇಲ್ಲ. ಆದ್ದರಿಂದ ಆ ಎರಡು ಯೋಜನೆಗಳಿಂದ ಯಥೇಚ್ಛವಾಗಿ ರೈತರಿಗೆ ನೀರನ್ನು ಒದಗಿಸಿಕೊಟ್ಟು ಅದರ ಮುಖಾಂತರ ರೈತರಿಗೆ ನೀರಿನ ಉಪಯೋಗ ಮಾಡಿಕೊಟ್ಟರೆ ಸರ್ಕಾರ ಸ್ವಲ್ಪಮಟ್ಟಿಗೆ ಹಣವನ್ನು ಉಳಿಸಬಹುದು.

ಅದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಅವುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ ಸ್ವಲ್ಪ ಹಣವನ್ನು ಅದರಲ್ಲಿ ಉಳಿಸುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ವಿದ್ಯುತ್ ಪೂರೈಕೆ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮಲ್ಲಿ ಸಾಕಷ್ಟು ವಿದ್ಯುಚ್ಛಕ್ತಿ ಇದ್ದರೂ ಕೂಡ ಅದರ ಉಪಯುಕ್ತತೆಯನ್ನು ರೈತರಿಗೆ ಒದಗಿಸುವುದಕ್ಕೆ ಸಾಧ್ಯವಾಗದೇ ಹೋದರೆ ಇವೊತ್ತಿನ ದಿವಸ ಯಾವ ರೀತಿಯಾಗಿ ಹೆಚ್ಚಿಗೆ ಆಹಾರ ಧಾನ್ಯವನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆಯೋ ನನಗೆ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಬೇರೆ ರಾಜ್ಯಗಳಿಗೆ ಕೊಡುವಂತಹ ಪ್ರಮೇಯ ಬಂದಿದೆ. ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ನಮ್ಮ ದೇಶದಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ಯಾವರೀತಿ ಉಪಯೋಗ ಮಾಡಿಕೊಳ್ಳಬೇಕು ಎಂಬ ಬಗ್ಗೆ ನಮ್ಮ ಸರ್ಕಾರದವರು ಯೋಚನೆ ಮಾಡಬೇಕು. 29 ಸಾವಿರ ಹಳ್ಳಿಗಳ ಪೈಕಿ ಕೇವಲ 5-6 ಸಾವಿರ ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಉಳಿದ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸದೇ ಹೋದರೆ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಅದರ ಉಪಯೋಗ ಯಾವರೀತಿ ಆಗಬೇಕು ಎಂಬುದನ್ನು ಯೋಚನೆ ಮಾಡಬೇಕು. ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಸಾಕಷ್ಟು ಉಪಕರಣಗಳಿಲ್ಲ ಎಂದು ಹೇಳುತ್ತಾರೆ. ಬೇರೆ ರಾಜ್ಯದಲ್ಲಿ ಸಾಕಷ್ಟು ಉಪಕರಣಗಳು ಸಿಕ್ಕುತ್ತಾ ಇರುವಾಗ ನಮ್ಮ ರಾಜ್ಯದಲ್ಲಿ ಏತಕ್ಕೆ ಉಪಕರಣಗಳು ಸಿಕ್ಕುತ್ತಾ ಇಲ್ಲ? ಈ ಬಗ್ಗೆ ನಮ್ಮ ಮಂತ್ರಿಗಳು ಯೋಚನೆ ಮಾಡಿ ಆದಷ್ಟು ತೀವ್ರವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಬೇಕಾದ ಸಲಕರಣೆಗಳನ್ನು ತರಿಸಿ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ದೇಶದಲ್ಲಿ ಆಹಾರದ ಅಭಾವ ಬಹಳ ಉಲ್ಬಣ ಸ್ಥಿತಿಯಲ್ಲಿರುವಾಗ ಒಂದು ಸ್ತುತ್ಯವಾದ ಸಂಗತಿ ಏನೆಂದರೆ, ಸರ್ಕಾರದವರು ಆಹಾರವನ್ನು ಸಂಗ್ರಹಣೆ ಮಾಡುತ್ತಿದ್ದಾರೆ. ಇವೊತ್ತಿನ ದಿವಸ ಸರ್ಕಾರದವರು ಸಂಗ್ರಹಣೆ ಮಾಡಿದಂತಹ ಆಹಾರ ಧಾನ್ಯವನ್ನು ಕೆಡದಂತೆ ಸರಿಯಾದ ರೀತಿಯಲ್ಲಿ ಇಡತಕ್ಕದ್ದು ಸರ್ಕಾರದವರ ಆದ್ಯ ಕರ್ತವ್ಯ. ಈ ಹಿಂದೆ ನಾವು ನೋಡಿದ ಹಾಗೆ ಎಷ್ಟೋ ಗೋಡೌನ್‌ಗಳಲ್ಲಿ ಆಹಾರ ಧಾನ್ಯವನ್ನು ಇಲಿ ಹೆಗ್ಗಣಗಳು ತಿಂದುಹಾಕಿ, ಧಾನ್ಯಗಳು ಕೆಟ್ಟುಹೋಗಿರತಕ್ಕಂಥ ನಿದರ್ಶನಗಳು ಬೇಕಾದಷ್ಟು ಇವೆ, ಮತ್ತು ಸಂಗ್ರಹಣ ಮಾಡಿದ ಧಾನ್ಯಗಳು ನುಸಿ ಹತ್ತಿ ಅರ್ಧ ಧಾನ್ಯ ಕೆಟ್ಟುಹೋಗಿರತಕ್ಕ ಸಂದರ್ಭಗಳಿವೆ. ಸಂಗ್ರಹಣ ಮಾಡಿದಂತಹ ಧಾನ್ಯವನ್ನು ಕನ್‌ಸ್ಯೂಮರುಗಳಿಗೆ ಕೊಡುವಾಗ ಅದು ಸರಿಯಾದ ಸ್ಥಿತಿಯಲ್ಲಿ ಇರಬೇಕು. ಗೋಡೌನ್‌ಗಳಲ್ಲಿ ಸಂಗ್ರಹಣ ಮಾಡಿದಂತಹ ಧಾನ್ಯ ಕೆಡದಂತೆ ಮುಂಜಾಗ್ರತೆಯನ್ನು ತೆಗೆದುಕೊಳ್ಳಬೇಕು. ಮತ್ತು ಸರ್ಕಾರದವರು ಶೇಖರಣೆ ಮಾಡಿದಂತಹ ಧಾನ್ಯವನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗ ನಮ್ಮ ರಾಜ್ಯದಲ್ಲಿ ಒಟ್ಟು 12 ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗಿರುವುದರಿಂದ ಅವರಿಗೆ ಸರ್ಕಾರದವರಿಂದ ಆಹಾರ ಧಾನ್ಯವನ್ನು ಪೂರೈಕೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಆ ಪ್ರದೇಶಗಳಲ್ಲಿ ಕೂಲಿಗಾರರಿಗೆ ಕೆಲಸ ಇಲ್ಲದೆ ಇರುವ

(ಶ್ರೀ ಸಿದ್ದಯ್ಯ ಕಾಶೀಮಠ್)

ಪರಿಸ್ಥಿತಿ ಇರುವಾಗ ಅವರಿಗೆ ಸಾಕಷ್ಟು ಕೆಲಸಗಳನ್ನು ಒದಗಿಸಲು ಕೆರೆ ಮತ್ತು ರಸ್ತೆಗಳ ನಿರ್ಮಾಣದ ಕೆಲಸವನ್ನು ತೆಗೆದುಕೊಂಡು 6 ತಿಂಗಳ ಮಟ್ಟಿಗಾದರೂ ಅವರಿಗೆ ಕೆಲಸವನ್ನು ಒದಗಿಸ ಬೇಕು ಮತ್ತು ಅವರಿಗೆ ಆಹಾರ ಧಾನ್ಯವನ್ನು ಪೂರೈಕೆ ಮಾಡುವುದಕ್ಕೆ ಪ್ರಯತ್ನಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಎಲ್ಲಾ ಇಲಾಖೆಗಳಲ್ಲಿಯೂ 10 ಪರ್ಸೆಂಟ್ ಸಿಬ್ಬಂದಿಯನ್ನು ತಗ್ಗಿಸಿ ಅದರಿಂದ ಹಣ ವನ್ನು ಉಳಿಸಬೇಕೆಂದು ಯೋಚನೆಮಾಡಿದ್ದೇವೆ ಎಂದು ಹೇಳಿದ್ದಾರೆ. ಹಿಂದೆ ಬ್ಲಾಕ್‌ಡೆವಲಪ್ ಮೆಂಟ್ ಆಫೀಸುಗಳಲ್ಲಿ ತಹಶೀಲ್ದಾರರಿಗೆ ಸಾಕಷ್ಟು ಪವರ್ಸ್ ಇತ್ತು ಈಗ ಹೊಸದಾಗಿ ಬಂದಿರತಕ್ಕ ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ತಹಶೀಲ್ದಾರರಿಗೆ ಸಾಕಷ್ಟು ಕೆಲಸ ಇಲ್ಲದೆ ಇರುವುದರಿಂದ ಅವರು ಬರೀ ಧಾನ್ಯದ ವಸೂಲಿ ಕೆಲಸವನ್ನು ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಂದು ತಾಲ್ಲೂಕಿಗೂ ಒಬ್ಬರು ತಹಶೀಲ್ದಾರರು ಇರುವಾಗ ತಹಶೀಲ್ದಾರರು ಮತ್ತು ಬಿ. ಡಿ. ಓ. ಗಳ ಕೆಲಸ ಒಂದೇ ರೀತಿ ಇರುವುದರಿಂದ ಅಲ್ಲಿ ಬಿ. ಡಿ. ಓ. ಗಳ ಅವಶ್ಯಕತೆ ಇಲ್ಲ. ಆದ್ದರಿಂದ ಬಿ. ಡಿ. ಓ. ಮತ್ತು ಡೆಪ್ಯುಟಿ ಬಿ. ಡಿ. ಓ. ಹುದ್ದೆಗಳನ್ನು ತೆಗೆಯಬೇಕೆಂದು ನಾನು ಸಲಹೆಮಾಡುತ್ತೇನೆ. ಇವೊತ್ತು ನಮ್ಮ ರಾಜ್ಯದಲ್ಲಿ 268 ಬ್ಲಾಕುಗಳು ಇವೆ. ಅವುಗಳಲ್ಲಿ 268 ಜನ ಬಿ. ಡಿ. ಓ. ಗಳು ಮತ್ತು ಡೆಪ್ಯುಟಿ ಬಿ. ಡಿ. ಓ. ಗಳು ಇದ್ದಾರೆ. ಇವರನ್ನು ತೆಗೆದು ಈಗ ಹೊಸದಾಗಿ ನಿರ್ಮಾಣವಾಗುತ್ತಿರುವ ಗ್ರಾಮ ಪಂಚಾಯಿತಿಗಳಿಗೆ ಕಾರ್ಯದರ್ಶಿಗಳಾಗಿ ನೇಮಿಸಬೇಕು. ಆ ರೀತಿ ಮಾಡುವುದಾದರೆ ಕೋಟಿ ಗಟ್ಟಲೆ ರೊಕ್ಕ ಉಳಿಯುತ್ತದೆ ಎಂದು ನಾನು ಸಲಹೆಮಾಡುತ್ತೇನೆ. ಅದನ್ನು ಮಾಡದೆ ಬರೀ 3 ಮತ್ತು 4ನೇ ದರ್ಜೆಯ ನೌಕರರನ್ನು 10 ಪರ್ಸೆಂಟ್ ತೆಗೆಯುವುದರಿಂದ ರಾಜ್ಯಕ್ಕೆ ಹೆಚ್ಚಿನ ಉಳಿತಾಯವಾಗಲಾರದು ಮತ್ತು ಅದರಿಂದ ಪ್ರಯೋಜನವೂ ಇಲ್ಲ ಎಂದು ನಾನು ಹೇಳುತ್ತೇನೆ.

ಇನ್ನು ಕೈಗಾರಿಕೆಯ ವಿಷಯದಲ್ಲಿ ಹೇಳುವುದಾದರೆ, ಕೈಗಾರಿಕೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾವು ಪ್ರತಿ ವರ್ಷವೂ ಹೇಳುತ್ತಲೇ ಇದ್ದೇವೆ. ಈ ಕೈಗಾರಿಕೆಗಳಿಗೆ ಕೊಟ್ಟಿರ ತಕ್ಕಂಥ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸದೆ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಸಾಕಷ್ಟು ಬೆಳವಣಿಗೆ ಆಗಿಲ್ಲ. ನಮ್ಮ ರಾಜ್ಯದಲ್ಲಿ ಕೈಗಾರಿಕೆ ಹೆಚ್ಚು ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ಸರ್ಕಾರದವರು ಒಂದು ಹೆಚ್ಚಿನರೀತಿಯಲ್ಲಿ ಉತ್ತೇಜನವನ್ನು ಕೊಡಬೇಕು. ಇವೊತ್ತು ನಮ್ಮ ರಾಜ್ಯದಲ್ಲಿ ಕೈಗಾರಿಕೆಯ ಸಂಬಂಧದಲ್ಲಿ ಜನಗಳಿಗೆ ಒಂದು ಟ್ರೈನಿಂಗ್‌ಕೊಟ್ಟು ಒಂದು ಉತ್ತೇಜನ ವನ್ನು ಕೊಟ್ಟರೆ ಅದರಿಂದ ಕೈಗಾರಿಕೆಯ ಬೆಳವಣಿಗೆಯಾಗಿ ನಮ್ಮ ದೇಶ ಅಭಿವೃದ್ಧಿಯಾಗುತ್ತದೆ ಎಂದು ನಾನು ಹೇಳುತ್ತೇನೆ. ಕೇಂದ್ರ ಸರ್ಕಾರದಿಂದ ಸಾಲವಾಗಿ ತಂದಂತಹ ಹಣವನ್ನು ಕೋ-ಆಪ ರೇಟೀವ್ ಸೊಸೈಟಿಗಳಿಗೆ ಮತ್ತು ಕಂಪೆನಿಗಳಿಗೆ ಕೊಟ್ಟಿದ್ದಾರೆ. ಅದರಿಂದ ಬರತಕ್ಕ ವರಮಾನ ಬಹಳ ಕಡಿಮೆಯಾಗಿದೆ ಈಗ ಸರ್ಕಾರಕ್ಕೆ ಬರಬೇಕಾದಂತಹ ಸಾಲದ ಹಣವನ್ನು ವಸೂಲುಮಾಡಿ ಅದರಿಂದ ಬಂದಂತಹ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗಮಾಡಬೇಕು. ಈಗ ಸರ್ಕಾರ ದವರು ಸಾಲಕೊಟ್ಟಿರತಕ್ಕ ಹಣವನ್ನು ವಸೂಲುಮಾಡಲು ಒಂದು ಸರಿಯಾದ ಮಾರ್ಗ ಉಪಯೋ ಗಿಸಿಕೊಂಡು ವಸೂಲುಮಾಡದೇ ಹೋದರೆ ಅದು ವಾಪಸು ಬರುವುದಿಲ್ಲ. ಆದ್ದರಿಂದ ಅದನ್ನು ವಸೂಲುಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದ ಎನ್. ಜಿ. ಓ. ಗಳಿಗೆ ಈಗ ಕೊಡಲಾಗಿರುವ 5 ರೂಪಾಯಿಗಳ ತುಟ್ಟಿ ಭತ್ಯದಿಂದ ಅವರಿಗೆ ಯಾವತರಹ ಫಾಯಿದೆಯೂ ಆಗುವುದಿಲ್ಲ. ಏತಕ್ಕೆಂದರೆ, ಇವೊತ್ತಿನ ದಿವಸ ಜೀವನಕ್ಕೆ ಬೇಕಾದ ವಸ್ತುಗಳ ಬೆಲೆಗಳು ಏರಿವೆ. ಆದ್ದರಿಂದ ಅವರ ಜೀವನದ ವೆಚ್ಚ ಹೆಚ್ಚಾಗಿದೆ. ಈ ದೃಷ್ಟಿಯಿಂದ ಅವರಿಗೆ ಏನು ಸಹಾಯ ಮಾಡಬೇಕೆಂಬುದನ್ನು ಸರ್ಕಾರದವರು ಪರಿಶೀಲನ ಬೇಕು. ಈಗ ಅವರಿಗೆ ಕೊಟ್ಟಿರತಕ್ಕ 5 ರೂಪಾಯಿ ಅವರಿಗೆ ತೃಪ್ತಿಯನ್ನುಂಟುಮಾಡುವುದಿಲ್ಲ. ಆದ್ದರಿಂದ ಇವೊತ್ತಿನ ಜೀವನದ ನಿತ್ಯೋಪಯೋಗಿ ವಸ್ತುಗಳ ಬೆಲೆಗಳನ್ನು ಗಣನೆಗೆ ತೆಗೆದುಕೊಂಡು ಅದನ್ನು ವಿಚಾರ ವಿನಿಮಯಮಾಡಿಕೊಂಡು ಒಮ್ಮೆಲೇ ಅವರಿಗೆ ಇಷ್ಟು ಕೊಡಬೇಕೆಂದು ಸರ್ಕಾರ ನಿರ್ಧಾರಮಾಡಿ ಅವರಿಗೆ ಪರಿಹಾರವನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ನೌಕರರ ಸೀನಿಯಾರಿಟಿ ಲಿಸ್ಟಿನ ಫೈನಲೈಜ್ ಮಾಡುವ ವಿಷಯವು ಪ್ರತಿಯೊಂದು ಅಧಿವೇಶನದಲ್ಲಿಯೂ ಬರುತ್ತದೆ. ಆ ಬಗ್ಗೆ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ಸೀನಿಯಾರಿಟಿ ಲಿಸ್ಟನ್ನು ಈಗಾಗಲೇ ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ ಎಂದು ನಾನು ಕೇಳಿ ದ್ದೇನೆ. ಇನ್ನು ನಮ್ಮಲ್ಲಿರತಕ್ಕ ಸೀನಿಯಾರಿಟಿ ಲಿಸ್ಟನ್ನು ಫೈನಲೈಜ್ ಮಾಡುವುದಕ್ಕೆ ಸರ್ಕಾರದವರು

ಪ್ರಯತ್ನವಾದಬೇಕು. ಇನ್ನು 6 ತಿಂಗಳು ಅಥವಾ ಒಂದು ವರ್ಷದಲ್ಲಿ ಒಮ್ಮೆಲೇ ಎಲ್ಲಾ ಸೀನಿಯಾರಿಟಿ ಲಿಸ್ಟನ್ನು ಫೈನಲೈಜ್ ಮಾಡಿ ಆ ರೋಗ ಇನ್ನು ಹರಡದಂತೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಪ್ರಾಥಮಿಕಶಾಲೆಗಳ ಬಗ್ಗೆ ಕೆಲವು ವಿಷಯಗಳನ್ನು ನಾನು ಹೇಳಬೇಕಾಗಿದೆ. ಇಡೀ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳನ್ನು ಸರ್ಕಾರದವರೇ ವಹಿಸಿಕೊಂಡು ನಡೆಸುತ್ತಿದ್ದಾರೆ. ಆದರೆ ಬಿಜಾಪುರ, ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಮತ್ತು ಕಾರವಾರ ಜಿಲ್ಲೆಗಳಲ್ಲಿ ಬೋರ್ಡುಗಳಿಗೆ ಪ್ರಾಥಮಿಕಶಾಲೆಗಳ ಜವಾಬ್ದಾರಿಯನ್ನು ವಹಿಸಿರುವುದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ರಾಜ್ಯದ ಇದೇ 20 ಜಿಲ್ಲೆಗಳಲ್ಲಿ 16 ಜಿಲ್ಲೆಗಳ ಪ್ರಾಥಮಿಕ ಶಾಲೆಗಳನ್ನು ಸರ್ಕಾರದವರೇ ವಹಿಸಿಕೊಂಡು ನಡೆಸುತ್ತಿರುವುದರಿಂದ ಆ ಶಾಲೆಗಳ ಉಪಾಧ್ಯಾಯರಿಗೆ ಸರ್ಕಾರದವರು ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಡುತ್ತಿದ್ದಾರೆ. ಉಳಿದ ನಾಲ್ಕು ಜಿಲ್ಲೆಗಳಲ್ಲಿರತಕ್ಕ ಪ್ರಾಥಮಿಕಶಾಲೆಗಳನ್ನು ಬೋರ್ಡಿನ ಮುಖಾಂತರ ನಡೆಸುವುದು ಸರಿಯಲ್ಲ. ಅವನ್ನು ರದ್ದುಮಾಡಿ ಆ ಜಿಲ್ಲೆಗಳಲ್ಲಿರತಕ್ಕ ಎಲ್ಲಾ ಪ್ರಾಥಮಿಕ ಶಾಲೆಗಳನ್ನೂ ಸರ್ಕಾರದವರೇ ವಹಿಸಿಕೊಂಡು ನಡೆಸಬೇಕೆಂದು ನಾನು ಸಲಹೆಮಾಡುತ್ತೇನೆ. ಆ ನಾಲ್ಕು ಜಿಲ್ಲೆಗಳಲ್ಲಿ ಪ್ರಾಥಮಿಕಶಾಲೆಗಳನ್ನು ಬೋರ್ಡಿನವರು ನಡೆಸುವುದರಿಂದ ಸರ್ಕಾರಿ ಶಾಲೆಗಳಲ್ಲಿರತಕ್ಕ ಉಪಾಧ್ಯಾಯರಿಗೆ ಸಿಕ್ಕತಕ್ಕ ಸೌಲಭ್ಯಗಳು ಈ ಶಾಲೆಗಳ ಉಪಾಧ್ಯಾಯರಿಗೆ ಸಿಕ್ಕುವುದಿಲ್ಲ. ಆದ್ದರಿಂದ ಆ ನಾಲ್ಕು ಜಿಲ್ಲೆಗಳಲ್ಲಿರತಕ್ಕ ಪ್ರಾಥಮಿಕ ಶಾಲೆಗಳನ್ನು ಆದಷ್ಟು ತೀವ್ರವಾಗಿ ಸರ್ಕಾರದವರೇ ವಹಿಸಿಕೊಂಡು ಆ ಶಾಲೆಗಳ ಉಪಾಧ್ಯಾಯರಿಗೆ ಸರ್ಕಾರದವರೇ ಸೌಕರ್ಯವನ್ನು ಒದಗಿಸಿ ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಮಧ್ಯಾಹ್ನದ ಉಪಾಹಾರದ ಬಗ್ಗೆ ಹಿಂದೆ ಹೇಳಿದ್ದೇನೆ. ಕೆಲವೊಂದು ಶಾಲೆಗಳಿಗೆ ಮಕ್ಕಳಿಗೆ ಮಧ್ಯಾಹ್ನದ ಉಪಾಹಾರವನ್ನು ಕೊಡುವುದಕ್ಕಾಗಿ ಸರ್ಕಾರದವರು ಒದಗಿಸತಕ್ಕ ರವೆ ಮುಂತಾದ ಸಾಮಗ್ರಿಗಳು ಏನಿವೆ ಅವು ಸರಿಯಾದ ರೀತಿಯಲ್ಲಿ ಉಪಯೋಗವಾಗದೆ ಅವು ಕೆಟ್ಟು ಹೋಗುವಂತಹ ಪ್ರಸಂಗಗಳು ಬಂದಿವೆ. ಕೆಲವು ಕಡೆಗಳಲ್ಲಿ ಈ ಮಧ್ಯಾಹ್ನದ ಉಪಾಹಾರವನ್ನೂ ಸಾರ್ವಜನಿಕವತಿಯಿಂದ ಮತ್ತು ಸಂಸ್ಥೆಯಿಂದ ನಡೆಸುತ್ತಿರುವುದರಿಂದ ಎಷ್ಟೋ ಕಡೆಗಳಲ್ಲಿ ಅದು ಸರಿಯಾಗಿ ನಡೆಯುತ್ತಿಲ್ಲ. ಇಂಥವುಗಳನ್ನು ಆದಷ್ಟುಮಟ್ಟಿಗೆ ಸರ್ಕಾರದವರೇ ವಹಿಸಿಕೊಂಡು ಸ್ಕೂಲುಗಳಿಗೆ ಒಂದು ಸಬ್ಸಿಡಿ ರೂಪದಲ್ಲಿ ಕೊಟ್ಟು ಮಧ್ಯಾಹ್ನದ ಉಪಾಹಾರ ಸುಗಮವಾಗಿ ನಡೆಯುವಂತೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

† SRI R. S. HEGDE (Honnavar).—Mr. Speaker, Sir, in welcoming the budget for 1966–67, I submit that the task of meeting the standard of living of the millions of people in the State in particular and of the country as a whole, representing nearly one seventh of humanity, is necessarily a complex one. This task becomes even more complicated when one takes into consideration the backlog of centuries of stagnation preceding independence. During the last fifteen years of planning significant achievements in the social and economic development of the country have been recorded. Simultaneously many problems and many difficulties have arisen. This is nothing unusual as development in its wake brings new problems and it is said that no country in the world has recorded a completely self-sustaining prosperous growth except through a long period of waiting, occasionally brightened by success, at times baffled by problems, disappointments and difficulties. The period of transition has been long in many countries. We can take the history of any nation-England, France, America, Russia or any other country in the world. The period of waiting, the period of transition has been very long. Many countries have no stable constitution; many countries have no stable government. So our Government have sought and have been actually pursuing ways and means to shortening this period of transition through comprehensive study and national planning. Increase in production, application of technological processes to speed up the

(SRI R. S. HEGDE)

pace of development and establishment of social order in which great measure of social justice and equality of opportunity are assured to all, are the objectives for the realisition of which the resources and energy of the nation supplemented by assistance from foreign countries are being harnessed. Looking from this point of view, the maiden budget presented by our resourceful Finance Minister has to be appreciated. It is commented that the overall surplus of 1.62 crores estimated in the budget will be done away with by the increase of dearness allowance of Rs. 5 to the N. G. Os. But the effect of the revenue receipt from land revenue surcharge, and urban property tax which had not been accounted for in the budget cannot be forgotten, which only means the budgetary surplus is something real, something genuine and not artificial and unreal as some of the critics of the budget seem to think. It is significant to note that the remunerative assets of the State will begin to yield dividend from 1966-67 specially from electricity to the tune of 4 crores and when all the 10 generators of Sharavathi are commissioned it is bound to yield 20 crores. The irrigation projects on which the Government have spent considerable amount now static are also going to be remunerative in the years to come. So, Sir, the taxation measures, income from the investment that the Government have been pleased to make these years on irrigation projects, electricity and in some industries in the public sector, small savings deposit and other central assistance, are the assets of the State. Hence revenue of the State is not Static but dynamic and expanding and ever increasing. However much obligation of the State may be in the sphere of administration, in the sphere of social services, one thing is irresistible that the finances of the State, in my thinking, is quite sound and not unhealthy as some of the critics of the budget seem to think. Undoubtedly this year is an year of stress *i.e.*, 1965-66, an year of crisis in the agriculture front. But the entire money in the latter part of 1965-66 had to be diverted for supplying pumpsets, other irrigation facilities and to mitigate the conditions of famine prevailing in some parts of the State. Hence the achievement of the target fixed for any Government has to be looked from an angle as to what the Government had done or would have done in normal times. To check the rising prices the only safeguard is production and more production, not only in the agriculture sector but also in the sphere of industry. More production means more systematic investment by the Government not only on land but also on human beings. More investment means, more money and more money means the exploitation of the resources of the State.

SRI H. R. KESHAVAMURTHY.—May I know what the Hon'ble Member means by investment on human beings?

SRI R. S. HEGDE.—Education for example and health. It is an investment on human being and that is the meaning.

To exploit the resources more taxation is necessary if money does not come by other means. Taxation is not the feature of the budget of

this State alone. Taxation budget has been presented in Orissa, in Madhya Pradesh and in the Centre. So, whatever the State Government has taxed this year has been already taxed by the Southern States like Madras, Andhra and Maharashtra. I was reading a book in the library written by Harshell P. Wald of Harward Low School on international programme in taxation of agricultural land in underdeveloped countries.

4-30 P.M.

I have read the whole book. It is stated that both in India and Pakistan, after 1939, the land tax has fallen and it is also stated therein that the land tax in India is only 9 per cent including the Centre's tax like estate duty. It has been stressed by the Leader of the Opposition that the per-capita tax in India is more. But, to my mind even if the per capita taxation is more, the per capita expenditure is also more on every human being; if per capita taxation is 14 per cent, the per capita expenditure on every individual is four to five times more. Whenever there is more taxation, there is bound to be more per capita expenditure. The *per capita* income in our State is Rs. 370 per individual, and it may be more. But, what I say is, in order to achieve that sort of self-sufficiency in development, we have to tax more. That is the ordinary principle of any financing. So, the question before all of us is whether are we to have a planned development, developing ourselves stage by stage or is the society to remain static. If the society is to remain static, no taxes are necessary and there will be no development and taxes may not be necessary. Development has reached a point of saturation. We are in the initial stages of development. So, a little amount of sacrifice has to be there by every individual if we have to develop ourselves. Even the other parties, the P. S. P., etc., know that we want development and so also the Congress. The need of all political parties has been development in all sectors; the means may be different. Here, taxation measures taken by the Government are quite consistent with the stage of development in the country. If statistics have any meaning, the progress in every field of activity by the Government has been recorded. In the Department of Fisheries, if during 1960-61, 5 launches were running, today we have more than a hundred mechanised launches; if during 1960-61, 10,000 acres were irrigated, in 1965-66 lakhs of acres are irrigated.

SRI K. LAKKAPPA.—What is the result?

SRI R. S. HEGDE.—The result is more production, but that production has been eaten away by more number of births.

SRI K. LAKKAPPA.—Bridges have been constructed on political considerations!

SRI R. S. HEGDE.—That is his opinion, Sir. In education, if 10 per cent education was there in 1960-61, today we have got 25 per cent. In the field of co-operation, agriculture and everywhere we have developed..

(SRI R. S. HEGDE)

There was a criticism that there is no industrial development in the State. At page 15 of the Budget speech presented by the Hon'ble Minister for Finance, very honest reason has been given as to why in the industrial field the State has been backward. It says :—

> "One of the main reasons adduced for slow growth of Industries was lack of power. We had, therefore, to spend a considerable portion of our resources on power projects and communications. With the commissioning of the Sharavathy Project, this difficulty has been removed and the State is in a position to provide adequate power and other facilities even for large Industries requiring large supplies of power like Steel, Aluminium, Fertiliser, etc."

So, the question is whether the reasons given by the Government for the industrial backwardness of the State are genuine or not. There was no power. Now, power is there and the Government is inviting people to invest money and start industries. Therefore, the observation of the Leader of the Opposition that Government has been giving a step-motherly attitude towards industrial development in the State, is most uncharitable.

With these few observations, I resume my seat.

†ಶ್ರೀ ಸಂಜೀವನಾಥ ಐಕಳ (ಸುರತ್ಕಲ್).— ಮಾನ್ಯ ಸಭಾಧ್ಯಕ್ಷರೆ, ನಮ್ಮ ದೇಶದ ಆರ್ಥಿಕ ಸಂಪತ್ತು ಕ್ಷೀಣವಾಗಿ ದೇಶದ ಆರ್ಥಿಕ ಸಂಕಟದ ಬೇಗೆಯಲ್ಲಿ ಸಿಲುಕಿ ಒದ್ದಾಡುತ್ತಿರುವಾಗ ನಮ್ಮ ಆರ್ಥಿಕ ಸಚಿವರು ತಮ್ಮ ಐದು ವರ್ಷಗಳ ಅಳ್ವಿಕೆಯಲ್ಲಿ ಈ ವರ್ಷ 162 ಲಕ್ಷ ರೂಪಾಯಿಗಳ ಉಳಿತಾಯದ ಬಜೆಟ್ಟನ್ನು ಮುಂದಿನ ಸಾಲಿಗೆ ಮಂಡಿಸಿದ್ದಾರೆ. ಬರುವ ಚುನಾವಣೆಯಲ್ಲೂ ಅವರು ಆರಿಸಿಬಂದು ಆರ್ಥಿಕ ಮಂತ್ರಿಗಳಾಗಬಹುದು. ದೇಶದ ಅಭಿವೃದ್ಧಿ ಕಾರ್ಯಗಳಿಗೆ ಸರಕಾರಕ್ಕೆ ಹಣ ಬೇಕಾಗುತ್ತದೆ. ಆದರೆ ಜನರಿಂದ ಪಡೆದ ಹಣದ ದುರುಪಯೋಗವಾಗಬಾರದು. ಇದೊಂದು. ನಮ್ಮ ಆದಾಯ ಮತ್ತು ವ್ಯಯ ಏನಿದೆ ಎಂದು ನೋಡಿ ಅದನ್ನು ಸಮಾಜದ ಸರ್ವತೋಮುಖವಾದ ಅಭಿವೃದ್ಧಿಗೆ ಮೀಸಲಾಗಿಡಬೇಕು. ನಾನು ಅರ್ಥ ಶಾಸ್ತ್ರಜ್ಞನಲ್ಲ, ಎರಡಕ್ಕೆ ಎರಡು ಸೇರಿಸಿದರೆ ನಾಲ್ಕಾಗುತ್ತದೆ ಎಂದು ಹೇಳುವವನು ನಾನು. ಆದರೆ ಅರ್ಥಮಂತ್ರಿ ಎರಡಕ್ಕೆ ಎರಡನ್ನು ಸೇರಿಸಿದರೆ ನಾಲ್ಕು ಮಾತ್ರವಲ್ಲದೆ, ಐದೇಕೆ ಆಗಬಾರದು ಎಂದು ಹೇಳುವವರು ಅವರು. ಏಕೆಂದರೆ, ಅವರು ತಮ್ಮ ಅಂಕಿಸಂಖ್ಯೆ ನಮ್ಮ ಮುಂದಿಡುವಾಗ ಇಂದ್ರಜಾಲ ಮಹೇಂದ್ರಜಾಲ, ಮಂತ್ರ ತಂತ್ರ ಉಪಯೋಗ ಮಾಡಿಕೊಂಡು ಬಜೆಟನ್ನು ಇಡದೆ ಸರ್ವಸಾಧಾರಣವಾದ ಬಜೆಟ್ಟನ್ನು ಇಡಬೇಕಾಗಿತ್ತು. ಹಿಂದಿನ ವರ್ಷದ ಪ್ರಗತಿ, ಈ ವರ್ಷದ ಪ್ರಗತಿ, ಮುಂದಿನ ವರ್ಷದ ಪ್ರಗತಿ ವಿಚಾರಮಾಡುವಾಗ ಇದೊಂದು ರಸ ತೆಗೆದು ಹಿಂಡಿಹಾಕಿದ ಕಬ್ಬಿನ ಸಿಪ್ಪೆಯ ಹಾಗೆ ನೀರಸವಾಗಿರುವ ವಸ್ತು ಎಂದು ಹೇಳಬಹುದು. ದೇಶಕ್ಕೆ ಚೈತನ್ಯದಾಯಕವಾದ ಶಕ್ತಿಯುತವಾದ ಕೆಲವು ಕಾರ್ಯಕ್ರಮಗಳನ್ನು ಹಾಕಿ ನಮ್ಮೆದುರಿಗೆ ಕಾಣುತ್ತಿರುವ ಆಹಾರದ ಅಭಾವವನ್ನು ಗಮನಿಸಿ ಅಭಿವೃದ್ಧಿಕಾರ್ಯಗಳಿಗೆ ಅನುಕೂಲವಾಗುವಂತೆ ಒಂದು ಬಜೆಟ್ಟನ್ನು ತರದೆ ಕೇವಲ ಸಾಮಾನ್ಯವಾಗಿ ಮಾಡುವ ಒಂದು ಆಯವ್ಯಯ ಪಟ್ಟಿಯನ್ನು ಇಟ್ಟಿದ್ದಾರೆ. ನಾನು ಆಹಾರದ ಭಯಂಕರ ಸ್ಥಿತಿಯನ್ನು, ದಾರುಣ ಚಿತ್ರವನ್ನು ಸಭೆಯ ಮುಂದಿಡಬೇಕಾಗಿದೆ. ಅರಗಿನ ಮನೆಗೆ ಬೆಂಕಿ ಬಿದ್ದು ಪಾಂಡುಪುತ್ರರು ಅದರಿಂದ ತಪ್ಪಿಸಿಕೊಂಡು ಹೋಗಿ ಆಲದ ಮರದ ಕೆಳಗೆ ಕುಳಿತಿದ್ದಾಗ ಬೆಳಗಾಯಿತು. ಆಗ ಕುಂತೀದೇವಿ ಮಕ್ಕಳನ್ನು ಕರೆದು ಭಿಕ್ಷೆ ಬೇಡಿಕೊಂಡು ಬರುವಂತೆ ಹೇಳುತ್ತಾಳೆ. ಧರ್ಮರಾಜ ಎದ್ದು ನಿಲ್ಲುತ್ತಾನೆ. "ಶೂರರೇಂ ಧೀರರೇಂ ಪಾಂಡುಪುತ್ರರ್ ಅರಸುತನದಿ ಮೆರೆವರಲ್ತೆ, ತಿರುಪೆಯೆತ್ತಿ ಕೊಳಂ ಪಡೆಯಲೇಂ ಕೌರವನ ದೌರ್ಜನ್ಯದಿಂ ಅಕಟಕಟ ವಿಧಿಯೇ, ಧರ್ಮಜಂ" ಹೀಗೆಂದು ಸಂಕಟದಿಂದ ಮರುಗುತ್ತಾರೆ. ಹೀಗೆ ನಿಮ್ಮ ದೌರ್ಜನ್ಯದಿಂದ ಈಗ ಜನರು ಪರಿತಾಪ ಪಡಬೇಕಾಗಿದೆ. ಇಂಥ ಪರಿಸ್ಥಿತಿಗೆ ಈ ದೇಶವನ್ನು ತಂದಿಟ್ಟಿದ್ದೀರಿ.

ಈ ಆಹಾರದ ಪರಿಸ್ಥಿತಿ ಕಳೆದ 16 ವರ್ಷಗಳಿಂದಲೂ ನಮ್ಮ ಮುಂದೆ ನಿಂತಿದೆ. ಇದು ವರ್ಷೇ ವರ್ಷೇ ಪರಿಶೀಲಿಸುವ ಪ್ರಶ್ನೆಯಾಗಿದೆ. ಇದನ್ನು ಸಮರ್ಪಕವಾಗಿ ಯೋಗ್ಯವಾದ ರೀತಿಯಲ್ಲಿ ನಿವಾರಿಸಲು ನಮ್ಮ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಈ ಆಹಾರದ ಪ್ರಶ್ನೆ ನಮ್ಮ ಪ್ರಾಂತ್ಯಕ್ಕೆ ಮಾತ್ರ ವಲ್ಲ, ಇಡೀ ದೇಶದ ಪ್ರಶ್ನೆಯಾಗಿದೆ. ಇನ್ನೂ ಮುಂದೆ ಹೇಳಿದರೆ ಜಗತ್ತಿನ ಪ್ರಶ್ನೆ ಯಾಗಿದೆ. ಇನ್ನು ಮೂರು ವರ್ಷಗಳ ನಂತರ, ಆಗ ಬೆಳೆಯುವ ಜನಸಂಖ್ಯೆಗೆ ಮೂರು ಪಾಲನಷ್ಟು ಬೆಳೆಸಬೇಕಾಗಿದೆ. ಆದರೆ ಈ ಹಂತದಲ್ಲಿ ನಮ್ಮ ದೇಶವು ಪ್ರತಿ ವರ್ಷವು ಹಿಂದೆ ಬೀಳುತ್ತಿದೆ. ಇತರ ದೇಶಗಳು ಪ್ರಗತಿ ಸಾಧಿಸಿವೆ. ಡೆವಲಪ್‌ಡ್ ಕಂಟ್ರೀಸ್ ಏನು ಇದೆ, ಆ ದೇಶಗಳಲ್ಲಿ ಪ್ರತಿವರ್ಷವು 2ರಿಂದ 3ರಷ್ಟು ಆಹಾರ ಉತ್ಪತ್ತಿ ಹೆಚ್ಚಾಗಿದೆ. ಅದೇರೀತಿಯಲ್ಲಿ ಅನ್‌ಡೆವಲಪ್‌ಡ್ ಕಂಟ್ರೀಸ್‌ನಲ್ಲೂ ಕೂಡ ಶೇಕಡ 20ರಷ್ಟು ಆಹಾರೋತ್ಪತ್ತಿಯಾಗಿದೆ. ಮತ್ತು ಕೈಗಾರಿಕಾ ಉತ್ಪತ್ತಿಯಾಗಿದೆ. ನಮ್ಮಲ್ಲಿ ಮಾತ್ರ ಮಕ್ಕಳನ್ನು ಹುಟ್ಟಿಸುವ ಸಂಖ್ಯೆ ಜಾಸ್ತಿಯಾಗಿದೆಯೇ ವಿನಾ ಆಹಾರೋತ್ಪತ್ತಿ ಜಾಸ್ತಿ ಯಾಗಿಲ್ಲ. ಜನಸಂಖ್ಯೆ ಸೇಕಡ 12ರಷ್ಟು ಹೆಚ್ಚಿರುವಾಗ ಆಹಾರೋತ್ಪತ್ತಿ ಸೇಕಡ 5ರಿಂದ 7 ರಷ್ಟು ಮಾತ್ರವಿದೆ. ಇನ್ನು ಮೂರು ವರ್ಷಗಳಲ್ಲಿ ಯಾವ ಹಂತವನ್ನು ಮುಟ್ಟುತ್ತದೆಯೆಂದು ಹೇಳುವುದಕ್ಕಾ ಗುವುದಿಲ್ಲ, ಈ ವರ್ಷ ನಮ್ಮ ಫುಡ್ ಅಂಡ್ ಅಗ್ರಿಕಲ್‌ಚರ್ ಆರ್‌ಗನೈಸೇಷನ್ ವಿಶ್ವದ ಆಹಾರದ ಸಂಸ್ಥೆಯವರು ಅಂತರ್‌ರಾಷ್ಟ್ರೀಯ ಆಹಾರ ಅಕ್ಕಿ ಬೆಳೆಯುವ ದಿನಾಚರಣೆಯನ್ನು ಆಚರಿಸುತ್ತಾರೆ. ನಮ್ಮ ವ್ಯವಸಾಯದ ಮಂತ್ರಿಗಳು ಇಲ್ಲಿ ಇಲ್ಲ. ಬಹುಶಃ ಈ ಕಾರ್ಯಕ್ರಮವನ್ನ ಅವರು ಇಡೀ ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಪ್ರಚಾರಪಡಿಸಿದ್ದಾರೆ. ಆದರೆ ನಮ್ಮ ಮೈಸೂರು ದೇಶದವರು ಈ ರೀತಿಯ ಒಂದು ಕಾರ್ಯಕ್ರಮವನ್ನು ಕೈಗೊಂಡಿಲ್ಲ. ವಿಶ್ವದ ಆಹಾರ ಸಂಸ್ಥೆಯವರು ಪ್ರತಿ ಪ್ರಾಂತ್ಯಗಳಿಗೆ, ಪ್ರತಿ ದೇಶಗಳಿಗೆ ಅಡ್‌ಹಾಕ್ ಗ್ರ್ಯಾಂಟ್ ಕೊಟ್ಟು ಮತ್ತು ಬೇರೆ ಬೇರೆ ರೀತಿಯಲ್ಲಿ ಸಹಾಯ ಒದಗಿಸಿ ದ್ದಾರೆ. ನಮ್ಮ ರಾಷ್ಟ್ರಕ್ಕೆ ಅಂತರ್‌ರಾಷ್ಟ್ರೀಯ ಅಕ್ಕಿ ದಿನಾಚರಣೆಯ ಕಾರ್ಯಕ್ರಮದ ಅಂಗವಾಗಿ ಏನು ಸಹಾಯ ಬಂದಿದೆ ಎಂಬ ಅಂಕಿಅಂಶಗಳನ್ನು ಹೇಳಿಲ್ಲ.ಬಹುಶಃ ಅಂಥ ಒಂದು ಅಂತರ್‌ರಾಷ್ಟ್ರೀಯ ಅಕ್ಕಿ ದಿನಾಚರಣೆ ಕಾರ್ಯಕ್ರಮ ಇವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಬಹುಶಃ ನನಗನ್ನಿಸುತ್ತದೆ, ಕೃಷಿಮಂತ್ರಿಗಳು ಪರದೇಶಕ್ಕೆ ಹೋಗುವವರಿದ್ದಾರೆಂದು. ಫೋರ್ಡ್ ಫೌಂಡೇಷನ್ ಅವರ ಖರ್ಚಿನಿಂದ ಹೋಗುತ್ತಾರೆಂದು ತಿಳಿದಿದ್ದೇನೆ. ಕೃಷಿಮಂತ್ರಿಗಳು ಅಂಥ ಕಾರ್ಯಕ್ರಮಗಳ ಆಚರಣೆಯನ್ನು ಪರ ರಾಷ್ಟ್ರಗಳಲ್ಲಿ ಮಾಡಿರುವುದನ್ನು ನೋಡಿ ಅಲ್ಲಿಂದ ಬಂದನಂತರ ಬತ್ತದ ಬೆಳೆ ಬಗ್ಗೆ ರೂಪು ರೇಖೆ ಗಳೇನು ಎಂಬುದನ್ನು ತಿಳಿದು ಕಾರ್ಯರೂಪಕ್ಕೆ ತರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ರಥ ನಡೆಯಬೇಕಾದರೆ ಅದರ ಚಕ್ರಗಳು, ಕುದುರೆಗಳು ಚೆನ್ನಾಗಿದ್ದರೆ ಅದು ಚೆನ್ನಾಗಿ ನಡೆಯಬಲ್ಲದು. ಇಲ್ಲದಿದ್ದರೆ ಆ ರಥವು ಮುಗ್ಗರಿಸುತ್ತದೆ. ಅದೇ ರೀತಿ ನಮ್ಮ ಪ್ರಾಂತ್ಯದ ನಾನ್ ಗೆಜಟಡ್ ಅಧಿಕಾರಿಗಳಿದ್ದಾರೆ. 1958ರಿಂದ ಅವರು ತಮ್ಮ ಕೋರಿಕೆಗಳನ್ನು ಮಂಡಿಸುತ್ತಲೇ ಇದ್ದಾರೆ. ಆದರೆ ಸರ್ಕಾರ ಹಣವಿಲ್ಲವೆಂದು ಒಂದೇ ಉತ್ತರವನ್ನು ಹೇಳುತ್ತಿದ್ದಾರೆ. ಒಂದು ಮಾತು ಹೇಳುವುದಾದರೆ, ಹಿಂದೆ ಕೇಂದ್ರಸರ್ಕಾರದವರು ನೇಮಕ ಮಾಡಿದ Das Second Pay Commission ಅವರು ತಮ್ಮ ವರದಿಯಲ್ಲಿ ಸ್ಪಷ್ಟವಾಗಿ ಒಂದು ವಾಕ್ಯ ಹೇಳಿದ್ದಾರೆ, ಅದು ಏನೆಂದರೆ :

> "The State must take some steps forward in the direction of giving effect to the living wage principle in dealing with employees"

ಇವತ್ತಿನ ದಿವಸ ನಾನ್ ಗೆಜೆಟೆಡ್ ಅಧಿಕಾರಿಗಳಿಗೆ ಸರಿಯಾಗಿ ಸಂಬಳ ಅಥವಾ ಪರಮಾನಗಳು ಸಿಕ್ಕದೆ ಅವರು ಜೀವನ ನಿರ್ವಹಣೆ ಮಾಡುವುದು ಬಹಳ ಕಷ್ಟವಾಗಿದೆಯೆಂದು ದಾಸ್ ಕಮೀಷನ್ ಅವರು ಹೇಳಿದ್ದಾರೆ. ಕೇಂದ್ರ ಸರ್ಕಾರದ ನೌಕರರಿಗೂ, ರಾಜ್ಯ ಸರ್ಕಾರದ ನೌಕರರಿಗೂ ಅಲೋ ಯನ್ಸ್ ವಿಚಾರದಲ್ಲಿ ಎಷ್ಟೊಂದು ವ್ಯತ್ಯಾಸವಿದೆಯೆಂದು ಹೇಳುತ್ತೇನೆ :

| | | |
|---|---|---|
| 90 ರೂಪಾಯಿವರೆಗಿನ ವ್ಯತ್ಯಾಸ | ... | 21 ರೂಪಾಯಿಗಳು |
| 90ರಿಂದ 149ರವರೆಗಿನ ವ್ಯತ್ಯಾಸ | ... | 46 ,, |
| 150ರಿಂದ 209ರವರೆಗಿನ ವ್ಯತ್ಯಾಸ | ... | 43 ,, |
| 210ರಿಂದ 399ರವರೆಗಿನ ವ್ಯತ್ಯಾಸ | ... | 76 ,, |
| 400ರಿಂದ 1000ವರೆಗೆ ವ್ಯತ್ಯಾಸ | ... | 67ರಿಂದ 190ರವರೆಗೆ. |

ಬೆಂಗಳೂರಿನಲ್ಲಿ ಕೆಲಸಮಾಡುವ ಕೇಂದ್ರ ಸರ್ಕಾರದ ನೌಕರರಿಗೂ ರಾಜ್ಯ ಸರ್ಕಾರದ ನೌಕರರಿಗೂ ಕೇವಲ ತುಟ್ಟಿಭತ್ಯ, ಮನೆ ಭತ್ಯದಲ್ಲಿರುವ ವ್ಯತ್ಯಾಸ 21ರಿಂದ 190ರವರೆಗೆ ಇದೆ. ಸಂಬಳ ಹೋಗಲಿ, ತುಟ್ಟಿಭತ್ಯೆಯಲ್ಲಿ ಏಕೆ ಇಷ್ಟು ವ್ಯತ್ಯಾಸವಿರಬೇಕು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆಂಧ್ರದಲ್ಲಿ ಎಷ್ಟು ?

ಶ್ರೀ ಸಂಜೀವನಾಥ ಐಕಳ.—ಅಲ್ಲಿಯ ಅಂಕಿಸಂಖ್ಯೆ ನನ್ನ ಹತ್ತಿರ ಇಲ್ಲ. ಅಲ್ಲದೆ, ಇದು ಆಂಧ್ರದ ಪ್ರಶ್ನೆಯಲ್ಲ; ಕೇರಳದ ಪ್ರಶ್ನೆಯಲ್ಲ, ನಮ್ಮ ನೌಕರರಿಗೆ ದಿನಬಳಕೆಗೆ ಬೇಕಾಗುವ ಪದಾರ್ಥಗಳನ್ನು ಪಡೆಯಲು ಅಗತ್ಯವಾದ ತುಟ್ಟಿಭತ್ಯವನ್ನು ಸರಿಯಾಗಿ ಕೊಡುವುದಿಲ್ಲವೆಂದು ಹೇಳುತ್ತೇನೆ. ಆಂಧ್ರದಲ್ಲಿ ಅಕ್ಕಿ ಕ್ವಿಂಟಾಲ್‌ಗೆ 85 ರೂಪಾಯಿಗಳು ಇವೆ. ಆದರೆ ನಮ್ಮ ದೇಶದಲ್ಲಿ 175 ರೂಪಾಯಿಗಳು ಇದೆ. ಇದನ್ನು ಮಾನ್ಯ ಮಂತ್ರಿಗಳು ಒಪ್ಪಬೇಕು. ಆದ್ದರಿಂದ ಅಲ್ಲಿ ಸಂಬಳ ಕಡಮೆಯಿದ್ದರೂ ಪರವಾಗಿಲ್ಲ. ನಾನ್ ಗೆಜಿಟೆಡ್ ನೌಕರರ ತುಟ್ಟಿಭತ್ಯದ ಮಟ್ಟಿಗೆ ವ್ಯತ್ಯಾಸವೇನಿದೆ ಅದನ್ನು ಸರಿಪಡಿಸಬೇಕು. ಒಂದೇ ಸಲ ಹೆಚ್ಚು ಮಾಡಬೇಕೆಂದು ನಾನು ಹೇಳುವುದಿಲ್ಲ. ಅಲ್ಲದೆ ಈ ನಾನ್ ಗೆಜಿಟೆಡ್ ಅಧಿಕಾರಿಗಳು ಕೇಂದ್ರ ಸರ್ಕಾರದ ನೌಕರರಂತೆ ಅರ್ಧ ಘಂಟೆ ಹೆಚ್ಚು ಕೆಲಸಮಾಡಲು ನಾನು ಹೇಳುತ್ತೇನೆ. ಬೇರೆ ಬೇರೆ ಇಲಾಖೆಯಲ್ಲಿ ನಾನ್ ಗೆಜಿಟೆಡ್ ನೌಕರರು ಹೆಚ್ಚು ಇದ್ದಾರೆ ಅವರನ್ನು ತೆಗೆಯುವುದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಕೇಂದ್ರಸರ್ಕಾರದ ರೀತಿಯಲ್ಲಿ ಇವರಿಗೆ ಭತ್ಯವನ್ನು ಕೊಡಬೇಕೆಂದು ಮತ್ತು ಒಂದು ಗೇ ಕಮಿಷನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಒಂದು ಅನಾಮಲಿ ಇದೆ. ಒಂದೇ ಆಫೀಸ್‌ನಲ್ಲಿ ಕೆಲಸ ಮಾಡುವ, ಒಂದೇ ಟೇಬಲ್‌ನಲ್ಲಿ ಕೆಲಸ ಮಾಡುವ ಹೈದರಾಬಾದ್ ಕಡೆಯಿಂದ ಬಂದ ಒಬ್ಬ ನೌಕರನಿಗೆ 265 ರೂಪಾಯಿ ಸಂಬಳ ಸಿಕ್ಕುತ್ತಿದ್ದರೆ, ಅಷ್ಟೇ ಸರ್ವಿಸ್ ಆಗಿರುವ, ಅದೇ ಕ್ವಾಲಿಫಿಕೇಷನ್‌ಯಿರುವ ನಮ್ಮ ರಾಜ್ಯದ ನೌಕರನಿಗೆ 165 ರೂಪಾಯಿ ಸಂಬಳ ಸಿಕ್ಕುತ್ತದೆ. ಹೀಗೆ ಎಷ್ಟೋ ಅನಾಮಲಿಗಳು ಇವೆಯೆಂದು ನಾನು ಕಳಕಳಿಯಿಂದ ವಿನಂತಿಸುತ್ತೇನೆ. ಅದಕ್ಕೋಸ್ಕರ ಒಂದು ಪೇಕಮಿಷನ್ ನೇಮಕ ಮಾಡಿ, ಇದನ್ನೆಲ್ಲಾ ಅವರಿಗೆ ಒಪ್ಪಿಸಿ. ಅದರಲ್ಲಿ 3 ಕಡೆಯ ಪ್ರತಿನಿಧಿಗಳು ಇರಲಿ, ಆ ಕಮೀಷನರ್ ಅವರು ಯೋಗ್ಯ ರೀತಿಯಲ್ಲಿ ಇದನ್ನು ನಿರ್ಧರಿಸಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**Sri G. V. GOWDA** (Palya).—Mr. Speaker, Sir, the annual financial statement that is presented to us indicates in my opinion a total failure so far as third five-year plan schemes are concerned. The financial position of the State has become more gloomy and disappointing than ever. I am not without reason to make that statement. In fact, the hopes and aspirations of the people have received the greatest blow and I expected that our Finance Minister being young and energetic would probe into the exact causes that have led to this financial crisis that we are facing today. When the Government formulated the third plan schemes, they over-estimated things, and they did not have a realistic approach of the things existing then. I would like to quote one or two incidents which would justify how these things have been responsible for the financial crisis that we are facing today. They estimated the revenue surplus at Rs. 9.8 crores during the third plan period and they took into account that surplus money to implement the plan schemes. They wanted to take Rs. 15 crores out of the reserve. The Government had at the time nearly Rs. 30 crores in reserves. So far as the revenue surplus anticipated was concerned, there was not only no surplus but it resulted in deficit of Rs. 18 crores for these 5 years and not only they withdrew Rs. 15 crores from the reserves but they withdrew everything available in the reserves and also from other sources like the ways and means advances and over-drafts. This is because they did not estimate things properly. When they presented our case before the Third Finance Commission if they had shown our real position showing the receipts and the committed expenditure, then naturally that gap would have been filled up by the Third Finance Commission. That was the greatest handicap that the Government faced at the time when representation to the Finance

Commission was made because under article 275 (1) of the Constitution, the Finance Commission are obliged to recommend whatever gap is there between the revenue receipts and the revenue expenditure for non-plan expenditure will be filled up. If they had represented that there would be so much revenue *minus*, that the revenue would be so much and the expenditure would be so much during the third plan, naturally all that gap would have been filled and instead of our getting only Rs. 6.75 crores per year or Rs. 33.75 crores for the entire third plan by way of grant under article 275 (1), we would have got Rs. 100 crores which means we would not have been required to face this financial crisis which we are now facing. Who is to be blamed for this over-estimating and not properly anticipating things near to reality, but far from reality ? All this has led to this financial crisis.

Then, we have been urging upon Government all these years to effect economy in expenditure, but that has not been done. No steps have been taken to avoid wasteful expenditure and also no steps are taken to prevent infructuous expenditure. There are hundreds of instances to show that economy is not being practised and wasteful expenditure is incurred. The consolidated effect of all these things has led to this financial crisis that our State is facing today.

Even before the 4th Finance Commission, our case has not been properly represented. It has been determined by the 4th Finance Commission that the gap between revenue receipts and revenue expenditure is about Rs. 202.52 crores. We are entitled to receive our share from excise duties, income tax, etc. Excluding that they have allotted Rs. 90 crores and odd by way of grant under article 275 (1). If our Government had properly calculated and really placed before them all the commitments during the fourth plan, naturally all those would have been taken into consideration by the 4th Finance Commission. I do not know why that was not done by the Government. I would like to state one or two things which would show that we have not been able to get as much money as we should have got for the 4th plan schemes because the Government have not been able to take firm decisions so far as our finances are concerned. The Government issued a G.O. in July last enhancing the dearness allowance of Government employees and employees of aided and local board institutions costing Government during the 4th plan over Rs. 11.76 crores. Unfortunately, this has not been taken into consideration by the 4th Finance Commission. The Finance Commission people have said that these demands of the States were not always supported by firm decisions incorporated in orders which commit the Government to liability on that account. As a consequence of this, we could not get any grant from the 4th Finance Commission on this account. The 4th Finance Commission had also recommended that if the proposals of the State Governments matured into firm commitments before the issueissue of the necessary order by the President under aatscle 275 of the Constitution then the requirements of the States in respect of those commitments might also be taken into account by the President in determining the amount to be granted under article 275. If our

(SRI G. V. GOWDA)

Government had taken firm decisions and passed the necessary orders in time and communicated them, then this sum of Rs. 14.76 crores under the head of dearness allowance during the 4th plan would have been included in the award and we would have been helped. Further, our Government have also not taken this up with the Union Government saying that this is their additional liability during the 4th plan and they should be given additional grants on this account.

Then they had provided for the sinking fund. They had provided for only Rs. 15 crores as a token while other States had provided much more, namely their exact requirements. Our Finance Minister says that during the 4th plan period, repayment may be of the order of Rs. 100 crores, but unfortunately they have made provision for only Rs. 15 crores and only that much has been taken into account by the 4th Finance Commission. If the actual requirement of Rs. 100 crores had been told to them, then naturally these Rs. 100 crores would have been taken into account by them and to that extent we would have been given more grant. Not only that, this repayment has now to be made out of the revenue receipts. So at the rate of Rs. 3 crores per year for 5 years we will have to meet this Rs. 15 crores from the revenue receipts. What our Government should have done was to show the actual sum of Rs. 100 crores as repayment of loan in their memorandum to the 4th Finance Commission. Instead, they have shown only a token sum of Rs. 15 crores with the result that we have not got Rs. 85 crores which we would have otherwise got had we shown the full amount of Rs. 100 crores. In fact, one of the members of the Finance Commission Sri Mohanlal Gautam has referred to this in his dissenting note. He has also recommended for the inclusion of the sum of Rs. 14.76 crores additional expenditure towards enhancement of the dearness allowance. As regards the sinking fund, he says that whereas States like Gujarat, Maharashtra and West Bengal have made full provision for sinking fund, other States like Andhra, Mysore and Rajasthan have made only token provision for debt repayment. I recommend that we should take into account the amounts that can enable the States to make full provision for sinking fund for market loans for these States also." If really Rs. 100 crores had been provided for repayment of the loans, that should have gone to the expenditure side. To that extent, the Finance Commission would have made its recommendation and we would have got it. Even now it is not late if our Government makes a realistic approach and convinces the Government of India that this is the state affairs. Otherwise, the crisis will continue till the end of the Fourth Plan. One of the reasons I submitted was the improper way in which estimates are made. Our revenue receipts must be nearer to reality; they are only imaginary in every year of the Third Plan. So far as the coming financial year is concerned, the revenue receipts would be to the extent of Rs 156.53 crores. In 1965-66, the revised estimate was Rs. 120 crores. If we are

able to raise Rs. 35 crores more in one year, we should be thankful to the Government. Is it possible to have 25 per cent increase in the revenue receipts? It would be impossible; it only shows it is an imaginary figure and not a real one.

If we see the trend of increase in the taxes, so far as the direct taxes are concerned, from 1960-61 to 1966-67, it has increased by 50 per cent. So far as indirect taxes are concerned, during the same period, it has increased by 145 per cent. The percentage increase in tax revenue from 1960-61 to 1966-67 is more than 100 per cent. When we see the enormous percentage of increase in the tax revenue, the non-tax revenue is more or less nil. For the year 1960-61 to 1963-64 the net revenues from industrial concerns is on the *minus* side; for 1964-65, it is *minus* 37 lakhs and for the current year it is *plus* 87.47 lakhs. I do not know how all of a sudden, the Finance Minister can get nearly Rs. 110 lakhs. Our revenue from the 'Forest' is on the decline. So, the overall picture of non-tax revenue is not appreciable to any extent because it goes on declining. There is a vast difference between the growth of non-tax revenne and the growth of tax revenue. With the increase in the tax revenue, have we conferred corresponding benefit on the people? No.

Speaking of the Fourth Plan, it is said that the tentative outlay is Rs. 537 crores, and the Government of Mysore hopes that the Government of India and the Planning Commission will agree to it. This House has had no opportunity to dicuss the principles of the Fourth Plan and the various schemes included in it. Should they confine themselves to Rs. 537 crores? In fact, an expert body which conducted a techno-economic survey says that in order to accelerate the economic growth of Mysore State, there is need to spend Rs. 1,000 crores over a during one plan period. If that is not done, they say it is very likely that the rural economy cannot catch up with the economic growth elesewhere in the Country. That being the case our Government should have pressed for an outlay of 800 crores on the ground that our area is more, that our area is more backward, that we have more problems on account of integration, etc., it would not have been impossible. Why should the Government fight shy of fighting with the Planning Commission and the Government of India when there is a good case for a bigger outlay for our State in view of all these factors. We have provided Rs. 35 crores for Industries in the Fourth Plan. What can we do with that; can we achieve anything? Mr. Hegde and others were saying that we have got enormous power, but we require Rs. 100 crores to equip ourselves to utilise that power. We would require Rs. 800 crores of investment in industries in order to be able to utilise that power. Such being the case, with Rs. 35 crores is it possible to utilise that power; it is a mearge sum. The Finance Minister says that 36 projects which have been taken up have not been completed and that Government proposes to take up 28 projects. All this would cost Rs. 370 crores. He, however, says unfortunately that Rs. 80 crores is

(SRI G. V. GOWDA)

enough so far as the Fourth Plan is concerned for Major and Medium irrigation projects. We do not know how the Finance Minister says that.

MR. SPEAKER.—Time allotted is over. If Sri G. V. Gowda wants more time, he may kindly request the Whip to give more time. If the House agrees, I have no objection.

HON'BLE MEMBERS.—Yes.

SRI G. V. GOWDA.—So far as the annual outlay is concerned, there is no material change in the State. There will be no much progress in production side due to this. The Government of India have not given more than 3 per cent when compared with other States. We are too backward. 1½ crores for Harangi, Kambadakada, etc., has been given. It is not enough to tackle even the establishment and there will be no tangible results. Unless you provide more money you cannot achieve any progress. Only Rs. 86·50 crores have been given for major and medium irrigation for all the five years. If any tangible progress is to be achieved at least Rs. 130 crores are required for these major and medium irrigation projects. So far as Agricultural programmes including Co-operation are concerned Rs. 17.42 crores have been allotted. So far as power is concerned, Rs. 1 crore may be cut down. The money that have been allotted are not at all sufficient. The basis on which they have allotted money is not correct. They could have taken into consideration the whole picture of our requirements. So far as the agricultural aspect is concerned, I am sorry to tell that most of our rural masses do not know the existence of the Officers in the Agricultural Department. What is the use of spending on that. There are about 1750 Gramsevaks. What si the real work that has turned out by these people ? Are there any concrete results achievd ? As I have already stated, there are incomplete works. They have to be completed. Therefore, I am in favour of bigger outlay to complete the incomplete works and also to carry on the works on hand. The Debt position of the State is alarming. He has not taken into consideration Rs. 25 crores to be repaid during the third plan and ultimately Rs. 52 crores are shown as the total repayment to the Centre during the third plan. Besides this, there is indiscriminate borrowing. This is one of the causes for inflation. The Government have not taken any steps to improve this debt position. The over draft position in the Bank is increasing year after year. The contention was that the Government have to borrow and invest on projects. The Government have not invested most of the money on productive works. They have invested on unproductive works like roads and bridges. That does not mean such works should not be taken. Therefore, my suggestion is that unless we have bigger outlay determined it is impossible to have the productive schemes implemented. Much money is being spent on unproductive works. It should be limited. Stringent measures should be taken to

liberalise the terms and conditions and see that more funds are allotted to productive schemes. But nothing is done in this direction. The Prime Minister of India has agreed that Upper Krishna is a very big project and it has got to be done. But no fruitful action has been taken by our Government to put the scheme into operation. They will simply go to Delhi and come back. For Nagarjuna Sagar, nearly 20 to 25 crores of rupees have been given. Bakra Nangal Project was given preference. Why the Centre is discriminating I cannot understand. Our Ministers should go and convince them. We are justified in asking for more funds for Upper Krishna, Kalinadi, etc. We have got many more incomplete works to be completed. So far as Hogainkal project is concerned, I have read in press and heard from a member of Planning Commission, that the project is going to be given clearance. If it is so, our land will be submerged. I do not know what alternative suggestion the Government have thought of. They are going to put up huge reservoir which will cover most of our fertile lands for which huge compensation has to be given. I do not know what our Government is going to do in this matter. I do not know whether they have got any alternative suggestion before them if this project is implemented by Madras Government.

The Finance Commission is laying emphasis on the State Government that there must be efficiency in the administration. As far as possible, administrative expenditure has got to come down. Here

Government have also provided money for the construction of court buildings, for the construction of a house at Delhi, for unproductive purposes. Before starting fresh courts or offices, we must see whether there is sufficient work-load. Where is the need for establishing new District Courts at Chikmagalur and a few other places. Government have sanctioned establishment of courts in places where there is no sufficient work-load. What is the amount involved for all these things? All these new courts and buildings could have been postponed to a later date. First and foremost, we must divert attention for the basic needs of the people. It is said in the Budget of 1966–67 that there will be a surplus of Rs. 2.53 crores. I do not know how our Hon'ble Finance Minister has got a surplus budget. There is a surplus because he has not provided for drinking water which is the basic need of the rural people. He has also not taken into account the expenditure involved on account of the flat increase of Dearness Allowance by Rs. 5. He has not taken into account these items of expenditure while formulating the Budget. If these are taken into consideration, there will be an additional expenditure of Rs. 7½ crores. Had these been taken into consideration, naturally it cannot be a surplus budget. Therefore, nobody can appreciate this surplus. Unless we take stringent measures to effect economy and postpone unproductive works, it is impossible to find money for the basic needs required for the rural population. Government should also get higher percentage of Central assistance and have bigger outlay for our plans. With these words, I conclude.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ನಗರ-ಉತ್ತರ).—ಸಭಾಪತಿಯವರೇ, 1966-67ನೆ ಸಾಲಿನ ಬಜೆಟ್ ಬಗ್ಗೆ ಮಾತನಾಡುತ್ತ ನಾನು ಅದನ್ನು ವಿರೋಧಿಸಬೇಕಾಗಿದೆ. ಕಾರಣವೇನೆಂದರೆ ಇಂಡಿಯಾ ಸರ್ಕಾರದ ಗ್ರ್ಯಾಂಟ್-ಇನ್-ಏಡ್ ಮೇಲೆ ನಿಂತಿರುವ ರೀತಿಯಲ್ಲಿ ಈ ಬಜೆಟ್ ತಯಾರಾಗಿದೆ ಎಂದು ನಾನಾದರೂ ಭಾವಿಸುತ್ತೇನೆ. ಕಳೆದ ಸಾರಿ 21 ಕೋಟಿ 11 ಲಕ್ಷ ರೂಪಾಯಿಗಳನ್ನು ಪಡೆದು ಈ ಸಾರಿ 47 ಕೋಟಿ 44 ಲಕ್ಷ ರೂಪಾಯಿ ಬರುತ್ತದೆ ಎನ್ನುವ ಅಂದಾಜಿನ ಮೇಲೆ ಬಜೆಟ್ಟನ್ನು ತಯಾರು ಮಾಡಿದ್ದಾರೆ. ನಮ್ಮ ಹಣಕಾಸಿನ ಮಂತ್ರಿಗಳು ಆಶಾವಾದಿಗಳು ಎಂದು ನಾನು ಭಾವಿಸಿದರೂ, ಕೇಂದ್ರದಿಂದ ಎಷ್ಟು ಬರುತ್ತದೆ ಎಂದು ನಂಬಿದ್ದಾರೆಯೋ ಅಷ್ಟು ಬರುತ್ತದೆಯೋ ಇಲ್ಲವೋ ಎಂದು ಸ್ವಲ್ಪ ಅನುಮಾನವಾಗಿದೆ.

ಇನ್ನೊಂದು ಕಡೆ ಮಾನ್ಯ ಮಂತ್ರಿಗಳು ಹೇಳುತ್ತಾರೆ, ಕಳೆದ ಸಾರಿ ಹಣಕಾಸಿನ ಪರಿಸ್ಥಿತಿ ಚೆನ್ನಾಗಿರಲಿಲ್ಲ, ಈ ಸಾರಿ ಚೆನ್ನಾಗಿ ಆಗುತ್ತದೆ ಎಂದು ಹೇಳಿದಾರೆ. ನಿಜವಾಗಿಯೂ ಇದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಇದು ನಿಜಕ್ಕೆ ದೂರವಾದ ಮಾತು ಎಂದು ನಾನು ಹೇಳಬೇಕಾಗಿದೆ. ನಮಗೆ ಈಗಾಗಲೇ ಸುಮಾರು 196 ಕೋಟಿ ರೂಪಾಯಿ ಸಾಲ ಇಂಡಿಯಾ ಸರ್ಕಾರಕ್ಕೆ ಕೊಡುವುದಿದೆ. ಜೊತೆಗೆ 72 ಕೋಟಿ ರೂಪಾಯಿಗಳನ್ನು ಹೊರಗಡೆಯವರಿಗೆ ಕೊಡಬೇಕಾಗಿದೆ. Over draft ಕೂಡ ಇದೆ ಇದೂ ಅಲ್ಲದೆ ಹಣಕಾಸಿನ ಪರಿಸ್ಥಿತಿ ಯಾವ ರೀತಿಯಲ್ಲಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಸ್ವಲ್ಪ ಅರಿವು ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರದಿಂದ ಬರುವ ಸಹಾಯ ಧನವನ್ನು ಅವಲಂಬಿಸಿ ಸರ್ಕಾರ ಕೆಲಸ ಮಾಡಬೇಕಾಗಿದ್ದು, 290 ಕೋಟಿ ರೂಪಾಯಿಗಳವರೆಗೂ ಸಾಲವಿದ್ದು, ನಮ್ಮ ಹಣಕಾಸಿನ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಮಾನ್ಯ ಸಚಿವರು ಹೇಳತಕ್ಕ ಮಾತು ಸತ್ಯಕ್ಕೆ ದೂರವಾದುದು ಮತ್ತು ಸಾಲವನ್ನು ಹಿಂದಕ್ಕೆ ಕೊಡುವ ಸ್ಥಿತಿಯಲ್ಲಿದ್ದೇವೆಯೇ ಎಂದು ಆಲೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ಹೇಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ 196 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಅದೆಲ್ಲವೂ ಕೂಡ ಮೇಜರ್ ಇರಿಗೇಷನ್ ಮತ್ತು ದೇಶದ ಅಭಿವೃದ್ಧಿಗಾಗಿ ತೆಗೆದುಕೊಂಡಿರುವ ಸಾಲ ಎಂದು ಹೇಳುತ್ತಾರೆ. ಇದರಲ್ಲಿ ಎಷ್ಟು ಭಾಗ ನೇರವಾಗಿ ದೇಶದ ಅಭಿವೃದ್ಧಿಗೆ ಖರ್ಚಾಗಿದೆ ಎಂದು ಕೇಳಬೇಕಾಗುತ್ತದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮಲ್ಲಿದ್ದ 30 ಕೋಟಿ ರೂಪಾಯಿ ಹೆಚ್ಚಿಗೆ ಇದ್ದ ಹಣವನ್ನು ಖರ್ಚು ಮಾಡಿ ಇವತ್ತಿನವರೆಗೂ 330 ಕೋಟಿ ರೂಪಾಯಿಗಳನ್ನು ಸಾಲ ಮಾಡಿ ಪ್ರತಿ ವರ್ಷ ಬಂದಿರುವ ಹಣವನ್ನೆಲ್ಲ ಉಪಯೋಗಿಸಿದರೂ ಕೂಡ ನಮ್ಮ ದೇಶದ ಹಣಕಾಸಿನ ಸ್ಥಿತಿ ಸ್ವಲ್ಪವಾದರೂ ಮುಂದುವರೆದಿಲ್ಲ ಚೆನ್ನಾಗಿಲ್ಲ ಎನ್ನುವುದಕ್ಕೆ ಬೇಕಾದಷ್ಟು ಕಾರಣಗಳನ್ನು ಅರ್ಥ ಸಚಿವರು ಅವರ ರಿಪೋರ್ಟಿನಲ್ಲಿಯೇ ಒಪ್ಪಿಕೊಂಡಿದ್ದಾರೆ. ಕೆಲವು ವಿಷಯಗಳಲ್ಲಿ ನಿಜಸ್ಥಿತಿಯನ್ನು ಕೂಡ ಹೇಳಿದ್ದಾರೆ. ಹಾಗೆ ಹೇಳಿದರೂ ಕೂಡ ಸಮರ್ಥನೆ ಮಾಡದೆ ಇರುವ ಮಟ್ಟದಲ್ಲಿ ಹೇಳಿರುವುದಕ್ಕೆ ವಿಷಾದ ಪಡುತ್ತೇನೆ.

ಪರಿಸ್ಥಿತಿ ಹೀಗಿರುವಾಗ, ನಾವು ಸಾಲವನ್ನು ಹಿಂದಕ್ಕೆ ಕೊಡುವಂಥ ಸ್ಥಿತಿಯಲ್ಲಿ ಇಲ್ಲದೆ ಇರುವಾಗ ನಾಲ್ಕನೆಯ ಯೋಜನೆಯನ್ನು ಬಹು ದೊಡ್ಡ ಗಾತ್ರದಲ್ಲಿ ಮಾಡಿದ್ದಾರೆ. ಅದರಲ್ಲಿಯೂ ಕೂಡ ವಿವೇಚನೆಯನ್ನು ಉಪಯೋಗಿಸುತ್ತಿಲ್ಲ ಎಂದು ಮುನ್ನೆಚ್ಚರಿಕೆಯಿಂದ ಹೇಳಬಯಸುತ್ತೇನೆ. ನಮ್ಮ ಅಕ್ಕಪಕ್ಕದ ರಾಜ್ಯಗಳು ನೀರಾವರಿಯಲ್ಲಿ ಬಹಳ ಮುಂದುವರೆದಿವೆ. ನಾವಾದರೂ ಕೂಡ ನಾಲ್ಕನೆಯ ಯೋಜನೆಯಲ್ಲಿ ನೀರಾವರಿ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿಲ್ಲ ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಪಣಂ ಬೇಕು. ಸಾಲ ತರದೆ ಇದ್ದರೆ ಹೇಗೆ ಈ ಕೆಲಸಗಳನ್ನು ಮಾಡುವುದು ?

ಶ್ರೀ ಬಿ. ಕೆ. ಪುಟ್ಟಯ್ಯ.—ಸ್ವಾಮಿ, ಪಣಂ ಎಂದು ಹೇಳುತ್ತೀರ, ನಿಜ, ಹಣ ಬೇಕು. ಸ್ವಾಮಿ ಎಂಟು ದಿವಸಗಳಲ್ಲಿ ಹತ್ತು ಕೋಟಿ ರೂಪಾಯಿ ವರಮಾನ ಬರುವ ಬಾಬುಗಳನ್ನು ಮಂಜೂರು ಮಾಡಿಸಿಕೊಂಡಿದ್ದೀರಿ. ಅಂಥ ಆಸಕ್ತಿ ಉಳ್ಳವರು ದೇಶದ ಅಭಿವೃದ್ಧಿ ಬಗ್ಗೆ ಏಕೆ ಗಮನವನ್ನು ಹರಿಸಲಿಲ್ಲ ಎಂದು ಕೇಳಬೇಕಾಗುತ್ತದೆ. ಬಹು ಭಾಗದ ದುಡ್ಡು ಎಲ್ಲಿ ವ್ಯಯವಾಗುತ್ತದೆ ಎನ್ನುವುದರ ಕಡೆ ಏಕೆ ದೃಷ್ಟಿ ಹರಿಸಲಿಲ್ಲ ಎಂದು ಕೇಳಬೇಕಾಗುತ್ತದೆ ನೀವು ಉತ್ಸಾಹವನ್ನು ಯಾವ ಕಡೆ ತೋರಿಸಿದ್ದೀರಿ ಎಂದರೆ ಟ್ಯಾಕ್ಸ್ ಹಾಕಬೇಕು, ರಿಸೋರ್ಸಸ್ ಜಾಸ್ತಿ ಮಾಡಬೇಕು, ಒಂದಲ್ಲ ಒಂದು ರೀತಿಯಲ್ಲಿ ಹಣವನ್ನು ಹೆಚ್ಚು ಪಡೆಯಬೇಕು ಎನ್ನುವುದರಲ್ಲಿ ಆಸಕ್ತರಾಗಿದ್ದೀರಿ. ದೇಶದ ಅಭಿವೃದ್ಧಿಗೆ ಹಣ ಬೇಕು. ಆದರೆ ಯಾವ ರೀತಿಯಲ್ಲಿ ಖರ್ಚಾಗುತ್ತದೆ ಎನ್ನುವ ದೃಷ್ಟಿಯಿಂದಲೂ ಕೂಡ ಬಹಳ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ನಮ್ಮ ಮುಂದೆ ಅಂಕಿ ಅಂಶಗಳನ್ನು ಇಡುವುದರಲ್ಲಿ ಬಹಳ ಹುಷಾರಾಗಿ ಇಟ್ಟಿದ್ದಾರೆ. ಆದರೆ ಖರ್ಚಿನ ಭಾಗದಲ್ಲಿ ಅಷ್ಟೊಂದು ಗಮನ ಕೊಟ್ಟಿಲ್ಲ.

ನಮ್ಮ ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ವಿನಿಯೋಗಿಸಲು ಎಲ್ಲಿಯವರೆಗೆ ನಮ್ಮಲ್ಲಿ ಹಣವಿಲ್ಲವೋ ಅಲ್ಲಿಯವರೆಗೂ ದೇಶ ಅಭಿವೃದ್ಧಿಯಾಗುವುದಿಲ್ಲ. ಎಷ್ಟೋ ಸಾರಿ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವಾಗ ನೋಡಿದ್ದೇವೆ. ಸೇಕಡ 30 ರಷ್ಟು ಸಿಬ್ಬಂದಿ ವೆಚ್ಚ ಜಾಸ್ತಿಯಾಗಿದೆ ಎಂದು ಹೇಳುತ್ತಾರೆ. ಕೆಲವು ಕಡೆ ಟೆಂಪೊರರಿ ಎಸ್ಟಾಬ್ಲಿಷಮೆಂಟ್ ಎಂದು ತೋರಿಸಿರುತ್ತಾರೆ. ಎಷ್ಟು ವರ್ಷಗಳವರೆಗೆ ಇದನ್ನು ಮುಂದುವರಿಸಿಕೊಂಡು ಹೋಗುತ್ತಾರೆಯೊ ಗೊತ್ತಿಲ್ಲ. ಎಷ್ಟೋ ವರ್ಷ ಕೆಲಸ ಮಾಡಿದರೂ ಸಹ ಟೆಂಪೊರರಿಯಾಗಿರಬೇಕೆ ? 10 ವರ್ಷ, 20 ವರ್ಷ, 25 ವರ್ಷ, ಕೆಲಸ ಮಾಡಿದ್ದರೂ ಟೆಂಪೊರರಿಯಾಗಿರುವವರ ಗತಿ ಏನು ? ಇಂಥವರ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು. ಸುಮ್ಮನೆ ಕಾಲ ಕಳೆಯುವುದರಿಂದ ಏನೂ ಸುಖವಿಲ್ಲ, ಅದು ಸಾಧುವಾದುದಲ್ಲ. ಈ ಬಗ್ಗೆ ಸರ್ಕಾರ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಾಲ್ಕನೆಯ ಯೋಜನೆಯಲ್ಲಿ ಸುಮಾರು 530 ಕೋಟಿ ರೂಪಾಯಿ ಬೇಕಾಗುತ್ತದೆಂದು ತಯಾರಿಸಿದ್ದಾರೆ. ಆದರೆ ನಾನು ಹೇಳಿದ ಹಾಗೆ ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗೆ ಕೇವಲ 86 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಸಾಕಾಗುತ್ತದೆಯೇ ? ಹೀಗಾದರೆ ನಮ್ಮ ದೇಶದ ನೀರಾವರಿ ಕೆಲಸಗಳು ಯಾವ ಸ್ಥಿತಿಯಲ್ಲಿರುತ್ತವೆ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು.

5-30 P.M.

ಇನ್ನು ಈಗ ನಮ್ಮ ನೆರೆ ರಾಜ್ಯಗಳನ್ನು ತೆಗೆದುಕೊಂಡು ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ನೆರೆ ರಾಜ್ಯಗಳಾದ ಮದ್ರಾಸ್‌ನಲ್ಲಿ, ಆಂಧ್ರದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿ ಎಷ್ಟೊಂದು ನೀರಾವರಿ ಯೋಜನೆಗಳಿವೆಯೆಂದು ಇವರು ಬಾಯಿನಲ್ಲಿ ಹೇಳುತ್ತಾರೆಯೇ ಹೊರತು ಅದರ ಬಗ್ಗೆ ಇವರು ಮಾಡಿರುವ ಕಾರ್ಯಗಳೇನು ಎಂಬುದನ್ನು ನಮಗೆ ಹೇಳಲಿಲ್ಲ. ನಮಗೂ, ಮದ್ರಾಸಿಗೂ, ಆಂಧ್ರಕ್ಕೂ ಎಷ್ಟೋ ದೂರವಿದೆ. ಈ ಬಾಬಿಗೆ ಇವರು ಈ ನಾಲ್ಕನೇ ಪಂಚವಾರ್ಷಿಕ ಯೋಜನೆಗೆ 86 ಕೋಟಿ ರೂಪಾಯಿಗಳು ಎಂದು ಹಾಕಿ ಕೊಂಡರೆ ವರ್ಷಕ್ಕೆ ಕೇವಲ 20 ಕೋಟಿ ರೂಪಾಯಿಗಳೂ ಸಹ ಆಗುವುದಿಲ್ಲ. ಸುಮಾರು 18-19 ಕೋಟಿ ರೂಪಾಯಿಗಳು ಮಾತ್ರ ಆಗುತ್ತದೆ. ಅಷ್ಟು ಅಲ್ಪ ಮೊಬಲಗಿನಲ್ಲಿ ನೀರಾವರಿ ಸೌಕರ್ಯವನ್ನು ಮುಂದುವರಿಸುವುದಕ್ಕೆ ಸಾಧ್ಯವೇ ? ಅದರ ಬಗ್ಗೆ ಸರ್ಕಾರದವರು ಕೂಡಲೇ ಆಸಕ್ತಿ ವಹಿಸಿ ಈಗ ಒದಗಿಸಿರುವ ಹಣವನ್ನು ರಿವೈಜ್ ಮಾಡಬೇಕು. ದೇಶದಲ್ಲಿ ಆಹಾರದ ಪರಿಸ್ಥಿತಿಯನ್ನು ಏಕೆ ಸುಧಾರಿಸಲಿಲ್ಲ ? ಆ ವಿಷಯವನ್ನು ಇವರೂ ಕೂಡ ಆಲೋಚನೆ ಮಾಡುತ್ತಿದ್ದಾರೆ. ಈಗಲೂ ಸಾಲದು, ನಾವೂ ಸಹ ಹಾಗೆಯೇ ಯೋಚನೆ ಮಾಡಬೇಕಾಗಿದೆ. ಈ ಒಂದು ಪರಿಸ್ಥಿತಿಯಿಂದ ನಮ್ಮ ದೇಶದಲ್ಲಿ ಆಹಾರ ಕೊರತೆ ಇದೆಯೆಂದು ಗೊತ್ತಾಗುತ್ತದೆ. ನಾವು ಮುಂದಿನ ವರ್ಷಕ್ಕೆ ಮೂರು ಕೋಟಿ ರೂಪಾಯಿಗಳನ್ನು ಬಾವಿಗಳ ಬಾಬಿಗೆ ಎಂದು ಒದಗಿಸಿದ್ದೂ ಮತ್ತು ಕೇವಲ ಒಂದು ಕೋಟಿ ರೂಪಾಯಿಗಳನ್ನು ಸೊಸೈಟಿಗಳ ಮೂಲಕ ರೈತರಿಗೆ ಬಾವಿಗಳಿಗಾಗಿ ಹಂಚಬೇಕೆಂಬ ವ್ಯವಸ್ಥೆಮಾಡಿದರೆ ನಿಜವಾಗಿ ನೇರವಾಗಿ ರೈತರ ಅನುಕೂಲಕ್ಕಾಗಿ ಸಾಕಷ್ಟು ಬಾವಿಗಳು ನಿರ್ಮಾಣವಾಗುತ್ತವೆಯೋ ಎಂದು ನಾನು ಕೇಳುತ್ತೇನೆ. ಇಷ್ಟು ಸ್ವಲ್ಪ ಹಣ ಎಲ್ಲಾ ಕಡೆಯೂ ಬಾವಿಗಾಗಿ ಹೇಗೆ ವಿತರಣೆಯಾಗುತ್ತದೆಂದು ಇವರು ಪರಿಶೀಲನೆ ಮಾಡಬೇಕು. ನಮ್ಮ ದೇಶದ ಆಡಳಿತ ಇತ್ತೀಚೆಗೆ ಬಹಳವಾಗಿ ಹಿಂದೆ ಬಿದ್ದಿದೆ. ಒಂದು ಬಗೆಯಾದ ಆಡಳಿತ ನಾವು ಮಾಡದೇ ಇರುವುದರಿಂದಲೇ ಇಷ್ಟೊಂದು ಆಹಾರ ಕೊರತೆ ನಮ್ಮ ದೇಶದಲ್ಲಿದೆ. ಇನ್ನೊಂದು ಕಡೆ ಕೈಗಾರಿಕೆಗಳ ವಿಷಯವಾಗಿ ಹೇಳಿದ್ದಾರೆ. ಕೈಗಾರಿಕೆಯ ಪ್ರಗತಿ ಕಳೆದ ಸೆಪ್ಟೆಂಬರ್‌ನಿಂದ ಈ ಸೆಪ್ಟೆಂಬರ್‌ವರೆಗೆ ಆಗಿರುವುದನ್ನು ನೋಡಿದರೆ ಅಜಗಜಾಂತರ ವ್ಯತ್ಯಾಸವಿದೆ. ಅದರ ಬಗ್ಗೆ ಯಾವ ರೀತಿ ಆಸಕ್ತಿ ವಹಿಸಿದ್ದಾರೆಂಬುದನ್ನು ಇದರಲ್ಲಿ ಏನೂ ಹೇಳಲಿಲ್ಲ. ಇಂತಹ ಪರಿಸ್ಥಿತಿಯನ್ನು ಎಲ್ಲೋ ಮರೆಮಾಚಿ ಹೇಳಿದ್ದಾರೆ. ಅದನ್ನು ಸುಧಾರಿಸುವುದಕ್ಕೆ ಯಾವ ಅಂಶವನ್ನೂ ಸಹ ಹೇಳಲಿಲ್ಲ. ಆದರೆ ಇವರು ಅಧಿಕಾರದಲ್ಲಿದ್ದು ಏನೇನು ಮಾಡಿದ್ದಾರೆ ಎಂಬುದನ್ನು ವಿಶದವಾಗಿ ಹೇಳಿದ್ದರೆ ಇವರು ನಿಜಾಂಶಕ್ಕೆ ಹೆಚ್ಚಿನ ಗಮನವನ್ನು ಕೊಟ್ಟಿದ್ದಾರೆಂದು ನಾವು ಹೇಳಬಹುದಾಗಿತ್ತು. ನಮ್ಮ ದೇಶದಲ್ಲಿ ವರಮಾನ ತಲೆಗೆ 292 ರೂಪಾಯಿಗಳಾದರೆ ಸುಮಾರು ನೂರು ರೂಪಾಯಿಗಳಷ್ಟು ತೆರಿಗೆಗಾಗಿ ಕೊಡಬೇಕಾಗುತ್ತದೆ. ಆ ತೆರಿಗೆಗಳು ಯಾವುವೆಂದರೆ ಕೇಂದ್ರ ಸರ್ಕಾರದ್ದು, ನಮ್ಮ ಸಂಸ್ಥಾನದ ಹಾಗೂ ಪೌರಸಭೆಗಳ ತೆರಿಗೆ-ಹೀಗೆ ತಲೆ ಒಂದಕ್ಕೆ 100 ರೂಪಾಯಿಗಳಷ್ಟು ತೆರಿಗೆಯೇ ಆಗುತ್ತದೆ. ಉಳಿಕೆ 192 ರೂಪಾಯಿಗಳಲ್ಲಿ ಮನುಷ್ಯನಾದವನು ಯಾವ ರೀತಿ ಜೀವನ ಮಾಡುವುದಕ್ಕೆ ಸಾಧ್ಯವೆಂಬುದನ್ನು ಇವರು ಊಹೆ ಮಾಡಬೇಕು. ಅರ್ಥ ಸಚಿವರಾಗಿ ಇವರು ಆಗಿರುವುದು ಇದೇ ಹೊಸದು. ಕೇವಲ 2-3 ತಿಂಗಳುಗಳಾಗಿರಬಹುದು.

(ಶ್ರೀ ಟಿ. ಕೆ. ಪುಟ್ಟಯ್ಯ)

ಆದರೆ ಮಾನ್ಯ ಹಣಕಾಸಿನ ಸಚಿವರು ನಮ್ಮ ದೇಶದಲ್ಲಿ ಒಳ್ಳೆಯ ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕು. ದೇಶದ ಒಂದು ಕಲ್ಯಾಣ ಅವರ ಕೈಯಲ್ಲಿದೆ. ಅಂತಹ ಒಂದು ಅವಕಾಶವನ್ನು ಅವರು ಜಾಗ್ರತೆಯಾಗಿ ಉಪಯೋಗಿಸಿಕೊಳ್ಳಬೇಕು.

ಇನ್ನೊಂದು ಬಹಳ ವ್ಯಸನಕರವಾದ ವಿಷಯ ಓವರ್‌ಡ್ರಾಫ್ಟ್ ತೆಗೆದುಕೊಳ್ಳತಕ್ಕ ಪರಿಸ್ಥಿತಿ ಇವರಿಗೇಕೆ ಬಂತು ಎಂದು ನಾನು ಕೇಳಬೇಕಾಗಿದೆ. ಏನೋ ವರ್ತಕರು ಸಂಪಾದನೆ ಮಾಡುವ ದೃಷ್ಟಿಯಿಂದ ಅಂತಹ ಓವರ್‌ಡ್ರಾಫ್ಟ್‌ಗಳನ್ನು ತೆಗೆದುಕೊಳ್ಳುವುದೇನೋ ಸತ್ಯ, ಸಹಜ. ಸರ್ಕಾರದ ಆಡಳಿತವನ್ನು ನಡೆಸತಕ್ಕವರು ಇವರು ಈ ರೀತಿಯಾಗಿ ಒ.ಡಿ. ಸಿಸ್ಟಂಗೆ ಬರುವುದು ನಿಜವಾಗಿ ಬಹಳ ಅಪಮಾನಕರ. ಈಗ ಅಂತಹ ಒಂದು ಪರಿಸ್ಥಿತಿಗೆ ಇವರು ಬರಬಾರದು. ಸಾಲ ಬೇಕಾದರೆ ಹೆಚ್ಚಿಸಿಕೊಳ್ಳಲಿ, 10-15 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಸಾಲ ಮಾಡಿಕೊಳ್ಳಲಿ ಒ.ಡಿ. ಸ್ಕೀಮು ತೆಗೆದುಕೊಳ್ಳುವ ಸರ್ಕಾರ ನಿಜವಾಗಿ ಅದು ದಿವಾಳಿ ಸರ್ಕಾರವಾಗುವುದರಲ್ಲಿ ಏನೂ ಸಂದೇಹವಿಲ್ಲ. ರೋಗಿಯಾದವನು ಡಾಕ್ಟರ್ ಹತ್ತಿರ ಹೋಗಿ ತನ್ನ ಕಾಯಿಲೆಯನ್ನು ಯಾವ ರೀತಿ ಪರೀಕ್ಷೆಮಾಡಿಸಿ ಕೊಳ್ಳುತ್ತಾನೋ ಹಾಗೆ ಇವರು ಪಡೆಯತಕ್ಕ ಓ.ಡಿ. ಸ್ಕೀಮಿನ ಬಗ್ಗೆ ಹೆಚ್ಚಿಗೆ ವಿಮರ್ಶೆಮಾಡಿ ಮತ್ತೊಂದು ಸಾರಿ ಒಂದು ಹೈಪವರ್ ಕಮಿಟಿಯವರು ಇವರ ಲೆಕ್ಕಪತ್ರಗಳ ಬಗ್ಗೆ ವಿಚಾರ ಮಾಡುವುದು, ಪರೀಕ್ಷೆ ಮಾಡುವುದು ಅವಶ್ಯಕವಿದೆ. ಈ ಸರ್ಕಾರ ಆ ಮಟ್ಟಕ್ಕೆ ಇಳಿಯಬಾರದು.

ಇನ್ನೊಂದು ವಿಷಯ. ನಮ್ಮಲ್ಲಿರತಕ್ಕ ಸೆಕ್ಯೂರಿಟಿಯನ್ನು ಬೇರೆ ಇವರು ವಿಕ್ರಯ ಮಾಡುತ್ತಿದ್ದಾರೆ. ಈ ಸರ್ಕಾರ ಆ ಒಂದು ಪರಿಸ್ಥಿತಿಗೆ ಇಳಿದರೆ ಇಷ್ಟು ಜನ ಮಂತ್ರಿಗಳು, ಉಪಮಂತ್ರಿಗಳು ಇದ್ದು ಏನು ಪ್ರಯೋಜನವಾಗುತ್ತದೆ? ನಮ್ಮ ಹಣಕಾಸಿನ ವ್ಯವಸ್ಥೆಗೆ ನಿಜವಾಗಿ ಸರಿಯಾದ ಬಂದೋಬಸ್ತು ಆಗಲೇ ಇಲ್ಲವೆಂಬ ಮುಖ್ಯ ಸೂಚನೆ ಚೆನ್ನಾಗಿ ತೋರಿಸುತ್ತದೆ. ಯಾವತ್ತಿಗೇ ಆಗಲೀ ಈ ಸರ್ಕಾರ ಅಂತಹ ಒಂದು ಪರಿಸ್ಥಿತಿಗೆ ಇಳಿಯಬಾರದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಎಸ್ಟಾಬ್ಲಿಷ್‌ಮೆಂಟ್ ಬಗ್ಗೆ ನಾನು ಹೆಚ್ಚಿಗೇನೂ ಹೇಳಬೇಕಾದುದಿಲ್ಲ. ಏಕೆಂದರೆ ಆ ವಿಚಾರ ಅನೇಕ ಸದಸ್ಯರಿಗೆ ಗೊತ್ತಿದೆ. ಈಗ ವಿಪರೀತವಾದ ಸಿಬ್ಬಂದಿ ಇದೆ. ಕೂತುಕೊಂಡು ತಿನ್ನುವ ಜನರು ಬಹಳವಾಗಿದ್ದಾರೆ. ಇದನ್ನು ಸರಿದೂಗಿಸಿದರೆ ಬಹುಶಃ ಆರ್ಥಿಕ ಸ್ಥಿತಿ ಉತ್ತಮಗೊಂಡು ದೇಶಾಭಿವೃದ್ಧಿ ಕಾರ್ಯಗಳು ಯಶಸ್ವಿಯಾಗಿ ನಡೆಯುತ್ತವೆಂದು ನಾನು ಭಾವಿಸಿದ್ದೇನೆ. ಆ ಒಂದು ಕಾರ್ಯವನ್ನು ಸರ್ಕಾರದವರು ತ್ವರಿತವಾಗಿ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸ್ವಾಮಿ, ಈ ದಿವಸ ನಮ್ಮ ಮುಂದಿರತಕ್ಕ ಈ ಆಯವ್ಯಯವನ್ನು ನಾನು ಸ್ವಾಗತ ಮಾಡತಕ್ಕ ಬಗ್ಗೆ ಬಹಳ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿದ್ದೇನೆ. ಮಾನ್ಯ ಅರ್ಥಸಚಿವರು, ವಿರೋಧ ಪಕ್ಷದ ನಾಯಕರು ತಿಳಿಸಿದ ಹಾಗೆ ಅನೇಕ ಕೆಲಸಗಳನ್ನು ಈ ಸರ್ಕಾರದವರು ಮಾಡಿರುವುದನ್ನು ಅವರ ಈ ಒಂದು ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಅಂಕಿಅಂಶಗಳ ಮೂಲಕ ನಿಜಾಂಶವನ್ನು ಈ ಸಭೆಯ ಮುಂದಿಟ್ಟಿದ್ದಾರೆ. ನಾನು ಮಾತ್ರ ಹಣದ ಸ್ಥಿತಿಗತಿಗಳ ಬಗ್ಗೆ ಪೂರ್ಣ ವಿವರಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ವೆಂಕಟೇಗೌಡರು ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ದಿವಸ ನಮ್ಮ ಸೆಕ್ಯೂರಿಟಿಗಳನ್ನು ಮಾರಾಟ ಮಾಡಿ ನಾವು ಏನು ಓವರ್‌ಡ್ರಾಫ್ಟ್ ಇಟ್ಟುಕೊಂಡಿದ್ದೇವೋ ಅದನ್ನು ಕಡಿಮೆ ಮಾಡುವ ಬಗ್ಗೆ ಮಾನ್ಯಮಂತ್ರಿಗಳು ಆಲೋಚನೆ ಮಾಡಿದ್ದಾರೆ. ಇದನ್ನು ನಿಜವಾಗಿ ಸ್ವಾಗತ ಮಾಡುವ ವಿಷಯ. ಇದಕ್ಕೆ ಕಾರಣ ಇಷ್ಟೇ. ನಾವು ಏನು ಓವರ್‌ಡ್ರಾಫ್ಟ್ ಪಡೆದಿದ್ದೇವೋ ಅದರ ಮೇಲೆ ರಿಜರ್ವ್ ಬ್ಯಾಂಕಿಗೆ ಸುಮಾರು ಶೇಕಡ 6ರಷ್ಟು ಬಡ್ಡಿಯನ್ನು ಕೊಡುತ್ತಿದ್ದೇವೆ, ಆದರೆ ನಮ್ಮಲ್ಲಿರತಕ್ಕ ಸೆಕ್ಯೂರಿಟಿಗೆ ನಾನು ಕೇವಲ ಶೇಕಡ 3 ಅಥವಾ 4ರಷ್ಟು ಬಡ್ಡಿಯನ್ನು ಪಡೆಯುತ್ತೇವೆಂದು ನನಗೆ ತಿಳಿದಿರುವ ವಿಚಾರ. ಇಂತಹ ಪರಿಸ್ಥಿತಿಗೊಳಗಾಗಿ ನಾವು ಹೆಚ್ಚಿನ ಬಡ್ಡಿಯನ್ನು ರಿಜರ್ವ್ ಬ್ಯಾಂಕಿಗೆ ಕೊಡುವ ಸಂದರ್ಭವಲ್ಲಿ ನಮ್ಮ ಓವರ್‌ಡ್ರಾಫ್ಟನ್ನು ಕಮ್ಮಿ ಮಾಡತಕ್ಕ ಶಕ್ತಿ ನಮಗಿಲ್ಲದಿದ್ದರೆ ಸೆಕ್ಯೂರಿಟಿಯನ್ನಾದರೂ ಮಾರಿ ನಮ್ಮ ಜವಾಬ್ದಾರಿ ಏನೆಂಬುದನ್ನು ಅರಿತುಕೊಂಡು ಹೆಚ್ಚಿನ ಬಡ್ಡಿ ರೂಪದಲ್ಲಿ ಹಣವನ್ನು ತೆಗೆದುಕೊಂಡು ಬರುವ ಬಗ್ಗೆ ಮಂತ್ರಿಗಳು ಆಲೋಚನೆ ಮಾಡಿರುವುದು ಖಂಡಿತವಾಗಿ ಸ್ವಾಗತಾರ್ಹವಾಗಿದೆ. ಈ ಒಂದು ದೃಷ್ಟಿಕೋಣದಲ್ಲಿ ಮೈಸೂರು ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಆದರೆ ಒಂದು ವಿಷಯವನ್ನು ನಾನು ಕಳಕಳಿಯಿಂದ ಹೇಳಬೇಕಾಗಿದೆ. ಈ ದಿವಸ ಸರ್ಕಾರದವರು ಹಣಕಾಸನ್ನು ಖರ್ಚುಮಾಡುವ ಕಾಲದಲ್ಲಿ ಬಹಳ ಹೆಚ್ಚಿನ ಹಾಗೂ ಬಿಗಿಯಾದಂಥ ಮುಷ್ಟಿಯನ್ನು ಹೊಡಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗು

ತ್ತದೆ. ಈಗ 154 ಕೋಟಿ ರೂಪಾಯಿಗಳನ್ನು ಖರ್ಚುಮಾಡುವ ಬಗ್ಗೆ ಈ ಮಾನ್ಯಸಭೆಯ ಒಪ್ಪಿಗೆಯನ್ನು ಕೇಳುತ್ತಿದ್ದಾರೆ. ಅಮೇರಿಕಾ ದೇಶದ ಅಧ್ಯಕ್ಷರು ಹೇಳಿದ ಒಂದು ವಾಕ್ಯವನ್ನು ನಾನು ಇಲ್ಲಿ ಓದಿ ಹೇಳುತ್ತೇನೆ. ಸಾಮಾನ್ಯವಾಗಿ ಒಬ್ಬ ಮನುಷ್ಯ ಪ್ರತಿಯೊಂದು ಡಾಲರನ್ನು ಸಂಪಾದಿಸಬೇಕಾದರೆ ಎಷ್ಟೋ ಶ್ರಮಪಡಬೇಕಾಗುತ್ತದೆ. ಆದರೆ ಅದನ್ನು ವೆಚ್ಚಮಾಡುವ ಕಾಲದಲ್ಲಿ ಬಹಳ ವಿವೇಕಯುತವಾಗಿ ನಿರ್ಧರಿಸಿ ದೀರ್ಘಾಲೋಚನೆ ಮಾಡಿ ವೆಚ್ಚಮಾಡುತ್ತಾನೆ—ಹೀಗೆ ಅವರು ಜಾಯಿಂಟ್ ಸೆಷನ್ನಿನಲ್ಲಿ ಅಡ್ರೆಸ್ ಮಾಡುವ ಕಾಲದಲ್ಲಿ ಹೇಳಿದ್ದಾರೆ. ಇವತ್ತು ನಾವು ಕೊಡತಕ್ಕ 154 ಕೋಟಿ ರೂಪಾಯಿಗಳು ಏನಿದೆ ಅದನ್ನು ಈ ಸಭೆಯಲ್ಲಿ ಓಟಿಗೆ ಹಾಕಿ ಈ ಸಭೆಯ ಬೆಂಬಲ ಪಡೆದ ಮೇಲೆ ಆ ಹಣವನ್ನು ಎಷ್ಟರಮಟ್ಟಿಗೆ ಇವರು ಖರ್ಚು ಮಾಡುತ್ತಾರೆಂಬುದನ್ನು ನೋಡುವುದು ಮುಖ್ಯ. ಏಕೆಂದರೆ ತೆರಿಗೆದಾರರು ಎಷ್ಟೋ ಕಷ್ಟಪಟ್ಟು ಈ ಹಣವನ್ನು ಸರ್ಕಾರದ ಖಜಾನೆಗೆ ತುಂಬುತ್ತಾರೆ. ಮಂತ್ರಿಗಳ ಗಮನ ಆ ಕಡೆಗೆ ಏಕೆ ಹೋಗುತ್ತಿಲ್ಲವೋ ಎಂದು ನಾನು ಬಹಳ ನೊಂದ ಮನಸ್ಸಿನಲ್ಲಿ ಹೇಳುತ್ತೇನೆ. ಬಡಜನರು ಕೊಟ್ಟಂತಹ ಹಣ ವ್ಯಥಾ ದುರ್ವ್ಯಯವಾಗಬಾರದು. ಅದರ ಬಗ್ಗೆ ಮಂತ್ರಿಗಳು ಗಮನ ಹರಿಸತಕ್ಕ ಆಸಕ್ತಿ ಈ ಸರ್ಕಾರಕ್ಕೆ ಇಲ್ಲವೆಂದು ಹೇಳಿದರೆ ಏನೂ ತಪ್ಪಾಗಲಾರದು. ಇವರಿಗೆ ಈ ಸಭೆಯ ಮುಂದೆ ಮಂಡಿಸಿದಂತಹ ಬಡ್ಜೆಟ್ಟಿಗೆ ಈ ಸಭೆಯ ಒಪ್ಪಿಗೆ ಕೊಟ್ಟ ಮೇಲೆ ಇನ್ನು ಇವರನ್ನು ಮಾತನಾಡಿಸತಕ್ಕ ಅಸ್ತ್ರ ಬೇರೆ ಯಾವುದೂ ಇಲ್ಲವೆಂದು ನಾನು ತಿಳಿದಿದ್ದೇನೆ. ಇವತ್ತೂ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ನೋಡಿದರೆ ಸರ್ಕಾರ ಎಷ್ಟರಮಟ್ಟಿಗೆ ಕೊಟ್ಟಿದ್ದ ಹಣವನ್ನು ಸರಿಯಾದ ವಿವೇಚನೆ ಇಲ್ಲದೆ, ವಿಚಕ್ಷಣೆ ಇಲ್ಲದೆ ಖರ್ಚು ಮಾಡಿರುವ ಬಗ್ಗೆ ಸರ್ಕಾರದ ಅಧಿಕಾರಿಗಳು ಅಲ್ಲಿ ಕೊಡತಕ್ಕ ವಿವರಗಳಿಂದ ಚೆನ್ನಾಗಿ ನಮಗೆ ಗೊತ್ತಾಗುತ್ತದೆ, ಎಷ್ಟೇ ಕಠಿಣವಾದರೂ ನಿಜಸ್ಥಿತಿಯನ್ನು ಆ ಕಮಿಟಿ ಮುಂದೆ ಇಟ್ಟಾಗ ಅವರು ಶಿಫಾರ್ಸುಗಳನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ, ಇವರು ಅವರ ವರದಿಯ ಶಿಫಾರ್ಸುಗಳ ಪ್ರಕಾರ ಎಗ್ಸಿಕ್ಯೂಟಿವ್ ಅಧಿಕಾರಿಗಳ ಮೇಲೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಆದರೆ ಈಗಾಗಲೇ ಬಂದಿರತಕ್ಕ ಅನುಭವದಿಂದ ಆ ಕಮಿಟಿಯ ಶಿಫಾರ್ಸುಗಳಿಗೆ ಸರಿಯಾದಂಥ ಮಾನ್ಯತೆ ಸರ್ಕಾರದಿಂದ ದೊರೆತಿಲ್ಲವೆಂದು ನಾನು ತಿಳಿದಿದ್ದೇನೆ.

ಆದ್ದರಿಂದ ಇವೊತ್ತು ರೈತನ ಹಣ, ತೆರಿಗೆದಾರನ ಹಣ ಒಂದೊಂದು ರೂಪಾಯಿಯೂ ಕೂಡ ಸರಿಯಾದ ರೀತಿಯಲ್ಲಿ ವಿನಿಯೋಗವಾಗಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಚುನಾವಣೆಯ ವರ್ಷ. ತಮಗೂ ಆಸಕ್ತಿ ಇದೆ. ಆದರ ಜೊತೆಗೆ ನಮ್ಮ ಹತ್ತಿರ ಎಲ್ಲರೂ ಬಂದು ಕಾಡುತ್ತಾರೆ. ಆದ್ದರಿಂದ ತಾವು ಖರ್ಚು ಮಾಡತಕ್ಕ ಪ್ರತಿಯೊಂದು ರೂಪಾಯಿಯನ್ನೂ ಬಹಳ ಮುಂಜಾಗರೂಕತೆಯಿಂದ ವೆಚ್ಚವನ್ನು ನಿರ್ವಹಿಸಬೇಕು. ಇಲ್ಲದೇ ಹೋದರೆ ತಮ್ಮ ಅಭಿಪ್ರಾಯ ಏನಿದೆ, ತಮ್ಮ ಉದ್ದೇಶ ಏನಿದೆ ಅದು ಈಡೇರುವುದಿಲ್ಲ ಎಂದು ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಈ ಆಯವ್ಯಯ ಪಟ್ಟಿಯಲ್ಲಿ ಮೈಸೂರು ಸಂಸ್ಥಾನದ ಒಂದು ಸ್ಥೂಲವಾದ ಹಣಕಾಸಿನ ಪರಿಸ್ಥಿತಿಯನ್ನು ತಾವು ಇಟ್ಟಿದ್ದೀರಿ. ಇದರಲ್ಲಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಹಣವನ್ನು ಖರ್ಚು ಮಾಡತಕ್ಕ ಬಗ್ಗೆ ಪ್ಲಾನಿಂಗ್ ಕಮಿಷನ್ನಿನವರು 537 ಕೋಟಿ ರೂಪಾಗಳ ಡ್ರಾಫ್ಟನ್ನು ಕೊಟ್ಟಿದ್ದಾರೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೇಜರ್ ಮತ್ತು ಮೀಡಿಯಂ ಇರಿಗೇಷನ್ನಿಗಾಗಿ 86 ಕೋಟಿ ರೂಪಾಯಿಗಳನ್ನೂ, ವಿದ್ಯುಚ್ಛಕ್ತಿಗಾಗಿ 106 ಕೋಟಿ ರೂಪಾಯಿಗಳನ್ನೂ ಒದಗಿಸಿದ್ದಾರೆ. ಇವೊತ್ತಿನ ದಿವಸ ಮೇಜರ್ ಮತ್ತು ಮೀಡಿಯಂ ಇರಿಗೇಷನ್ನಿಗೆ ಕಡಿಮೆ ಹಣವನ್ನು ಒದಗಿಸಿ ಪವರ್ ಪ್ರಾಜೆಕ್ಟಿಗೆ 106 ಕೋಟಿ ರೂಪಾಯಿಗಳನ್ನೂ ಒದಗಿಸತಕ್ಕ ಅವಶ್ಯಕತೆ ಏನಿದೆ ಎಂದು ನಾನು ಕೇಳುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗತಕ್ಕ ಪವರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಮಗೆ ಶಕ್ತಿ ಇಲ್ಲ. ಪಕ್ಕದ ಸಂಸ್ಥಾನಗಳಿಗೆ ನಮ್ಮ ಪವರನ್ನು ಕೊಡುತ್ತಿದ್ದಾರೆ. ಹೀಗಿರುವಾಗ ಅಡಿಷನಲ್ ಪವರ್ ಜನರೇಟ್ ಮಾಡತಕ್ಕ ಪ್ರಾಜೆಕ್ಟುಗಳನ್ನು ಈಗ ಕಟ್ಟತಕ್ಕ ಅವಶ್ಯಕತೆ ಇಲ್ಲ. ಇದನ್ನು 10ವರ್ಷ ಮುಂದೆ ಹಾಕುವುದು ಒಳ್ಳೆಯದು. ಪವರ್ ಪ್ರಾಜೆಕ್ಟುಗಳನ್ನು ಕಟ್ಟುವುದನ್ನೂ ಮತ್ತು ರೂರಲ್ ಎಲೆಕ್ಟ್ರಿಫಿಕೇಷನ್ ಅನ್ನು ಇನ್ನು 10 ವರ್ಷ ಮುಂದೂಡಿದರೆ ಅದರಿಂದ ಏನೂ ತೊಂದರೆ ಆಗುವುದಿಲ್ಲ. ಅದಕ್ಕೆ ಒದಗಿಸಿರತಕ್ಕ 106 ಕೋಟಿ ರೂಪಾಯಿಗಳನ್ನು ಮತ್ತು ಈಗ ಮೀಡಿಯಂ ಮತ್ತು ಮೇಜರ್ ಇರಿಗೇಷನ್ನಿಗೆ ಒದಗಿಸಿರತಕ್ಕ 86 ಕೋಟಿ ರೂಪಾಯಿಗಳನ್ನೂ ಎಂದರೆ 192 ಕೋಟಿ ರೂಪಾಯಿಗಳನ್ನು ಮೇಜರ್ ಮತ್ತು ಮೀಡಿಯಂ ಇರಿಗೇಷನ್ನಿಗೆ ಖರ್ಚು ಮಾಡಿದರೆ ಅದನ್ನು ನಾನು ಸ್ವಾಗತಿಸುತ್ತೇನೆ. ಮಾನ್ಯ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ಇದನ್ನು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಪಬ್ಲಿಕ್ ವರ್ಕ್ಸ್ ಶಾಖೆಯ ಡಿಮ್ಯಾಂಡ್ ಈ ಸಭೆಯ ಮುಂದೆ ಬಂದಾಗ ನಾನು ಇದರ ಬಗ್ಗೆ ಮಾತನಾಡುತ್ತೇನೆ. ಕಾವೇರಿ ಬೇಸಿನ್‌ನಲ್ಲಿರತಕ್ಕ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವ

(ಶ್ರೀ ಎಚ್. ಡಿ. ದೇವೇಗೌಡ)

ಬಗ್ಗೆ ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಇದರ ಬಗ್ಗೆಯೂ ದಿವ್ಯಾಂಡಿನ ಮೇಲೆ ಮಾತನಾಡುತ್ತೇನೆ. ಇವೊತ್ತು ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ನಾವು ಉಪಯೋಗಿಸಿ ಕೊಳ್ಳುವುದಕ್ಕೆ ನಮ್ಮಲ್ಲಿ ಸಾಕಷ್ಟು ಸಾಮರ್ಥ್ಯವಿಲ್ಲ. ಆದ್ದರಿಂದ ಪವರ್ ಪ್ರಾಜೆಕ್ಟುಗಳನ್ನು ಕಟ್ಟುವುದನ್ನು ಮತ್ತು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದನ್ನು ಮುಂದೂಡಿದರೆ ಏನೂ ಆಗುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಏತಕ್ಕೆಂದರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶರಾವತಿಯ ಎರಡು ಮತ್ತು ಮೂರನೇಯ ಸ್ಟೇಜನ್ನು ಮುಗಿಸಬೇಕು. ಅದಕ್ಕೆ ಬೇಕಾಗತಕ್ಕಂಥ ಮೆಷಿನರಿಗೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಅಪರಲ್ಲಿ ಎಷ್ಟು ವಿದ್ಯುಚ್ಛಕ್ತಿ ಉತ್ಪಾದನೆ ಯಾಗುತ್ತದೆಯೋ ಅದನ್ನ ನಾವು ಉಪಯೋಗ ಮಾಡಿಕೊಳ್ಳಬೇಕಾದರೆ ಮತ್ತು ಹೆಚ್ಚಾದ ವಿದ್ಯುಚ್ಛಕ್ತಿಯನ್ನ ಬೇಕಾದ ಕಡೆಗೆ ಸಾಗಿಸಲು ಸಾವಿರಾರು ಮೈಲಿ ಟ್ರಾನ್ಸಿಮಿಷನ್ ಲೈನು ಹಾಕ ಬೇಕಾಗುತ್ತದೆ. ಸ್ಟೆಪ್‌ಡೌನ್ ಸ್ಟೇಷನ್‌ಗಾಗಿ ಟ್ರಾನ್ಸ್‌ಫಾರ್ಮರ್ ಅನ್ನು ತರಿಸಬೇಕಾಗು ತ್ತದೆ. ಇದರ ಜೊತೆಗೆ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನ ಒದಗಿಸಲು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೇವೆ. ಅದಕ್ಕೋಸ್ಕರ 102 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿ ದ್ದೇವೆ. ಒಂದು ವೇಳೆ ಇದರಲ್ಲಿ ಏನಾದರೂ ಹಣ ಉಳಿದರೆ ಮತ್ತು ಕೇಂದ್ರ ಸರ್ಕಾರದವರೇ ನಾದರೂ ಹೆಚ್ಚಿನ ನೆರವನ್ನ ನೀಡಿದರೆ ಹೊಸ ಪವರ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಮಾನ್ಯ ಮಂತ್ರಿಗಳು ಕೊಟ್ಟಂತಹ ವಿವರಣೆಯಿಂದ ಹೊಸ ಪವರ್ ಪ್ರಾಜೆಕ್ಟ್‌ಗಳನ್ನ ತೆಗೆದುಕೊಳ್ಳತಕ್ಕದ್ದನ್ನು ಇದರಲ್ಲಿ ಅಳವಡಿಸಿಲ್ಲ ಎಂದು ಗೊತ್ತಾ ಯಿತು. ಈಗ ನಮ್ಮ ರಾಜ್ಯದಲ್ಲಿ ಉತ್ಪತ್ತಿ ಆಗತಕ್ಕಂಥ ವಿದ್ಯುಚ್ಛಕ್ತಿಯನ್ನು ಮಾತ್ರ ಉಪಯೋಗ ಮಾಡತಕ್ಕ ಬಗ್ಗೆ ಸಮರ್ಪಕವಾದ ಒಂದು ಯೋಜನೆಯನ್ನು ಹಾಕಿಕೊಂಡು ಅದನ್ನು ಕಾರ್ಯಗತ ಮಾಡಬೇಕು. ಅಂತೂ ಒಟ್ಟಿನಲ್ಲಿ ಮೇಜರ್ ಮತ್ತು ಮೀಡಿಯಂ ಇರಿಗೇಷನ್ನಿಗೆ ಹೆಚ್ಚಿನ ಹಣವನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿಲ್ಲ. ಈ ವರ್ಷದ ಬಡ್ಜೆಟ್ಟಿನಲ್ಲಿ ದೇಶದ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟ ಮೀಡಿಯಂ ಮತ್ತು ಮೇಜರ್ ಇರಿಗೇಷನ್ನಿಗೆ ಹೆಚ್ಚಿನ ಹಣವನ್ನು ಒದಗಿಸದೆ ನಾವು ಉಳಿತಾಯದ ಬಡ್ಜೆಟ್ಟನ್ನು ಮಂಡಿಸಿದ್ದೇವೆ ಎಂದು ಹೇಳತಕ್ಕ ಒಂದು ವಾದ ಏನಿದೆ ಅದು ಸರಿಯಾದುದಲ್ಲ. ಒಂದು ವೇಳೆ ಖೋತಾ ಬಡ್ಜೆಟ್ಟನ್ನು ಮಂಡಿಸಿದ್ದರೂ ಚಿಂತೆ ಯಿರಲಿಲ್ಲ, ಆದರೆ ದೇಶದ ಅಭಿವೃದ್ಧಿಕಾರ್ಯಗಳಿಗೆ ಹೆಚ್ಚಿನ ಹಣವನ್ನು ಒದಗಿಸಿದ್ದರೆ ನಾನು ಈ ಬಡ್ಜೆಟ್ಟನ್ನು ಸ್ವಾಗತ ಮಾಡುತ್ತಿದ್ದೆ ಎಂದು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ನಮ್ಮ ರಾಜ್ಯದ ಋತುಮಾನ ಪರಿಸ್ಥಿತಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಈ ವರ್ಷ ಋತುಮಾನ ಪರಿಸ್ಥಿತಿ ವಿಷಯದಲ್ಲಿ ಬಹಳ ಕಠಿಣವಾದ ಪರಿಸ್ಥಿತಿ ಇದ್ದುದರಿಂದ ನಾವು ಅನೇಕ ದುಷ್ಪರಿಣಾಮಗಳನ್ನು ಎದುರಿಸಬೇಕಾಗಿದೆ ಎಂದು ಹೇಳಿದ್ದಾರೆ. ಯೋಜನಾ ಆಯೋಗದ ಕೆಲವು ಅಧಿಕಾರಿಗಳು ನಮ್ಮ ರಾಜ್ಯಕ್ಕೆ ಬಂದು ಅಭಾವ ಪರಿಸ್ಥಿತಿ ಉಂಟಾಗಿರುವ ಕೆಲವು ಸ್ಥಳಗಳಿಗೆ ಭೇಟಿ ಕೊಟ್ಟು ಆ ಸಂಬಂಧದಲ್ಲಿ ಒಂದು ವರದಿಯನ್ನು ಅವರು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ವಿಷಯವನ್ನು ಪತ್ರಿಕೆಗಳಲ್ಲಿ ಕೂಡ ಓದಿದ್ದೇವೆ. ಆ ಯೋಜನಾ ಆಯೋಗದ ಕೆಲವು ಅಧಿಕಾರಿ ಗಳು ನಮ್ಮ ರಾಜ್ಯಕ್ಕೆ ಬಂದು ಇಲ್ಲಿ ಅಭಾವ ಪರಿಸ್ಥಿತಿ ಉಂಟಾಗಿರತಕ್ಕ ಪ್ರದೇಶಗಳಿಗೆ ಭೇಟಿ ಕೊಟ್ಟು ಸಂದರ್ಶಿಸಿ ವರದಿ ಮಾಡಿರುವ ಬಗ್ಗೆ ನಾವು ಸ್ವಲ್ಪ ಕಠಿಣವಾಗಿ ಟೀಕೆ ಮಾಡ ಬೇಕಾಗುತ್ತದೆ. ಏತಕ್ಕೆಂದರೆ ಆಯೋಜನಾ ಆಯೋಗದ ಅಧಿಕಾರಿಗಳು ನಮ್ಮ ಜಿಲ್ಲೆಗೆ ಕೂಡ ಬರುತ್ತಾರೆ ಎನ್ನುವ ಟೂರ್ ಪ್ರೋಗ್ರಾಮನ್ನು ನಮ್ಮಗೆ ಕೊಟ್ಟಿದ್ದರು ಅವರು ಸುಮಾರು ಎಂಟು ಜಿಲ್ಲೆಗಳನ್ನು ಒಂದೇ ದಿವಸದಲ್ಲಿ ಪ್ರವಾಸಮಾಡಿದ್ದಾರೆ. ಆ ಯೋಜನಾ ಆಯೋಗದ ಅಧಿಕಾರಿ ಗಳ ತಂಡದಲ್ಲಿ 18 ವರ್ಷದ ಆಡಳಿತದ ಅನುಭವವನ್ನು ಪಡೆದಿರುವವರು ಇದ್ದಾರೆ. ಒಂದೇ ದಿವಸದಲ್ಲಿ ಎಂಟು ಜಿಲ್ಲೆಗಳಿಗೆ ಪ್ಲೈಯಿಂಗ್ ವಿಸಿಟ್ ಅನ್ನು ಏನಾದರೂ ಕೊಟ್ಟಿ ದ್ದಾರೇನೋ ಎಂದು ಕಾಣುತ್ತದೆ. ಏತಕ್ಕೆಂದರೆ ಒಂದೇ ದಿವಸದಲ್ಲಿ ಮಂಡ್ಯ, ಹಾಸನ ಮೈಸೂರು, ಚಿಕ್ಕಮಗಳೂರು ಮುಂತಾದ 8 ಜಿಲ್ಲೆಗಳನ್ನ ಪ್ರವಾಸಮಾಡಿದ್ದಾರೆ. ಕೇವಲ ಒಂದು ದಿವಸದಲ್ಲಿ 8 ಜಿಲ್ಲೆಗಳಲ್ಲಿರತಕ್ಕ ಯಾವ ತರಹ ನಿಜಪರಿಸ್ಥಿತಿಯನ್ನು ಅರಿತುಕೊಳ್ಳುವುದಕ್ಕೆ ಸಾಧ್ಯ ವಾಗುತ್ತದೆ ಎಂದು ನಾನು ಪ್ರಶ್ನೆಮಾಡುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಕ್ಷಾಮ ಪರಿಸ್ಥಿತಿ

ಅಷ್ಟೊಂದು ಇಲ್ಲ ಎಂದು ಆ ಯೋಜನಾ ಆಯೋಗದ ಅಧಿಕಾರಿಗಳು ಕೇಂದ್ರಸರ್ಕಾರಕ್ಕೆ ವರದಿಯನ್ನು ಕೊಡುವುದಾದರೆ ಅದಕ್ಕಿಂತ ಸತ್ಯಕ್ಕೆ ದೂರವಾದ ವಿಚಾರ ಮತ್ತೊಂದಿಲ್ಲ. ಪತ್ರಿಕೆಗಳಲ್ಲಿ ಬಂದಂತಹ ವಿಚಾರಗಳನ್ನು ನೋಡಿ ನಾನು ಹೇಳುತ್ತಿದ್ದೇನೆ. ಅವರು ಇಲ್ಲಿನ ನಿಜವಾದ ಪರಿಸ್ಥಿತಿಯನ್ನು ಅರಿತು ನಿಜವಾದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೋ ಏನೋ ನನಗೆ ಗೊತ್ತಿಲ್ಲ. ಆ ವಿಚಾರವನ್ನು ಸರ್ಕಾರದವರು ತಿಳಿಸಿದರೆ ನನಗೆ ಇರತಕ್ಕ ಅನುಮಾನ ಮತ್ತು ಆತಂಕ ಬಗೆಹರಿಯುತ್ತದೆ. ಒಂದು ವೇಳೆ ಅವರು ಮೈಸೂರು ಸಂಸ್ಥಾನದಲ್ಲಿ ಅಷ್ಟೊಂದು ಕ್ಷಾಮ ಇಲ್ಲ ಎಂದು ಏನಾದರೂ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದರೆ ಅದು ನಿಜವಾಗಿಯೂ ದುರ್ದೈವ. ಆ ಅಧಿಕಾರಿಗಳನ್ನು ಈ ಸಭೆ ಖಂಡಿಸಬೇಕಾಗುತ್ತದೆ. ಯೋಜನಾ ಆಯೋಗದ ಅಧಿಕಾರಿಗಳ ತಂಡದವರು ನಮ್ಮ ರಾಜ್ಯದಲ್ಲಿರತಕ್ಕ ಅಭಾವ ಪರಿಸ್ಥಿತಿಯ ಬಗ್ಗೆ ನಿಜಸ್ಥಿತಿಯನ್ನು ಅರಿಯದೆ, ಅಭಾವ ಪೀಡಿತ ಪ್ರದೇಶಗಳಿಗೆ ಕೇವಲ ಫ್ಲೈಯಿನ್ ವಿಸಿಟ್ ಕೊಟ್ಟು ನಾವು ದೇಶಾದ್ಯಂತ ಪ್ರವಾಸಮಾಡಿದ್ದೇವೆ. ತಮ್ಮ ಒಂದು ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದ್ದೇವೆ ಇಲ್ಲಿ ಅಷ್ಟೇನು ಕ್ಷಾಮ ಪರಿಸ್ಥಿತಿಯಿಲ್ಲ ಎಂದು ಅವರು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿರುವುದಾದರೆ ಈ ಅಭಾವ ಪರಿಸ್ಥಿತಿಯ ಬಗ್ಗೆ ಕೇಂದ್ರ ಸರ್ಕಾರದಿಂದ ನಾವು ನೆರವನ್ನು ನಿರೀಕ್ಷಣೆ ಮಾಡಿದ್ದೇವೋ ಅದು ದೊರೆಯುವುದಿಲ್ಲ ಎಂದು ನಾನು ಸಂಕಟದಿಂದ ಹೇಳುತ್ತೇನೆ. ಹಾಗೇನಾದರೂ ಅವರ ಅಭಿಪ್ರಾಯ ಕೊಟ್ಟಿದ್ದರೆ ಅದು ಖಂಡಿತವಾಗಿ ಸರಿಯಾದುದಲ್ಲ ಎಂದು ಇಲ್ಲಿ ವಿಷಾದದಿಂದ ತಿಳಿಸಲು ಇಚ್ಛೆಪಡುತ್ತೇನೆ.

ಇನ್ನು ಆಹಾರದ ವಿಷಯದಲ್ಲಿ ಹೇಳುವಾಗ, ಬಹಳ ಗುರುತರವಾದ ಮತ್ತು ಮಹತ್ವವಾದ ವಿಚಾರಗಳನ್ನು ಇಲ್ಲಿ ಯೋಚನೆ ಮಾಡುವುದು ಅವಶ್ಯಕ. ಸಾಕಷ್ಟು ಮಟ್ಟಿಗೆ ಸಾಧ್ಯವಾದಮಟ್ಟಿಗೆ ನಾವು ಇದರಲ್ಲಿ ಸಫಲತೆಯನ್ನು ಪಡೆಯಲು ಪ್ರಯತ್ನ ಮಾಡಿದ್ದೇವೆ ಎಂದು ಇಲ್ಲಿನ ಸನ್ನಿವೇಶಗಳಿಗನುಸಾರವಾಗಿ ಕೆಲವು ಅಂಕಿ ಅಂಶಗಳನ್ನು ಮಾನ್ಯ ಆಹಾರ ಸಚಿವರು ಇಲ್ಲಿ ಕೊಟ್ಟಿದ್ದಾರೆ. ಇವೊತ್ತಿನ ಸ್ಥಿತಿ ಏನಾಗಿದೆ ಎಂದರೆ, ನೀವು ಕೊಡತಕ್ಕ ಅಡ್ ಹಾಕ್ ಬೇಸಿಸ್ ಎನ್ನುವುದು ಕರಾರುವಾಕ್ಕಾಗಿ ಸರಿಯಾದ ಪರಿಸ್ಥಿತಿಗಳನ್ನು ಅರಿತು ಮಾಡಿರುವುದಲ್ಲ. ದೇಶದ ಪರಿಸ್ಥಿತಿಯನ್ನು ಅರಿತು ನೋಡುವುದಾದರೆ ನಾವು ಸರಿಯಾದ ಮಾರ್ಗದಲ್ಲಿ ಹೋಗುತ್ತಿಲ್ಲ ಎನ್ನುವುದು ಅರಿವಾಗಿದೆ ಎಂದು ತೋರುತ್ತದೆ. ನೀವು ಮಾಡಿರುವ ಕೋ-ಅಪರೇಟೀವ್ ಇನ್‌ಸ್ಟಿಟ್ಯೂಷನ್ನುಗಳು ಸರಿಯಾಗಿ ಉತ್ತಮವಾದ ರೀತಿಯಲ್ಲಿ ನಡೆಯುತ್ತಿಲ್ಲ. ಆಹಾರ ಪದಾರ್ಥಗಳ ಸರಿಯಾದ ವಿತರಣೆ ನಡೆಯುತ್ತಿಲ್ಲ. ಹೀಗೆ ವಿತರಣೆ ಇಲ್ಲದೇ ಇರುವುದರಿಂದ ಕಳ್ಳಸಾಗಾಣಿಕೆಗೆ ಅವಕಾಶ ಮಾಡಿಕೊಟ್ಟಂತಹ ಅನೇಕ ನಿದರ್ಶನಗಳು ನಮ್ಮ ಮುಂದೆ ಇವೆ. ಅಡ್‌ಹಾಕ್ ಬೇಸಿಸ್ ಎಂದು ನೋಡಿ ತಾವು ಹಂಚುವಾಗ ಸರಿಯಾಗಿ ವಿತರಣೆಯಾಗುತ್ತಿಲ್ಲ. ಈಗೇನೋ ನಗರ ಪ್ರದೇಶಗಳಲ್ಲಿ ಮತ್ತು ಇತರ ದೊಡ್ಡ ಸಿಟಿಗಳಲ್ಲಿ ಸ್ಟ್ಯಾಟುಟರಿ ರೇಷನಿಂಗು ತರಬೇಕೆಂದು ಮತ್ತು ಇದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಇದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿಯೂ ತರಬೇಕು ಮತ್ತು ನಿಮ್ಮ ಇಲಾಖಾಧಿಕಾರಿಗಳ ಮನೋಭಾವನೆ ಈ ದಿಸೆಯಲ್ಲಿ ಹೋಗುತ್ತಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ತಾವೇನೋ ಒಂದು ರೇಟು ಎಂದು ನಿಗದಿ ಮಾಡುತ್ತೀರಿ. ಆದರೆ ಇದರಲ್ಲಿ ನಿಮ್ಮ ನೀತಿ ಬಹಳ ಅಸ್ತವ್ಯಸ್ತವಾಗಿ ಹೋಗುತ್ತಿದೆ ಎಂದು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ದಿನ ನಮ್ಮ ಮಾನ್ಯ ಆಹಾರ ಸಚಿವರಾದ ಶ್ರೀಮಾನ್ ಜತ್ತಿಯವರು ಆಹಾರದ ಚರ್ಚೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ಲೆವಿ ರೇಟಿಗೂ ಮತ್ತು ಅದನ್ನು ಮಾರುವ ರೇಟಿಗೂ ಬಹಳ ವ್ಯತ್ಯಾಸ ಇದೆ. ಇದರಿಂದ ಕನ್‌ಸ್ಯೂಮರು ಇವೊತ್ತು 22 ರೂಪಾಯಿಗಳಷ್ಟು ಹೆಚ್ಚಾಗಿ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಇದನ್ನು ವ್ಯವಹಾರ ಮಾಡತಕ್ಕ ಫುಡ್ ಕಾರ್ಪೊರೇಷನ್ ಇಲಾಖೆ ಅವರ ಏಜನ್ಸಿಗಳ ಕಾರ್ಯನಿರ್ವಹಣೆಗಳಿಗೋಸ್ಕರ ಎಂದು 22 ರೂಪಾಯಿಗಳಷ್ಟು ಹೆಚ್ಚು ಬೆಲೆಯನ್ನು ಪದಾರ್ಥವನ್ನು ಕೊಳ್ಳುವ ಕನ್‌ಸ್ಯೂಮರ್ ಹೊರಬೇಕಾಗಿ ಬಂದಿದೆ. ಇದರ ಅವಶ್ಯಕತೆಯಾದರೂ ಏನಿದೆ ? ದಿನೇ ದಿನೇ ಇವೊತ್ತು ಹೊಸ ಸೆಂಟರುಗಳು ಎಂದು ತೆರೆದು ಅದಕ್ಕೆ ನಾಲ್ಕು ಜೀಪುಗಳು ಹಾಗೂ ಇತರ ಅಧಿಕಾರಿಗಳನ್ನು ನೇಮಿಸಿಕೊಂಡು ಇದಕ್ಕಾಗಿ ಖರ್ಚು ಹೆಚ್ಚಾಗಿದೆ ಎಂದು ಹೇಳಿಕೊಳ್ಳುವವರ ಮೇಲೆ ಸುಮಾರು 22 ರೂಪಾಯಿಗಳಷ್ಟು ಹೆಚ್ಚು ಹೊರೆಯನ್ನು ಹೊರುವಂತೆ ಮಾಡುವುದು ಇದೆಂತಹ ನೀತಿ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಕೇಂದ್ರ ಸರಕಾರದವರು ಆಹಾರದ ವಿತರಣೆ ಮಾಡುವಾಗ ರಾಜ್ಯ ಸರಕಾರದ ಒಂದು ನೀತಿ ನಿಯಮಗಳ ಮೇಲೆ ನಿರ್ವಹಣೆ ಮಾಡಬೇಕೆಂದು ತಿಳಿಸಿದ್ದಾರೆ. ತಾವೂ ಕೂಡ ಕೇಂದ್ರ ಸರಕಾರದವರು ಮಾಡಿರುವ ಪಾಲಿಸಿ ಮತ್ತು ಅದರಿಂದಾಗತಕ್ಕ ಪರಿಣಾಮವೇನು ಎನ್ನುವುದನ್ನು ಯೋಚನೆ ಮಾಡಬೇಕು. ಇಲ್ಲಿ ಹೀಗೆ ಭ್ರಷ್ಟಾಚಾರವಾಗುತ್ತಿದ್ದರೂ ಇದನ್ನು ಗಣನೆಗೆ ತೆಗೆದುಕೊಳ್ಳದೆ ಸುಮ್ಮನೆ ಕನ್‌ಸ್ಯೂಮರ್ ಮೇಲೆ ಹೆಚ್ಚಿನ ಹೊರೆಯನ್ನು ಹಾಕುವುದು ಸರಿಯಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

(ಶ್ರೀ ಹೆಚ್. ಡಿ. ದೇವೇಗೌಡ)

ಸ್ವಾಮಿ, ಜಿ.ಎ.ಡಿ. ಬಗ್ಗೆ ಹೇಳುವಾಗ ನೀವು ಮಾಡಿರುವ ಕೇಡರು ಹಾಗೂ ರೆಕ್ರೂಟುಮೆಂಟು ನಿಯಮಗಳನ್ನು ಅನುಸರಿಸಿ ರೂಲ್ಸನಂತೆ ಯಾವ ಅಧಿಕಾರಗಳಿಗೆ ಸೌಲಭ್ಯ ಕೊಡಬೇಕೋ ಅದನ್ನು ಕೊಡದೇ ಮೊಟಕು ಮಾಡುತ್ತಿದ್ದಾರೆ. ಇದರಿಂದೇನಾಗಿದೆ ಎಂದರೆ, ಸರಕಾರ ಯಾವ ಅಧಿಕಾರಿಗಳನ್ನಾದರೂ ಸರಿಯೇ ಅವರನ್ನು ನಿಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವೊತ್ತಿನ ದಿನ ಯಾವ ನಾನ್ ಗೆಜಟೆಡ್ ಅಧಿಕಾರಿಗಳೇ ಆಗಲಿ ಗೆಜೆಟೆಡ್ ಅಧಿಕಾರಿಗಳೇ ಆಗಲೀ, ಸರಕಾರಕ್ಕೆ ಅಂಜಿ ನಡೆಯುತ್ತಿಲ್ಲ. ಲಂಚವಿಲ್ಲದೆ ಯಾವ ವ್ಯವಹಾರಗಳೂ ಆಗುತ್ತಿಲ್ಲ. ಪ್ರತಿಯೊಂದೂ ಲಂಚವಿಲ್ಲದೆ ಯಾವ ಹಂತವನ್ನೂ ಮುಟ್ಟುವುದಿಲ್ಲ. ಕೆಲವರು ನಿಷ್ಠಾವಂತ ಅಧಿಕಾರಿಗಳಿದ್ದಾರೆ. ಆದರೆ ಅಂತಹ ಅಧಿಕಾರಿಗಳ ಸಂಖ್ಯೆ ಬಹು ಕಡಿಮೆ. ಈಗಿನ ಸರಕಾರದಲ್ಲಿ ಭ್ರಷ್ಟಾಚಾರಗಳಿಗೆ ಸಿಕ್ಕಿರತಕ್ಕ ಅಧಿಕಾರಿಗಳು ಈಗಿನ ಒಂದು ಚೌಕಟ್ಟಿನಲ್ಲಿ ಕಾನೂನಿನ ಒಂದು ಷೆಲ್ಟರ್ ಮಾಡಿಕೊಂಡು ಅವರಿಗೆ ದೊರೆಯಬೇಕಾದ ಸವಲತ್ತುಗಳು ಸಿಗಲಲ್ಲ ಎಂದು ಮೇಲ್ಪಟ್ಟ ಅಧಿಕಾರಿಗಳಲ್ಲಿ ಭಯವೇ ಇಲ್ಲದಂತಾಗಿದೆ. ಇದಕ್ಕೆ ಕಾರಣ ಕೇಡರ್ ಮತ್ತು ರೆಕ್ರೂಟುಮೆಂಟು ರೂಲ್ಸುಗಳ ಪ್ರಕಾರ ಯಾವ ಭರವಸೆಯನ್ನು ಕೊಡಬೇಕಾಗಿತ್ತೊ ಅದನ್ನು ಕೊಡುತ್ತಿಲ್ಲ. ಇದನ್ನು ಕೊಡದೇ ಹೋದರೆ ಸರಕಾರ ಆಡಳಿತ ನಡೆಸುವುದು ಖಂಡಿತ ಸಾಧ್ಯವಿಲ್ಲ. ಆದುದರಿಂದ ಆಡಳಿತದಲ್ಲಿರುವ ಈ ಸರಕಾರಿ ಅಧಿಕಾರಿಗಳ ರೋಗವನ್ನು ಸರಿಯಾಗಿ ಬಗೆಹರಿಸದೇ ಹೋದರೆ ಇದು ಸಾಧ್ಯವಿಲ್ಲ ಎಂದು ಇಲ್ಲಿ ತಿಳಿಸಲು ಇಚ್ಛೆಪಡುತ್ತೇನೆ.

ಮಾನ್ಯ ಸಹಕಾರ ಸಚಿವರು ಈ ಸಭೆಯಲ್ಲಿ ಈಗ ಇಲ್ಲಿ ಕುಳಿತ್ತಿದ್ದಾರೆ. ನನ್ನ ಒಂದು ಪ್ರಶ್ನೆಗೆ ಇಲ್ಲಿ ಮಾನ್ಯ ಸಚಿವರು ಉತ್ತರ ಕೊಟ್ಟ ಕಾಲದಲ್ಲಿ ಸುಮಾರು 71 ರೈಸ್ ಮಿಲ್ಲುಗಳು ಆಗುತ್ತವೆ ಮತ್ತು ಇದಕ್ಕಾಗಿ ಸುಮಾರು 1.72 ಕೋಟಿ ರೂಪಾಯಿಗಳಷ್ಟು ಹಣ ನ್ಯಾಷನಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನಲ್ಲಿ ಡಿಪಾಸಿಟ್ ಆಗಿದೆ ಎಂದು ಈ ಸಭೆಯಲ್ಲಿ ತಿಳಿಸಿದರು. ಇಷ್ಟು ವರ್ಷಗಳ ಕಾಲ ಈ ಹಣವನ್ನು ಇಲ್ಲಿ ಡಿಪಾಸಿಟ್ಟು ಮಾಡಿದುದರಿಂದ ಸರಕಾರಕ್ಕೆ ಬಂದಿರುವ ಡಿವಿಡೆಂಡ್ ಎಷ್ಟು ಎನ್ನುವುದನ್ನು ಹೇಳಲಿಲ್ಲ. ಇದನ್ನು ನಾನು ಮಾನ್ಯ ಮಂತ್ರಿಗಳ ಮೇಲೆ ಹೇಳುತ್ತಿಲ್ಲ. ನಿಮ್ಮ ಇಲಾಖಾಧಿಕಾರಿಗಳು ಯಾವ ರೀತಿಯಾಗಿ ಕೆಲಸ ಮಾಡುತ್ತಿದ್ದಾರೆನ್ನುವುದಕ್ಕೆ ಇಲ್ಲಿ ಹೇಳುತ್ತಿದ್ದೇನೆ. ನನ್ನ ಪ್ರಶ್ನೆಗೂ ಕೂಡ ಸರಿಯಾದ ಉತ್ತರವನ್ನು ಆಗ ಕೊಡಲಿಲ್ಲ ಎರಡನೇ ಪಂಚ ವಾರ್ಷಿಕ ಯೋಜನೆಯಲ್ಲಿ ಕೊಟ್ಟಿರತಕ್ಕ ಬರೀ ಜಿಲ್ಲಾಭಿವೃದ್ಧಿ ಬ್ಯಾಂಕುಗಳಲ್ಲಿ ಸಂಬಂಧಪಟ್ಟ ಏಜನ್ಸಿ ಮೂಲಕ ಡಿಪಾಸಿಟ್ಟು ಇಡಲಾಗಿದೆ. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ರೈಸ್ ಮಿಲ್ಲುಗಳಿಗಾಗಿ ನ್ಯಾಷನಲ್ ಡೆವಲಪ್‌ಮೆಂಟು ಕಾರ್ಪೊರೇಷನ್ನು ಮೂಲಕ ಡಿಪಾಸಿಟ್ಟು ಇಟ್ಟ ಹಣಕ್ಕೆ ಸರಕಾರಕ್ಕೆ ಬಂದ ಬಡ್ಡಿಯಾದರೂ ಏನು ? ಇದರ ಬಗ್ಗೆ ತಾವು ಇಲ್ಲಿ ಆಲೋಚನೆ ಮಾಡಬೇಕು. ನೀವು ಕೊಟ್ಟ ಹಣಕ್ಕೆ ಸರಿಯಾದ ಫಲ ಅಥವಾ ಉತ್ಪಾದನೆ ಬರದೇ ಇದ್ದರೆ ಅದರಿಂದೇನು ಫಲ ದೊರಕಿದಂತಾಯಿತು ?

ಶ್ರೀ ಕೆ. ಪುಟ್ಟಸ್ವಾಮಿ (ಸಹಕಾರ ಶಾಖೆಯ ಮಂತ್ರಿಗಳು).—ಸರಕಾರ ನ್ಯಾಷನಲ್ ಕೋಆಪರೇಟೀವ್ ಡೆವಲಪ್‌ಮೆಂಟು ಕಾರ್ಪೊರೇಷನ್ನಿಗೆ ಹಣ ಕೊಡುವುವಾಗ ಬಹಳ ಕಡಿಮೆ ಬಡ್ಡಿಯಲ್ಲಿ ಕೊಡುತ್ತೇವೆ. ಅದರಲ್ಲೂ ಬಡ್ಡಿಯನ್ನು ಕೊಡುವಾಗ ಒಂದು ರೀತಿಯಾಗಿ ಗ್ರೇಡೆಡ್ ಆಗಿರುತ್ತದೆ. ಮೊದಲನೇ ವರ್ಷದಲ್ಲಿ ಶೇಕಡ ಎರಡರಷ್ಟು, ಎರಡನೇ ವರ್ಷದಲ್ಲಿ ಶೇಕಡಾ ಮೂರರಷ್ಟು ಆಮೇಲೆ ಶೇಕಡಾ ನಾಲ್ಕರಷ್ಟು ಎಂದು ಈ ರೀತಿಯಾಗಿ ಕೊಡುತ್ತಿರುವುದರಿಂದ ಸರಕಾರಕ್ಕೆ ಇದರಿಂದ ಯಾವ ರೀತಿಯಾದ ನಷ್ಟವೂ ಆಗುವುದಿಲ್ಲ. ಅಲ್ಲದೆ ಕೆಲಸವೇ ಪ್ರಾರಂಭವಾಗದೆ ಇರುವಾಗ ಅದರಿಂದ ಡಿವಿಡೆಂಡ್ ಏನೂ ಬರುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ತಾವೇನೋ ಇಲ್ಲಿ ನಷ್ಟವಾಗುವುದಿಲ್ಲ ಎಂದು ಹೇಳಬಹುದು. ಆದರೆ ತಾವು ಯಾವ ಉದ್ದೇಶಕ್ಕಾಗಿ ಮಾನಸರಾಗಿ ಇಲ್ಲಿ ಹಣವನ್ನು ಕೊಟ್ಟಿರೋ ಅದು ಸಫಲವಾಗಬೇಕಾದರೆ ಅಲ್ಲಿ ಕೆಲಸಗಳು ಸರಿಯಾಗಿ ಆಗಬೇಕು. ನಾನು ನನ್ನ ಸ್ವಂತ ಅನುಭವದ ಮೇಲೆ ಸಹಕಾರದ ಬಾಬಿನಲ್ಲಿ ಕೆಲಸ ಮಾಡಿರುವುದರಿಂದ ಹೇಳುವುದಾದರೆ, ಸುಮಾರು 8-9 ಸೊಸೈಟಿಗಳಿಗಾಗಿ ಹಣವನ್ನು ಸರಕಾರ ಕೊಡುವಾಗ ಅದನ್ನು ಡಿಪಾಸಿಟ್ಟಿನಲ್ಲಿಟ್ಟು ಮಾಡಿದರೆ ಅದರಿಂದ ಯಾವ ಡಿವಿಡೆಂಡು ಬರುವುದಿಲ್ಲ. ಸರಕಾರಕ್ಕೆ ಕೊಡತಕ್ಕ ಬಡ್ಡಿಯ ಹೊರೆಯನ್ನು ಸೊಸೈಟಿಗಳವರು ಹೊರಲೇ ಬೇಕಾಗುತ್ತದೆ ಎನ್ನುವುದನ್ನು ನಾನು ಇಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಇನ್ನು ಕೆಲವು ಕಡೆ ಕೋ-ಆಪರೇಟೀವ್ ರೈಸ್‌ಮಿಲ್ಸ್ ಸರಿಯಾದ ಬೇಸಿಸ್ ಮೇಲೆ ತಾವು ಇದನ್ನು ಕೊಡತಕ್ಕ ಕಾಲದಲ್ಲಿ ಎಲ್ಲೆಲ್ಲಿ ಮಂಜೂರು ಮಾಡುತ್ತೀರೋ ಅಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡದೇ ಇದರ ಪರಿಣಾಮವಾಗಿ ಕೆಲವು ಕಡೆ ಒಂದು ನಯಾ ಪೈಸಾದಷ್ಟು ಉತ್ಪತ್ತಿ ಕೂಡ ಬರುವುದಿಲ್ಲ.

ಕೆಲವು ಕಡೆ ಮಿಲ್ ಏರಿಯಾದಲ್ಲಿ ಬತ್ತವೇ ಬರುವುದಿಲ್ಲ ಎಂದು ಇಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಸಾಕಷ್ಟು ಅಧಿಕಾರಿಗಳಲ್ಲಿ ವಿಚಕ್ಷಣೆ ಇಲ್ಲದೇ ಇರುವ ಕಾರಣಗಳಿಂದಾಗಿ ನಮ್ಮ ಆರ್ಥಿಕ ಸಚಿವರು ಸಹಕಾರ ಇಲಾಖೆಗೆ ಕೊಡುವ ಹಣ ಸರಿಯಾಗಿ ವಿನಿಯೋಗವಾಗುವುದಿಲ್ಲ. ಇವೊತ್ತು ನಿಮ್ಮ ಹಣ ಕಾಸಿನ ಚೌಕಟ್ಟು 154 ಕೋಟಿಗಳಷ್ಟು ಇರಬಹುದು. ಆದರೆ ಅದರಿಂದ ಸರಿಯಾಗಿ ಅನುಕೂಲ ಗಳಾಗುತ್ತಿಲ್ಲ ಎನ್ನುವುದು ಈ ಇಲಾಖೆಯ ಮಾನ್ಯ ಮಂತ್ರಿಗಳಿಗೆ ಈಗಾಗಲೇ ಅರಿವಾಗಿರಬಹುದು. ನೀವು ಹೋದ ಕಡೆಗಳಲ್ಲೆಲ್ಲಾ ದೊಡ್ಡದಾಗಿ ಭಾಷಣ ಮಾಡುತ್ತಿರುವುದನ್ನು ನಾವೂ ಕೇಳುತ್ತಿದ್ದೇವೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ವಿಚಕ್ಷಣೆಯಿಂದ ಕಾರ್ಯ ಮಾಡಲು ಪ್ರಯತ್ನ ಮಾಡಬೇಕು ಮತ್ತು ಬರೀ ಉಪದೇಶ ಮಾಡುವುದರಿಂದ ಕಾರ್ಯ ಸಾಧ್ಯವಾಗುವುದಿಲ್ಲ. ಇದರಿಂದ ನಾವು ನಿರೀಕ್ಷಿಸಿದಷ್ಟು ಫಲ ದೊರಕುವುದಿಲ್ಲ ಎಂದು ನಾನು ಇಲ್ಲಿ ತಿಳಿಸಲು ಇಚ್ಛೆಪಡುತ್ತೇನೆ.

ಇನ್ನು ಒಂದು ಮಾತನ್ನು ಸ್ಟೇಟು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗಳ ಬಗ್ಗೆ ಇಲ್ಲಿ ಹೇಳಬೇಕು. ಈ ಸ್ಟೇಟು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗಳು ನ್ಯಾಯ ನೀತಿಯಿಂದ ನಡೆಯುತ್ತಿವೆಯೇ ಎನ್ನುವುದನ್ನು ತಾವು ಆಗಾಗ್ಗೆ ವಿಮರ್ಶೆ ಮಾಡಬೇಕು. ಕಳೆದ ಸಾಲಿನಲ್ಲಿ ನಡೆದಿರುವ ಮಾರಾಟವನ್ನು ನೋಡಿದರೆ ಸುಮಾರು ಈ ವ್ಯವಹಾರದಲ್ಲಿ ಹದಿನೇಳು ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ ಎನ್ನುವುದು ಗೊತ್ತಾಗುತ್ತದೆ. ಇದರಿಂದ ಸರಕಾರ ತನ್ನ ಆಡಳಿತವನ್ನು ಸರಿಯಾಗಿ ನಡೆಸುತ್ತಿದೆಯೋ ಇಲ್ಲವೇ ಎನ್ನುವ ಅನುಮಾನ ಬರುತ್ತಿದೆ. ಇದರ ಬಗ್ಗೆ ವಿವರಗಳನ್ನು ಸರಕಾರದಲ್ಲಿ ಕೇಳಬೇಕಾಗಿದೆ. ಇನ್ನೊಂದು ಸಹಕಾರ ಸಂಘದಲ್ಲಿ ಸುಮಾರು ಎಂಟು ಲಕ್ಷದಷ್ಟು ನಷ್ಟವಾಗಿದೆ ಎಂದು ತಿಳಿದು ಬರುತ್ತದೆ. ಹೀಗೆ ಹಣ ಇಲಾಖೆಯಲ್ಲಿ ಮಾರಾಟ ಮಾಡುವ ವ್ಯವಹಾರದಲ್ಲಿ ಸುಮಾರು 17 ಲಕ್ಷ ರೂಪಾಯಿಗಳಷ್ಟು ನಷ್ಟ ಆಗಲು ಯಾವ ಯಾವ ಅಧಿಕಾರಿಗಳು ಕಾರಣರಾಗಿದ್ದಾರೆ ಮತ್ತು ಅವರ ಮೇಲೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಇಲ್ಲಿ ಕೇಳಬೇಕಾಗಿದೆ. ಸಹಕಾರ ಇಲಾಖೆ ಈ ರೀತಿ ನಷ್ಟದಿಂದ ಕೆಲಸ ಮಾಡುತ್ತಿದ್ದರೆ ಇದರ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ತಾವು ಇಲ್ಲಿ ಸ್ವಲ್ಪ ಯೋಚನೆ ಮಾಡಬೇಕು.

ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸಿ ಮಾನ್ಯ ಅಧ್ಯಕ್ಷರನ್ನು ವಂದಿಸುತ್ತೇನೆ.

Mr. SPEAKER.—Tomorrow we are sitting at 8-30 A.M. and the understanding is that we will sit till 1-30 P.M., because there are large number of members who are participating. If the members do not want, I will adjourn the House at 12-30 P.M. Afterwards members should not complain that they had no chance.

The House will now stand adjourned to reassemble tomorrow at 8-30 A.M.

---

*The House adjourned at Six of the Clock to meet again at Thirty Minutes past Eight of the Clock on Saturday, the 5th March 1966.*

---